
ಗುರುವಾರ, ಡಿಸೆಂಬರ್ 9, 2021 | ಬೆಂಗಳೂರು | ₹ 6.00 | ಸಂಪುಟ 74| ಸಂಚಿಕೆ 340 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾ ವಾಣಿ
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆ ಕುರಿತು ಮಾಹಿತಿ ಇಲ್ಲಿ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,649	17,469	₹49,500 (ಬೆಂಗಳೂರು)	₹62,900 (ಬೆಂಗಳೂರು)	75.50

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕೂನೂರಿನಲ್ಲಿ ನಡೆದ ದುರಂತ

ಹೆಲಿಕಾಪ್ಟರ್ ಪತನ: ರಾವತ್ ಸೇರಿ 13 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕೂನೂರಿನಲ್ಲಿ ಬುಧವಾರ ಮಧ್ಯಾಹ್ನ ಭಾರತೀಯ ವಾಯುಪಡೆಯ ಎಂಐ–17ವಿ5 ಹೆಲಿಕಾಪ್ಟರ್ ಪತನ ಗೊಂಡಿತು. ಈ ದುರಂತದಲ್ಲಿ, ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ (63), ಅವರ ಪತ್ನಿ ಮಧುಲಿಕಾ, 7 ಅಧಿಕಾರಿಗಳು ಹಾಗೂ ನಾಲ್ವರು ಸಿಬ್ಬಂದಿ ಮೃತಪಟ್ಟಿದ್ದಾರೆ.

ರಾವತ್, 2019ರಲ್ಲಿ ಭಾರತದ ಸೇನಾಪಡೆಗಳ ಮೊದಲ ಮುಖ್ಯಸ್ಥರಾಗಿ ನೇಮಕಗೊಂಡಿದ್ದರು. ಬಿಪಿನ್ ರಾವತ್ ಅವರು, ಈ ಸ್ವರೂಪದ ಅಪಘಾತದಲ್ಲಿ ಮೃತಪಟ್ಟ ಸೇನೆಯ ಮೊದಲ ಅತ್ಯುನ್ನತ ಅಧಿಕಾರಿ.

ರಾವತ್ ಅವರು ವೆಲ್ಲಿಂಗ್ಟನ್‌ನಲ್ಲಿನ ರಕ್ಷಣಾ ಸೇವಾ ಸಿಬ್ಬಂದಿ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಉಪನ್ಯಾಸ ನೀಡಲು ತೆರಳುತ್ತಿದ್ದರು.

ವೆಲ್ಲಿಂಗ್ಟನ್‌ನಿಂದ 88 ಕಿ.ಮೀ. ದೂರದಲ್ಲಿರುವ ಸೂಲೂರಿಗೆ ರಾವತ್ ದಂಪತಿಯು ದೆಹಲಿಯಿಂದ ವಾಯುಪಡೆಯ ವಿಮಾನದ ಮೂಲಕ ಬುಧವಾರ ಬೆಳಿಗ್ಗೆ ಬಂದಿಳಿದಿದ್ದರು. ಅಲ್ಲಿಂದ ಹೆಲಿಕಾಪ್ಟರ್ ಮೂಲಕ ವೆಲ್ಲಿಂಗ್ಟನ್‌ಗೆ ವಾಯುಪಡೆಯ ಹೆಲಿಕಾಪ್ಟರ್‌ನಲ್ಲಿ ಹೊರಟಿದ್ದರು. ವೆಲ್ಲಿಂಗ್ಟನ್ ಹೆಲಿಪ್ಯಾಡ್‌ನಿಂದ ಕೆಲವೇ ಕಿಲೊಮೀಟರ್ ದೂರದಲ್ಲಿದ್ದಾಗ, ಕೂನೂರಿನ ಬಳಿ ಹೆಲಿಕಾಪ್ಟರ್ ಪತನವಾಗಿದೆ. ಕೂನೂರಿನ ಹೊರವಲಯದಲ್ಲಿದ್ದ ಮನೆಗಳಿಂದ ಕೆಲವೇ ಅಡಿ ದೂರದಲ್ಲಿ ಹೆಲಿಕಾಪ್ಟರ್ ನೆಲಕ್ಕೆ ಅಪ್ಪಳಿಸಿದೆ.


ಅವಘಡದಲ್ಲಿ ಬದುಕುಳಿದಿದ್ದ ಇಬ್ಬರನ್ನು ವೆಲ್ಲಿಂಗ್ಟನ್ ಸೇನಾ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಒಬ್ಬರು ಮೃತಪಟ್ಟಿದ್ದಾರೆ. ಬದುಕುಳಿದಿರುವ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರಿಗೆ ಚಿಕಿತ್ಸೆ ಮುಂದುವರೆಸಲಾಗಿದೆ.

‘ಹೆಲಿಕಾಪ್ಟರ್ ಹಾರಾಡುತ್ತಿದ್ದಾಗಲೇ ಅದಕ್ಕೆ ಬೆಂಕಿ ಹೊತ್ತಿಕೊಂಡಿತ್ತು. ನಂತರ ನೆಲಕ್ಕೆ ಅಪ್ಪಳಿಸಿತು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಹೆಲಿಕಾಪ್ಟರ್ ಪತನಕ್ಕೆ ನಿಖರ ಕಾರಣಗಳು ಪತ್ತೆಯಾಗಿಲ್ಲ. ಅವಘಡದ ಸಂಬಂಧ ವಾಯುಪಡೆಯು ಆಂತರಿಕ ತನಿಖೆಗೆ ಆದೇಶಿಸಿದೆ.


ಸಂಸದೀಯ ಸಮಿತಿ ಸಭೆ: ಅವಘಡದ ಕುರಿತು ಭದ್ರತಾ ವ್ಯವಹಾರಗಳ ಸಂಪುಟ ಸಮಿತಿಯು ಬುಧವಾರ ಸಭೆ ನಡೆಸಿದೆ.



ತಮಿಳುನಾಡಿನ ಕೂನೂರಿನಲ್ಲಿ ಬುಧವಾರ ಪತನಗೊಂಡ ಐಎಎಫ್‌ನ ಎಂಐ–17ವಿ5 ಹೆಲಿಕಾಪ್ಟರ್ ಹೊತ್ತಿ ಉರಿಯಿತು
–ಪಿಟಿಐ ಚಿತ್ರ



16-03-1958 08-12-2021



6ನೇ ಪುಟ ನೋಡಿ

ಹೊಸ ಮಾರ್ಗಸೂಚಿ, ಕಠಿಣ ಕ್ರಮ: ಇಂದಿನ ಸಭೆಯಲ್ಲಿ ನಿರ್ಧಾರ


ಅಗತ್ಯವಿದ್ದರೆ ರಾತ್ರಿ ಕರ್ಫ್ಯೂ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ರೂಪಾಂತರ ವೈರಾಣು ಓಮೈಕ್ರಾನ್ ರಾಜ್ಯದಲ್ಲಿ ಪತ್ತೆಯಾಗಿರುವುದು ಮತ್ತು ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಹೊಸ ಮಾರ್ಗಸೂಚಿ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ಬಳಿಕ ಕೋವಿಡ್ ನಿಯಂತ್ರಣದ ಹೊಸ ನಿಯಮಗಳು ರೂಪುಗೊಳ್ಳುವ ಸಾಧ್ಯತೆ ಇದೆ.

ಕೋವಿಡ್ ನಿಯಂತ್ರಣ ಕುರಿತು ಹಿರಿಯ ಅಧಿಕಾರಿಗಳ ಜತೆ ಬುಧವಾರ ಸಭೆ ನಡೆಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕೋವಿಡ್ ನಿರ್ವಹಣೆ ಹಾಗೂ ಮಾರ್ಗಸೂಚಿ ರೂಪಿಸುವ ಬಗ್ಗೆ ಸಚಿವ ಸಂಪುಟದ ಸದಸ್ಯರ ಜತೆ ಸಮಾಲೋಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

‘ಒಂದು ವೇಳೆ ರಾತ್ರಿ ಕರ್ಫ್ಯೂ ವಿಧಿಸುವ ಅಗತ್ಯವಿದ್ದರೆ ಮುಕ್ತ ಮನಸ್ಸು ಹೊಂದಿದ್ದೇವೆ. ಕೋವಿಡ್ ಸ್ಥಿತಿಗತಿಗೆ ಅನುಗುಣವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಿದ್ಧರಿದ್ದೇವೆ’ ಎಂದು ಅವರು, ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಬಸವರಾಜ ಬೊಮ್ಮಾಯಿ

‘ವಿವಿಧ ಜಿಲ್ಲೆಗಳಲ್ಲಿ ಮತ್ತು ಕ್ಲಸ್ಟರ್‌ಗಳಲ್ಲಿ ಕೋವಿಡ್ ಸ್ಥಿತಿಗತಿ ಹಾಗೂ ನಿರ್ವಹಣೆ, ಓಮೈಕ್ರಾನ್‌ನ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ ವಿವರ, ವಿವಿಧ ದೇಶಗಳಲ್ಲಿ ಓಮೈಕ್ರಾನ್ ತಳಿ ಮತ್ತು ಅದಕ್ಕೆ ನೀಡಲಾಗುತ್ತಿರುವ ಚಿಕಿತ್ಸೆಯ ಬಗ್ಗೆ ಅಧಿಕಾರಿಗಳಿಂದ ವಿವರಗಳನ್ನು ಕೇಳಿದ್ದೇನೆ’ ಎಂದು ಅವರು ಹೇಳಿದರು.

‘ಕೋವಿಡ್ ಮೂರನೇ ಅಲೆ ಬಂದರೂ ಮಾರ್ಚ್‌ವರೆಗೆ ನಿಭಾಯಿಸಲು ಹಣಕಾಸು ವ್ಯವಸ್ಥೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಗುರುವಾರದ ಸಭೆಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್ ಅವರನ್ನು ಆಹ್ವಾನಿಸಲಾಗಿದೆ. ಅವರು ನೀಡುವ ಸಲಹೆಗಳನ್ನೂ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ಬೊಮ್ಮಾಯಿ ಹೇಳಿದರು.

ಸಭೆಯಲ್ಲಿ ಬಂದ ಸಲಹೆಗಳು: ಕೋವಿಡ್ ನಿರ್ವಹಣೆಯನ್ನು ಕಟ್ಟುನಿಟ್ಟಾಗಿ ಜಾರಿ ಗೊಳಿಸಲು ಸಚಿವರ ತಂಡವನ್ನು ರಚಿಸಿ ಜವಾಬ್ದಾರಿಗಳನ್ನು ಹಂಚುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪ ಆಗಿದೆ. ಕೋವಿಡ್ ಎರಡನೇ ಅಲೆ ಹತೋಟಿಗೆ ಸಚಿವರ ತಂಡ ರಚಿಸಿದ ನಂತರ ಪರಿಸ್ಥಿತಿ ಸುಧಾರಿಸಿತು. ಮೂರನೇ ಅಲೆ ಬಂದರೆ ಅದನ್ನು ನಿಭಾಯಿಸಲು ಮುಂಚಿತವಾಗಿ ಸಿದ್ಧವಾಗಬೇಕಾಗಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು ಎಂದು ಮೂಲಗಳು ಹೇಳಿವೆ.

ಎರಡನೇ ಅಲೆಯ ಆರಂಭಕ್ಕೆ ಮೊದಲಿನ ಸ್ಥಿತಿಯೂ ಈಗಿನಂತೆಯೇ ಇತ್ತು. ಆದ್ದರಿಂದ ಕೆಲವು ಕಠಿಣ ಕ್ರಮಗಳನ್ನು ಈಗಲೇ ಕೈಗೊಳ್ಳಬೇಕಾಗುತ್ತದೆ. ಆಮ್ಲಜನಕ ಘಟಕಗಳು,ಪ್ರಯೋಗಾಲಯಗಳು, ಖಾಸಗಿ ಆಸ್ಪತ್ರೆ ಗಳಿಗೆ ನೀಡಬೇಕಾಗಿರುವ ಬಾಕಿ ಮೊತ್ತದ ಬಗ್ಗೆ ಮಾಹಿತಿ ಪಡೆದ ಬೊಮ್ಮಾಯಿ, ತಕ್ಷಣವೇ ಪಾವತಿ ಮಾಡಲು ಬಿಬಿಎಂಪಿ, ಕಂದಾಯ ಇಲಾಖೆ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು ಎಂದೂ ಮೂಲಗಳು ತಿಳಿಸಿವೆ.

‘ಅ’ಕಾರ, ‘ಹ’ಕಾರ ವ್ಯತ್ಯಾಸ ತಿಳಿದವರು ಕಡಿಮೆ:ಜೋಶಿ

ಧಾರವಾಡ: ‘ರಾಜಧಾನಿ ಬೆಂಗಳೂರಿನಲ್ಲಿ ‘ಅ’ಕಾರ ಹಾಗೂ ‘ಹ’ಕಾರ ವ್ಯತ್ಯಾಸ ತಿಳಿದ ಕನ್ನಡಿಗರು, ಶುದ್ಧ ಕನ್ನಡ ಗೊತ್ತಿರುವವರ ಸಂಖ್ಯೆ ಶೇ 26ರಷ್ಟು ಮಾತ್ರ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಬುಧವಾರ ಕಳವಳ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ನೂತನ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಅವರ ಪದ ಗ್ರಹಣ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.



ಮಹೇಶ್ ಜೋಶಿ

‘ನಮ್ಮಲ್ಲಿ ಪ್ರದೇಶಗಳಿಗೆ ಅನುಗುಣವಾಗಿ ಉಚ್ಚಾರಣೆ ಬದಲಾಗುತ್ತವೆ. ಆದರೆ ಶುದ್ಧ ಹಾಗೂ ಸ್ಪಷ್ಟ ಕನ್ನಡವನ್ನು ನಾವು ಉಳಿಸಿ ಬೆಳೆಸಬೇಕು. ಇಡೀ ಜಗತ್ತಿನಲ್ಲಿ ಸಂಸ್ಕೃತ ಹಾಗೂ ಕನ್ನಡ ಭಾಷೆಗಳು ಮಾತ್ರ ಅತ್ಯಂತ ಶುದ್ಧ ಎಂಬ ಕೀರ್ತಿಗೆ ಪಾತ್ರವಾಗಿವೆ. ನಾವು ಅದರ ವೈಶಿಷ್ಟ್ಯವನ್ನು ಕಾಪಾಡಬೇಕಿದೆ’ ಎಂದರು.

‘ಮುಂದಿನ ಒಂದು ವರ್ಷದಲ್ಲಿ ಮೂರು ಲಕ್ಷ ಸದಸ್ಯರನ್ನು ಮಾಡುವ ಗುರಿ ಇದೆ. ಕಸಾಪವನ್ನು ಗ್ರಾಮ ಮಟ್ಟದಲ್ಲಿ ಕಟ್ಟುವ ನಿಟ್ಟಿನಲ್ಲಿ ಹಳ್ಳಿಗಳಲ್ಲಿ ಪಾದಯಾತ್ರೆ ನಡೆಸಲಿದ್ದೇನೆ. ಮುಂದಿನ ಬಾರಿ ಮೊಬೈಲ್ ಆ್ಯಪ್ ಬಳಸಿ, ಒಟಿಪಿ ಸುರಕ್ಷತೆ ಆಧಾರಿತ ಚುನಾವಣೆಯನ್ನು ನಡೆಸುವ ಯೋಜನೆ ಇದೆ’ ಎಂದು ಹೇಳಿದರು.

‘ಒಂದೇ ದಿನದಲ್ಲಿ ಭೂ ಪರಿವರ್ತನೆ’

ಬೆಂಗಳೂರು: ಅರ್ಜಿ ಸಲ್ಲಿಸಿದ ಒಂದು ದಿನದಲ್ಲೇ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಆದೇಶ ಹೊರಡಿಸಲು ಅವಕಾಶ ಕಲ್ಪಿಸುವ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಜಮೀನು ಖರೀದಿಸಿದವರು ಅನ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಸಲು ಅರ್ಜಿ ಸಲ್ಲಿಸಿ ಆರು ತಿಂಗಳವರೆಗೂ ಕಾಯಬೇಕಾಗಿತ್ತು. ಇದರಿಂದ ಖರೀದಿದಾರರು, ಹೂಡಿಕೆದಾರರಿಗೆ ವಿಪರೀತ ಸಮಸ್ಯೆಗಳಾಗುತ್ತಿದ್ದವು. ಅದನ್ನು ತಪ್ಪಿಸಲು ಹೊಸ ನಿಯಮ ಜಾರಿಗೆ ತರಲಾಗುವುದು’ ಎಂದರು.




ಆರ್‌.ಅಶೋಕ

ಭೂ ಪರಿವರ್ತನೆಯ ನಿಯಮಗಳಲ್ಲಿ ಇರುವ ತೊಡಕುಗಳಿಂದ ಪ್ರತಿ ಎಕರೆಗೆ ₹ 5 ಲಕ್ಷದವರೆಗೂ ಅಧಿಕಾರಿಗಳಿಗೆ ಪಾವತಿಸಬೇಕಾದ ಸ್ಥಿತಿ ಇದೆ. ಇದರಿಂದ ವರ್ಷಕ್ಕೆ ₹ 500 ಕೋಟಿಯಷ್ಟು ಒಳ ವ್ಯವಹಾರ ನಡೆಯುತ್ತಿತ್ತು. ಹೊಸ ನಿಯಮ ಜಾರಿಯಿಂದ ಭೂ ಪರಿವರ್ತನೆಯಲ್ಲಿ ವಿಳಂಬ, ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿದೆ’ ಎಂದು ಹೇಳಿದರು.

ಪರಿವರ್ತನೆಗೆ ಉದ್ದೇಶಿಸಿರುವ ಜಮೀನು ಒತ್ತುವರಿಯಲ್ಲಿ ಸೇರಿರಬಾರದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವ್ಯಕ್ತಿಗಳಿಗೆ ಸೇರಿದ್ದಾಗಿರಬಾರದು ಎಂಬುದೂ ಸೇರಿದಂತೆ ಕೆಲವು ಷರತ್ತುಗಳನ್ನು ವಿಧಿಸಲಾಗುವುದು. ಅವುಗಳಿಂದ ಹೊರತಾದ ಎಲ್ಲ ಜಮೀನುಗಳಿಗೂ ಒಂದೇ ದಿನದಲ್ಲಿ ಭೂಪರಿವರ್ತನೆ ಆದೇಶ ನೀಡಲು ಹೊಸ ವ್ಯವಸ್ಥೆ ರೂಪಿಸಲಾಗುವುದು ಎಂದು ಹೇಳಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



'ಕಸ್ತೂರಿರಂಗನ್ ವರದಿಗೆ ವಿರೋಧ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಡಾ.ಕೆ. ಕಸ್ತೂರಿರಂಗನ್ ನೀಡಿರುವ ವರದಿಯ ಶಿಫಾರಸುಗಳನ್ನು ರಾಜ್ಯ ಸರ್ಕಾರ ವಿರೋಧಿಸುತ್ತಿರುವುದರಿಂದ ಹಿಂದೆ ಸಾರ್ವಜನಿಕ ಹಿತಾಸಕ್ತಿ ಇಲ್ಲ ಎಂದು ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಅ.ನ. ಯಲ್ಲಪ್ಪ ರೆಡ್ಡಿ ಹೇಳಿದ್ದಾರೆ.

ವರದಿ ತಿರಸ್ಕರಿಸುವಂತೆ ಕೇಂದ್ರ ಸರ್ಕಾರದ ಮುಂದೆ ರಾಜ್ಯ ಸರ್ಕಾರ ಬೇಡಿಕೆ ಇಟ್ಟಿರುವ ಕುರಿತು ಪತ್ರಿಕಾ ಹೇಳಿಕೆಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ಹಿಂದೆ ಮಾಧವ್ ಗಾಡ್ಗೀಳ್ ಸಮಿತಿ ವರದಿ ನೀಡಿತ್ತು. ಅದನ್ನು ಹಲವು ರಾಜ್ಯ ಸರ್ಕಾರಗಳು ವಿರೋಧಿಸಿದ್ದವು. ನಂತರ ಕಸ್ತೂರಿರಂಗನ್ ಸಮಿತಿ ನೇಮಿಸಲಾಯಿತು.


ಯಲ್ಲಪ್ಪ ರೆಡ್ಡಿ

ಗಾಡ್ಗೀಳ್ ಸಮಿತಿಯ ಶಿಫಾರಸುಗಳನ್ನು ಆದಷ್ಟೂ ತೆಳುವಾಗಿಸಿ, ಪಶ್ಚಿಮ ಘಟ್ಟಗಳಲ್ಲಿ ಮಾನವ ಕೇಂದ್ರಿ ಅಭಿವೃದ್ಧಿ ಚಟುವಟಿಕೆಗೆ ಅವಕಾಶ ನೀಡುವ ಶಿಫಾರಸು ಮಾಡಲಾಗಿತ್ತು' ಎಂದು ಹೇಳಿದ್ದಾರೆ.

ಕಸ್ತೂರಿರಂಗನ್ ವರದಿ ವಾಸ್ತವ ಸಂಗತಿಗಳನ್ನು ಆಧರಿಸಿಲ್ಲ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಪರಿಗಣಿಸಿಲ್ಲ ಎಂದು ಸಚಿವರು ವಿರೋಧಕ್ಕೆ ಕಾರಣ ನೀಡಿದ್ದಾರೆ. ಸಚಿವರ ಪ್ರಕಾರ ಸರ್ವಾಜನಿಕ ಹಿತಾಸಕ್ತಿ ಎಂದರೆ ಪಶ್ಚಿಮ ಘಟ್ಟಗಳನ್ನು ಕೆಲವರ ಸ್ವಯಂ ಹಿತಾಸಕ್ತಿಗಾಗಿ ಬಳಸಿಕೊಳ್ಳುವುದು ಎಂಬುದಾಗುತ್ತದೆ ಎಂದು ಟೀಕಿಸಿದ್ದಾರೆ.

ಅಭಿವೃದ್ಧಿಯ ಹೆಸರಿನಲ್ಲಿ ನಿರಂತರವಾಗಿ ಅರಣ್ಯ ನಾಶ ಹೆಚ್ಚುತ್ತಿದೆ. 70 ವರ್ಷಗಳೊಳಗೆ ಮಾಲಿನ್ಯಕಾರಕ ಅನಿಲಗಳ ಉಗುಳುವಿಕೆ ತಡೆಯಲು ಬದ್ಧ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅದು ಸುಮ್ಮನೆ ಸಾಧ್ಯವಾಗುವುದಿಲ್ಲ. ಇಂತಹ ವರದಿಗಳ ಅನುಷ್ಠಾನ ಹಾಗೂ ಪರಿಣಾಮಕಾರಿ ಕ್ರಮಗಳಿಂದ ಮಾತ್ರ ಸಾಧ್ಯ ಎಂದಿದ್ದಾರೆ.

1993–94ರಲ್ಲಿ ಕೊಡಗು ಜಿಲ್ಲೆಯಲ್ಲಿ ಟಿಂಬರ್ ಮಾಫಿಯಾದಿಂದ ನಡೆದ ಅರಣ್ಯ ನಾಶದ ಕುರಿತು ತಾವು ಸಲ್ಲಿಸಿದ್ದ ವರದಿಯನ್ನು ಸರ್ಕಾರ ಮೂಲೆಗುಂಪು ಮಾಡಿದೆ. ಕೊಡಗಿನಲ್ಲಿ ನಡೆದ ಅರಣ್ಯ ನಾಶಕ್ಕೆ ಸಂಬಂಧಿಸಿದಂತೆ ನೀಡಿರುವ-ವರದಿಗಳ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕಾಮಗಾರಿ ಕೈಗೊಂಡಿರುವುದರಿಂದ ಇದೇ 9ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಅನಂತಪುರ, ರಾಮಗೊಂಡನಹಳ್ಳಿ, ಮಹಾಲಕ್ಷ್ಮಿ ಬಡಾವಣೆ, ಜೆಬಿ ಕಾವಲ್, ಇಸ್ರೊ ಬಡಾವಣೆ, ಹೊನ್ನೆನಹಳ್ಳಿ, ಸಾದೇನಹಳ್ಳಿ, ಅವಲಹಳ್ಳಿ, ಗಂಟಿಗಾನಹಳ್ಳಿ, ನಾಗೇನಹಳ್ಳಿ, ಸಿಂಗನಾಯಕನಹಳ್ಳಿ, ಶೋಭಾ ಅಪಾರ್ಟ್‌ಮೆಂಟ್, ಮಾರುತಿ ನಗರ, ಯಲಹಂಕ ಟೌನ್ ಸುತ್ತಮುತ್ತ ಪ್ರದೇಶಗಳು

ಸುದ್ದಿ 2 ನಿಮಿಷ

'ಜನರಿಗೆ ಸಂಕಷ್ಟ ಹೇರಬೇಡಿ'

ಬೆಂಗಳೂರು: ಕೋವಿಡ್ ನಿಯಂತ್ರಣದ ಹೆಸರಿನಲ್ಲಿ ಜನರ ಮೇಲೆ ಆರ್ಥಿಕ ಸಂಕಷ್ಟಗಳನ್ನು ಹೇರುವ ಕ್ರಮಗಳನ್ನು ಜಾರಿಗೊಳಿಸಬಾರದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಓಮೈಕ್ರಾನ್ ತಳಿಯ ಕೊರೊನಾ ವೈರಾಣುವಿನ ವಿಷಯದಲ್ಲಿ ಜನರಲ್ಲಿ ಅನಗತ್ಯ ಭಯ ಹುಟ್ಟಿಸಲಾಗುತ್ತಿದೆ. ರಾಜ್ಯದಲ್ಲಿ ಎಲ್ಲಿ ಸೋಂಕು ಹೆಚ್ಚಾಗಿದೆ? ಭೀತಿ ಹುಟ್ಟಿಸಿ ಇಡೀ ರಾಜ್ಯದ ಆರ್ಥಿಕತೆಯನ್ನೇ ಹಾಳು ಮಾಡಲಾಗುತ್ತಿದೆ' ಎಂದರು.

ಉದ್ಯಮಗಳು, ಹೋಟೆಲ್‌ಗಳಲ್ಲಿ ಹವಾ ನಿಯಂತ್ರಣ ವ್ಯವಸ್ಥೆಯ ಬಳಕೆ ಅನಿವಾರ್ಯ. ಶೇಕಡ 20ರಷ್ಟು ಶಾಲೆಗಳಲ್ಲೂ ಈಗ ಹವಾ ನಿಯಂತ್ರಣ ವ್ಯವಸ್ಥೆ ಇದೆ. ಈಗ ಹವಾ ನಿಯಂತ್ರಣ ವ್ಯವಸ್ಥೆ ಮೇಲೆ ನಿರ್ಬಂಧ ಹೇರುವ ಪ್ರಸ್ತಾವವಿದೆ ಎಂಬ ಮಾಹಿತಿ ಇದೆ. ಹಾಗೆ ಮಾಡಿದರೆ ಉದ್ದಿಮೆಗಳು, ನೌಕರರಿಗೆ ತೊಂದರೆ ಯಾಗುತ್ತದೆ ಎಂದು ಹೇಳಿದರು.

'ಕರ್ನಾಟಕಕ್ಕೆ ಪ್ರತ್ಯೇಕವಾಗಿ ಕೋವಿಡ್ ನಿಯಂತ್ರಣ ಮಾರ್ಗಸೂಚಿ ರೂಪಿಸಲು ಸಾಧ್ಯವಿಲ್ಲ. ದೇಶದ ಇತರೆಡೆ ಇರುವಂತೆಯೇ ಮಾರ್ಗಸೂಚಿ ರೂಪಿಸಬೇಕು. ಅದರಿಂದ ತೊಂದರೆಗೊಳಗಾದವರಿಗೆ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

ಎಲ್ಲರ ಬೆಂಬಲವೂ ಬೇಕು: 'ನಾನು ಕೆಪಿಸಿಸಿ ಅಧ್ಯಕ್ಷ. ಸಿಪಿಎಂ, ಜೆಡಿಎಸ್, ರೈತ ಸಂಘ ಎಲ್ಲರ ಮತಗಳನ್ನೂ ಕೇಳುತ್ತೇನೆ. ಚುನಾವಣೆಯಲ್ಲಿ ಮುಕ್ತ ಮತದಾನದ ವ್ಯವಸ್ಥೆ ಇದು. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಯಾರಿಗೆ ಬೇಕಾದರೂ ಮತ ನೀಡಬಹುದು. ಹೀಗಾಗಿ ಎಲ್ಲರ ಬೆಂಬಲ ಕೇಳಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಬಿ.ಎಸ್ಸಿ ಆನರ್ಸ್ ಕೋರ್ಸ್; ಸೀಟು ಹಂಚಿಕೆ ಪಟ್ಟಿ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷದ ಬಿ.ಎಸ್ಸಿ (ಆನರ್ಸ್) ಕೋರ್ಸ್‌ಗಳ ಸೀಟು ಹಂಚಿಕೆ ಪ್ರಕಟಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಈ ವಿಷಯ ಪ್ರಕಟಿಸಲಾಗಿದ್ದು, ಎಂಜಿನಿಯರಿಂಗ್ ರ‍್ಯಾಂಕ್ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುವುದು. ಎರಡನೇ ಸುತ್ತಿನ ಎಂಜಿನಿಯರಿಂಗ್ ಸೀಟು ಹಂಚಿಕೆಯ ಜತೆಯಲ್ಲೇ ಈ ಕಾರ್ಯ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎಂಜಿನಿಯರಿಂಗ್ ರ‍್ಯಾಂಕ್ ಪಡೆದಿರುವ ಅರ್ಹ ಅಭ್ಯರ್ಥಿಗಳು ಬಿ.ಎಸ್ಸಿ. (ಆನರ್ಸ್) ಡಿ.9ರವರೆಗೆ ಸೀಟು ಹಂಚಿಕೆ ದಾಖಲಿಸಬಹುದಾಗಿದೆ ಎಂದು ತಿಳಿಸಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಸಚಿವರು ನ.24ರಂದು ಬರೆದ ಪತ್ರದಲ್ಲಿ ಉಲ್ಲೇಖಿಸಿದಂತೆ, ಅಭ್ಯರ್ಥಿಗಳು ₹8,220 ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪಾವತಿಸಬೇಕು ಹಾಗೂ ಪ್ರವೇಶ ಪಡೆಯುವ ಸಂದರ್ಭದಲ್ಲಿ ಪ್ರತಿ ವರ್ಷಕ್ಕೆ ಬೋಧನಾ ಮತ್ತು ಇತರ ಶುಲ್ಕ ₹51,780 ಮೊತ್ತವನ್ನು ಆಯಾ ಕಾಲೇಜಿನಲ್ಲಿ ಪಾವತಿಸಬೇಕು ಎಂದು ತಿಳಿಸಿದೆ.

ಮಹದೇವಪುರ ವಲಯಕ್ಕೆ ಹೆಚ್ಚುವರಿ ₹119.62 ಕೋಟಿಗೆ ಪ್ರಸ್ತಾವನೆ

110 ಹಳ್ಳಿಗಳ ರಸ್ತೆ ಕಾಮಗಾರಿಗೆ 4ಜಿ ವಿನಾಯಿತಿ?

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ



ಮಹದೇವಪುರ ಕ್ಷೇತ್ರದಲ್ಲಿನ 110 ಹಳ್ಳಿ ಯೋಜನೆಯ ಕಾಮಗಾರಿ

ಬೆಂಗಳೂರು: ಬಿಬಿಎಂಪಿಯ ಮಹದೇವ ಪುರ ವಲಯ ವ್ಯಾಪ್ತಿಯಲ್ಲಿ 110 ಹಳ್ಳಿ ಯೋಜನೆಯಡಿ ರಸ್ತೆ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿಯಾಗಿ ₹119.62 ಕೋಟಿ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಈ ಕಾಮಗಾರಿಗಳಿಗೆ 4ಜಿ ವಿನಾಯಿತಿಯನ್ನೂ (ಟೆಂಡರ್ ಕರೆಯದೇ ಕಾಮಗಾರಿ ನಿರ್ವಹಿಸುವುದು) ಕೋರಿರುವುದು ಚರ್ಚೆಗೆ ಗ್ರಾಸವಾಗಿದೆ.

ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಮಹದೇವ ಪುರ ವಿಧಾನ ಸಭಾ ಕ್ಷೇತ್ರವೇ ಅತೀ ಹೆಚ್ಚು 31 ಹಳ್ಳಿಗಳನ್ನು ಒಳಗೊಂಡಿದೆ. ಪ್ರಸಕ್ತ ಸಾಲಿನಲ್ಲಿ 110 ಹಳ್ಳಿಗಳ ರಸ್ತೆ ಅಭಿವೃದ್ಧಿಗೆ ₹1 ಸಾವಿರ ಕೋಟಿ ಬಿಡುಗಡೆ ಮಾಡಿದ ಸರ್ಕಾರ, ಈ ಕ್ಷೇತ್ರಕ್ಕೆ ₹210 ಕೋಟಿ ಬಿಡುಗಡೆ ಮಾಡಿತು. ಈ ಅನುದಾನದಲ್ಲಿ 114 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಿಯಾಯೋಜನೆ ರೂಪಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಕೂಡ ಅಂತಿಮ ಹಂತದಲ್ಲಿದೆ.

ಐ.ಟಿ ಕಂಪನಿಗಳ ಬೀಡಾಗಿರುವ ಈ ಕ್ಷೇತ್ರದಲ್ಲಿ ರಸ್ತೆಗಳು ಸಂಪೂರ್ಣ ವಾಗಿ ಹಾಳಾಗಿದ್ದು, 110 ಹಳ್ಳಿ ಯೋಜನೆಯಡಿ ಪೈಪ್‌ಲೈನ್ ಅಳವಡಿಕೆಗೆ ಅಗೆದಿರುವ ರಸ್ತೆಗಳ ಮರು ನಿರ್ಮಾಣ ಕಾಮಗಾರಿ ಜರೂರಾಗಿ ಆಗಬೇಕಿದೆ. ಹೆಚ್ಚುವರಿಯಾಗಿ ₹78.32 ಕೋಟಿ ಮತ್ತು ₹41.30 ಕೋಟಿ ಅನುದಾನ ಕೋರಿ ಎರಡು ಪ್ರಸ್ತಾವನೆಗಳನ್ನು ಬಿಬಿಎಂಪಿ ಮಹದೇವಪುರ ವಲಯದಿಂದ ಸಲ್ಲಿಸಲಾಗಿದೆ.

₹78.32 ಕೋಟಿ ಮೊತ್ತದ ಮೊದಲ ಪ್ರಸ್ತಾವನೆಯಲ್ಲಿ ಕಾಡುಗೋಡಿ, ಹಗದೂರು, ದೊಡ್ಡನೆಕ್ಕುಂದಿ, ಬೆಳ್ಳಂದೂರು, ಹೂಡಿ ಮತ್ತು ವರ್ತೂರು ವಾರ್ಡ್‌ಗಳಲ್ಲಿ ಒಟ್ಟು 73 ಕಾಮಗಾರಿಗಳನ್ನು ಪಟ್ಟಿ ಮಾಡಲಾಗಿದೆ.

> **ಹೆಚ್ಚುವರಿ ಅನುದಾನ ಕೋರಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆ. 4ಜಿ ವಿನಾಯಿತಿ ಬಗ್ಗೆಯೂ ಪ್ರಸ್ತಾವನೆ ಇದ್ದು, ಇನ್ನೂ ಚರ್ಚೆ ಹಂತದಲ್ಲಿದೆ**
>
> **ಪರಮೇಶ್ವರಯ್ಯ,** ಮಹದೇವಪುರ ವಲಯದ ಮುಖ್ಯ ಎಂಜಿನಿಯರ್

₹41.30 ಕೋಟಿ ಮೊತ್ತದ ಎರಡನೇ ಪ್ರಸ್ತಾವನೆಯಲ್ಲಿ ಹೂಡಿ, ಕಾಡುಗೋಡಿ, ಹಗದೂರು, ವರ್ತೂರು, ಬೆಳ್ಳಂದೂರು ವಾರ್ಡ್ ವ್ಯಾಪ್ತಿಯಲ್ಲಿ 59 ಕಾಮಗಾರಿಗಳನ್ನು ಪಟ್ಟಿ ಮಾಡಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಅನುಮೋದನೆಗೆ ಬಾಕಿ ಇದೆ. ಈ ಹೆಚ್ಚುವರಿ ಅನುದಾನದಲ್ಲಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಬೇಕಿದೆ ಎಂಬ ಕಾರಣಕ್ಕೆ 4ಜಿ ವಿನಾಯಿತಿ ಪಡೆಯುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ವಾಹನ ದಟ್ಟಣೆ ಹೆಚ್ಚಿರುವುದರಿಂದ ಮುಂಗಾರು ಪೂರ್ವ ಮಳೆ ಆರಂಭಕ್ಕೂ ಮುನ್ನವೇ ಕಾಮಗಾರಿ ಮುಗಿಸಬೇಕಿದೆ. ಟೆಂಡರ್ ಪ್ರಕ್ರಿಯೆ ನಡೆಸಿದರೆ ಕಾಮಗಾರಿ ವಿಳಂಬವಾಗಲಿದ್ದು, 4ಜಿ ವಿನಾಯಿತಿ ನೀಡಬೇಕು ಎಂಬ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ಇಡಲಾಗಿದೆ.

'4ಜಿ ವಿನಾಯಿತಿ ಪಡೆದು ಬಿಬಿಎಂಪಿ ಚುನಾವಣೆಗೂ ಮುನ್ನ ತಮ್ಮ ಹಿಂಬಾಲಕರಿಗೆ ತುಂಡು ಗುತ್ತಿಗೆ ಕೊಡಿಸುವ ಉದ್ದೇಶವನ್ನು ಸ್ಥಳೀಯ ಜನಪ್ರತಿನಿಧಿಯೊಬ್ಬರು ಹೊಂದಿದ್ದಾರೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳೇ ಹೇಳುತ್ತಾರೆ.

'ಮಹದೇವಪುರ ಕ್ಷೇತ್ರದಲ್ಲಿ ರಸ್ತೆಗಳು ಹಾಳಾಗಿ ತೊಂದರೆ ಇರುವುದು ನಿಜ. ಹಾಗೆಂದ ಮಾತ್ರಕ್ಕೆ 4ಜಿ ವಿನಾಯಿತಿ ಪಡೆದು ಕಾಮಗಾರಿ ನಡೆಸುವುದು ಒಳ್ಳೆಯ ಸಂಪ್ರದಾಯ ಅಲ್ಲ' ಎಂಬುದು ಅವರ ಅಭಿಪ್ರಾಯ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಶಾಸಕ ಅರವಿಂದ ಲಿಂಬಾವಳಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. 'ಶಾಸಕರು ಬ್ಯುಸಿ ಇದ್ದು, ಪ್ರತಿಕ್ರಿಯೆಗೆ ಗುರುವಾರ ಸಿಗಲಿದ್ದಾರೆ' ಎಂದು ಅವರ ಆಪ್ತ ಸಿಬ್ಬಂದಿ ಪ್ರತಿಕ್ರಿಯಿಸಿದರು.

ಎಪಿಪಿ ನೇಮಕ ಅಕ್ರಮ ಆರೋಪ: ಪಿಐಎಲ್ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ಹಾಗೂ ಸಹಾಯಕ ಸರ್ಕಾರಿ ಪ್ಲೀಡರ್ (ಎಜಿಪಿ) ನೇಮಕಾತಿ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ವಿಲೇವಾರಿ ಮಾಡಿರುವ ಹೈಕೋರ್ಟ್, 'ಈ ಸಂಬಂಧ ಸಕ್ಷಮ ಪ್ರಾಧಿಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶಿಸಿದೆ.

'2012ರಲ್ಲಿ ನಡೆದ ಎಪಿಪಿ ನೇಮಕಾತಿಯಲ್ಲಿ ಅಕ್ರಮ ನಡೆದಿದ್ದು, ಆರೋಪಿತರ ವಿರುದ್ಧ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆಕ್ಷೇಪಿಸಿ ವಕೀಲ ಆತ್ಮ ವಿ. ಹಿರೇಮಠ ಹಾಗೂ ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್. ಆರ್. ಹಿರೇಮಠ ಸಲ್ಲಿಸಿದ್ದ ಎರಡು ಪ್ರತ್ಯೇಕ ಪಿಐಎಲ್‌ಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಈಗಾಗಲೇ ಪ್ರಕರಣದ ತನಿಖೆ ನಡೆಸಲಾಗಿದೆ. ದೋಷಾರೋಪಣೆ ಪಟ್ಟಿಯಲ್ಲಿರುವ ಎಪಿಪಿಗಳನ್ನು ಅಮಾನತು ಮಾಡಲಾಗಿತ್ತು. ಆದರೆ, ಕೆಎಟಿ ಇದಕ್ಕೆ ತಡೆ ನೀಡಿರುವುದರಿಂದ ಅವರು ಸೇವೆ ಮುಂದುವರೆಸಿದ್ದಾರೆ' ಎಂದು ತಿಳಿಸಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ 2017ರ ಜೂನ್ 12ರಂದು ಸಂಬಂಧಪಟ್ಟ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ. ಅಂತೆಯೇ, 2018ರ ಮಾರ್ಚ್ 15ರಂದು ಹೆಚ್ಚುವರಿ ದೋಷಾರೋಪ ಪಟ್ಟಿಯನ್ನೂ ಸಲ್ಲಿಸಲಾಗಿದೆ. ನ್ಯಾಯಾಲಯ ವಿಚಾರಣೆ ನಡೆಸುತ್ತಿದೆ' ಎಂದು ವಿವರಿಸಿದರು.

ಈ ಹೇಳಿಕೆಯನ್ನು ಪರಿಗಣಿಸಿದ ನ್ಯಾಯಪೀಠ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ನಡೆಸಿ ಸಂಬಂಧಪಟ್ಟ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವ ಕಾರಣ ಹೆಚ್ಚಿನ ವಿಚಾರಣೆಯ ಅಗತ್ಯವಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿಗಳನ್ನು ವಿಲೇವಾರಿ ಮಾಡಿತು.

ಕರೀಗೌಡ ಬೀಚನಹಳ್ಳಿ ಅವರ 'ಹೊತ್ತಿನ ಕಣ್ಣಿನ ಮಿಂಚು' ಕೃತಿ ಬಿಡುಗಡೆ

'ಮೀಸಲಾತಿ ವಿರೋಧಿಗಳೇ ಮೀಸಲಾತಿ ಕೇಳುತ್ತಾರೆ'

ಪ್ರಜಾವಾಣಿ ವಾರ್ತೆ



ವಾಸುದೇವ ಚಾರಿಟಬಲ್ ಟ್ರಸ್ಟ್ ಮತ್ತು ಸಂಚಲನ ಸಂಸ್ಕೃತಿ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಅವರು (ಎಡದಿಂದ ಎರಡನೆಯವರು) 'ಹೊತ್ತಿನ ಕಣ್ಣಿನ ಮಿಂಚು' ಕೃತಿಯನ್ನು ಕುಸುಮಾ ಬೀಚನಹಳ್ಳಿ (ಬಲಗಡೆಯವರು) ಅವರಿಗೆ ಹಸ್ತಾಂತರಿಸಿದರು. (ಎಡದಿಂದ) ನಟರಾಜ ಹುಳಿಯಾರ್, ಅಗ್ರಹಾರ ಕೃಷ್ಣಮೂರ್ತಿ, 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ಎಚ್. ದಂಡಪ್ಪ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಇತ್ತೀಚಿನ ವರ್ಷಗಳಲ್ಲಿ ಜಾತಿವಾದ ಎನ್ನುವುದು ಜಾತಿಯನ್ನು ಮೀರಿ ಆವರಿಸಿಕೊಂಡಿದೆ. ಮೀಸಲಾತಿ ವಿರೋಧಿಸುವವರೇ ಮೀಸಲಾತಿ ಕೇಳುತ್ತಿದ್ದಾರೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ವಾಸುದೇವ ಚಾರಿಟಬಲ್ ಟ್ರಸ್ಟ್ ಹಾಗೂ ಸಂಚಲನ ಸಂಸ್ಕೃತಿ ವೇದಿಕೆ ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಲೇಖಕ ಕರೀಗೌಡ ಬೀಚನಹಳ್ಳಿ ಅವರ 'ಹೊತ್ತಿನ ಕಣ್ಣಿನ ಮಿಂಚು' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

'ಜಾತಿ ಎಂಬುದು ಈಗ ಸಾಮಾಜಿಕ ನೆಲೆಯಾಗಿ ಉಳಿದಿಲ್ಲ. ಬದಲಾಗಿ ಶ್ರೇಷ್ಠತೆ ಮತ್ತು ಕನಿಷ್ಠತೆಯನ್ನು ಹೇಳುತ್ತಾ ಹೋಗುತ್ತಿದೆ. ಜಾತಿ ಮತ್ತು ಧರ್ಮವು ಸಂಘರ್ಷ ಉಂಟು ಮಾಡಬಾರದು. ನಮ್ಮ ದೇಶಕ್ಕೆ ಜಾತಿ ಧರ್ಮ ಮೀರಿದ ಸೌಹಾರ್ದ ಬೇಕಿದೆ. ಜಾತಿ ವಾದದ ಜೈಲುಗಳು, ಧರ್ಮ ದ್ವೇಷದ ದ್ವೀಪಗಳಿಂದ ಹೊರಗಡೆ ಬರಬೇಕಾಗಿದೆ' ಎಂದು ಅವರು ಹೇಳಿದರು.

ವಿಮರ್ಶಕ ನಟರಾಜ ಹುಳಿಯಾರ್, ಮಾತನಾಡಿ, 'ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸಾವಿರಾರು ಕೋಟಿ ರೂಪಾಯಿ ಘೋಷಿಸಲಾಗುತ್ತದೆ. ಆದರೆ, ನಮ್ಮ ಹಳ್ಳಿಗಳ ಸ್ಥಿತಿ ಮಾತ್ರ ಸ್ವಲ್ಪವೂ ಬದಲಾಗುತ್ತಿಲ್ಲ. ಜನಪ್ರತಿನಿಧಿಗಳಿಗೆ ಗ್ರಾಮಗಳನ್ನು ನೋಡುವ ಕಣ್ಣುಗಳು ಇಲ್ಲವಾಗಿವೆ. ಕಥೆಗಾರ ಅಥವಾ ಕಥೆಗಾರ್ತಿ ಧ್ವನಿ ಇಲ್ಲದವರ ಧ್ವನಿಯಾಗಬೇಕು. ಕರೀಗೌಡ ಅವರರ ಕಥೆಗಳಲ್ಲಿ ಹಳ್ಳಿಯ ಮುಗ್ಧತೆ ಕಾಣಬಹುದು' ಎಂದು ತಿಳಿಸಿದರು.

ಚಿಂತಕ ಅಗ್ರಹಾರ ಕೃಷ್ಣಮೂರ್ತಿ, 'ಕರೀಗೌಡರ ಮುಖ್ಯ ಕಾಳಜಿ ಗ್ರಾಮೀಣ ಬದುಕು. 1979ರಲ್ಲಿ ಅವರು ತಮ್ಮ ಮೊದಲ ಕಥೆಯನ್ನು ಪ್ರಕಟಿಸಿದರು.

> **ಪುಸ್ತಕ ಪರಿಚಯ**
>
> - ಪುಸ್ತಕ: ಹೊತ್ತಿನ ಕಣ್ಣಿನ ಮಿಂಚು
> - ಲೇಖಕ: ಕರೀಗೌಡ ಬೀಚನಹಳ್ಳಿ
> - ಪುಟಗಳು: 568
> - ಬೆಲೆ: ₹ 600
> - ಪ್ರಕಾಶನ: ಅಜಂತ ಪ್ರಕಾಶನ

ಆಶಾವಾದ ಮತ್ತು ಭರವಸೆಯ ಸಂಯಮವನ್ನು ಅವರ ಕಥೆಗಳಲ್ಲಿ ನೋಡಬಹುದಾಗಿದೆ. ಅವರು ಯಾವುದೇ ಸಂದರ್ಭದಲ್ಲಿ ಸಿದ್ಧಾಂತದ ಹಿಂದೆ ಬಿದ್ದು ಮಾತನಾಡಿಲ್ಲ. ಬಡತನ, ಬಯಲು ಸೀಮೆಯಲ್ಲಿನ ದುಃಖ ದುಮ್ಮಾನಗಳನ್ನು ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು

ಕೃತಿಯ ಬಗ್ಗೆ ಮಾತನಾಡಿದ ವಿಮರ್ಶಕ ಎಚ್. ದಂಡಪ್ಪ, 'ಕೃತಿಯು 40 ಕಥೆಗಳನ್ನು ಒಳಗೊಂಡಿದೆ. ಬಡತನವನ್ನೇ ವಿಷಯ ವಸ್ತುವಾಗಿರಿಸಿಕೊಂಡು ಕಥೆಗಳನ್ನು ಬರೆಯಲಾಗಿದೆ. ನೈತಿಕ ಅರಿವಿನ ತಿಳುವಳಿಕೆಗೆ ಈ ಕಥೆಗಳು ಸಹಕಾರಿ' ಎಂದರು.

ಬ್ಲಾಕ್ ಕಾಂಗ್ರೆಸ್‌ಗೆ ರವೀಂದ್ರ ನೇಮಕ



ಎನ್.ರವೀಂದ್ರ

ಬೊಮ್ಮನಹಳ್ಳಿ: ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಚಿಕ್ಕ ಬೇಗೂರು ಗೇಟ್‌ನ ಎನ್.ರವೀಂದ್ರ ಅವರನ್ನು ನೇಮಕ ಮಾಡಲಾಗಿದೆ. ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಮೂರು ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ.

ಮಾಯಣ್ಣ ಅಮಾನತಿಗೆ ಎಸಿಬಿ ಶಿಫಾರಸು

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿಯ ಪ್ರಥಮ ದರ್ಜೆ ಸಹಾಯಕ ಮಾಯಣ್ಣ ಅವರನ್ನು ಅಮಾನತುಗೊಳಿಸುವಂತೆ ಶಿಫಾರಸು ಮಾಡಲಾಗಿದೆ.

ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಇತ್ತೀಚೆಗೆ ಮಾಯಣ್ಣ ಅವರ ನಿವಾಸದ ಮೇಲೆ ದಾಳಿ ನಡೆಸಿದ್ದರು.

ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿದ ಆರೋಪಕ್ಕಾಗಿ ಇವರ ವಿರುದ್ಧ ಪ್ರಕರಣ ದಾಖಲಾಗಿದೆ.

ಈ ಬಗ್ಗೆ ಬಿಬಿಎಂಬಿಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ಬೆಂಗಳೂರು ನಗರ ವಿಭಾಗದ ಎಸಿಬಿ ಪೊಲೀಸ್ ವರಿಷ್ಠಾಧಿಕಾರಿ ಅವರು, 'ಮಾಯಣ್ಣ ಅವರನ್ನು ಅಮಾನತುಗೊಳಿಸಬೇಕು ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುವ ಸ್ಥಳದಿಂದ ಬೇರೆಡೆಗೆ ವರ್ಗಾಯಿಸಬೇಕು' ಎಂದು ತಿಳಿಸಿದ್ದಾರೆ.



ಪ್ರಮಾಣಪತ್ರ ವಿತರಣೆ

ಕೆ.ಆರ್.ಪುರ ಸಮೀಪದ ಎನ್‌ಆರ್‌ಐ ಬಡಾವಣೆಯಲ್ಲಿ ಶಾಂತಾ ಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಎಸ್‌ಕೆಎಫ್ ಕ್ರೀಡಾ ಉತ್ಸವದಲ್ಲಿ ಲೆಮನ್ ಆ್ಯಂಡ್ ಸ್ಪೂನ್ ಆಟದಲ್ಲಿ ಪಾಲ್ಗೊಂಡ ಮಕ್ಕಳಿಗೆ ಫೌಂಡೇಷನ್ ಅಧ್ಯಕ್ಷೆ ಶಾಂತಾ ಕೃಷ್ಣಮೂರ್ತಿ ಪ್ರಮಾಣಪತ್ರ ವಿತರಿಸಿದರು. ಸದಸ್ಯ ಕಲ್ಕೆರೆ ಕೃಷ್ಣಮೂರ್ತಿ ಇದ್ದರು. 28 ಬಡಾವಣೆಗಳ 800 ನಾಗರಿಕರು ಕ್ರೀಡಾ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಕ್ರಿಕೆಟ್, ಥ್ರೋ ಬಾಲ್, ಮಕ್ಕಳಿಗೆ ರನ್ನಿಂಗ್ ರೇಸ್ ಏರ್ಪಡಿಸಲಾಗಿತ್ತು.

ಐಐಎಚ್‌ಆರ್‌ನಲ್ಲಿ 'ವಿಶ್ವ ಮಣ್ಣಿನ ದಿನ'

'ಮಣ್ಣನ್ನು ರಕ್ಷಿಸಿದರೆ ಜನರ ಆರೋಗ್ಯ ಸುಧಾರಣೆ'

ಪ್ರಜಾವಾಣಿ ವಾರ್ತೆ



ಮಣ್ಣಿನ ದಿನದ ಅಂಗವಾಗಿ ರೈತರಿಗೆ ಮಣ್ಣಿನ ಆರೋಗ್ಯ ಪತ್ರ ವಿತರಿಸಲಾಯಿತು. ಐಐಎಚ್‌ಆರ್ ನಿರ್ದೇಶಕ ಬಿ.ಎನ್‌.ಎಸ್‌.ಮೂರ್ತಿ, ಕೆ.ನಾರಾಯಣ ಗೌಡ ಹಾಗೂ ಇತರರು ಇದ್ದಾರೆ.

ಬೆಂಗಳೂರು: 'ತೋಟಗಾರಿಕೆ ಬೆಳೆಗಳಲ್ಲಿ ಹೆಚ್ಚಾಗಿ ಕಂಡುಬರುವ ಪೋಷಕಾಂಶಗಳ ಕೊರತೆಗೆ ಮಣ್ಣಿನ ಅನಾರೋಗ್ಯವೇ ಕಾರಣ. ಮಣ್ಣಿನ ಆರೋಗ್ಯ ಕಾಪಾಡಿದರೆ ಮಾತ್ರ ಜನರ ಆರೋಗ್ಯ ಸುಧಾರಿಸಲು ಸಾಧ್ಯ' ಎಂದು ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ನಿರ್ದೇಶಕ ಬಿ.ಎನ್.ಎಸ್.ಮೂರ್ತಿ ಹೇಳಿದರು.

ಐಐಎಚ್‌ಆರ್ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ವಿಶ್ವ ಮಣ್ಣಿನ ದಿನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದಾದ್ಯಂತ ಇರುವ ಎಲ್ಲ ಸಣ್ಣ ಹಾಗೂ ಮಧ್ಯಮ ಹಿಡುವಳಿದಾರರಿಗೂ ಮಣ್ಣಿನ ಆರೋಗ್ಯ ಪತ್ರ ವಿತರಿಸಲಾಗುತ್ತಿದ್ದು, ಇಂತಹ ಯೋಜನೆಗಳು ಎಲ್ಲ ರೈತರನ್ನು ತಲುಪಬೇಕು' ಎಂದು ಹೇಳಿದರು.

ಅಖಿಲ ಭಾರತ ಕೃಷಿ ವಿಸ್ತರಣಾ ವಿಜ್ಞಾನಿಗಳ ಸಂಸ್ಥೆಯ ಅಧ್ಯಕ್ಷ ಪ್ರೊ.ಕೆ.ನಾರಾಯಣ ಗೌಡ, 'ಸಮಗ್ರ ಕೃಷಿಯಿಂದ ಮಣ್ಣಿನ ಜೊತೆಗೆ ರೈತನ ಸುಧಾರಣೆಯೂ ಆಗುತ್ತದೆ. ಮಣ್ಣಿನ ನಿಖರ ಪರೀಕ್ಷೆಗಳು ನಡೆದು, ರೈತರಿಗೆ ಮಾಹಿತಿ ನೀಡಿದಾಗ ಮಾತ್ರ ಎಲ್ಲ ರೈತರು ಕೃಷಿಯಲ್ಲಿ ಲಾಭದಾಯಕ ಯಶಸ್ಸು ಕಾಣುತ್ತಾರೆ' ಎಂದರು.

ಕಾರ್ಯಕ್ರಮದಲ್ಲಿ 556 ರೈತರಿಗೆ ಮಣ್ಣಿನ ಆರೋಗ್ಯ ಪತ್ರ ವಿತರಿಸಲಾಯಿತು. ಮಣ್ಣು ವಿಜ್ಞಾನ ವಿಭಾಗದ ಮುಖ್ಯಸ್ಥ ರಘುಪತಿ, ಪ್ರಧಾನ ವಿಜ್ಞಾನಿ ಬಿ.ನಾರಾಯಣ ಸ್ವಾಮಿ, ಎ.ಎನ್.ಗಣೇಶ ಮೂರ್ತಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಿ.ಫಾರ್ಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಔಷಧ ನಿಯಂತ್ರಣ ಇಲಾಖೆಯ ಪರೀಕ್ಷಾ ಪ್ರಾಧಿಕಾರ ಮಂಡಳಿಯು ಈ ಸಾಲಿನ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ಹಾಗೂ ಖಾಸಗಿ ಡಿ.ಫಾರ್ಮಸಿ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದಡಿ ಪ್ರಥಮ ವರ್ಷದ ಡಿ.ಫಾರ್ಮಾ ಕೋರ್ಸ್‌ನ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಿದೆ.

ಅರ್ಜಿಗಳನ್ನು ಮಂಡಳಿ ವೆಬ್‌ಸೈಟ್ www.beadpharmacy.orgನಲ್ಲೇ ಸಲ್ಲಿಸಬೇಕು. ಸೀಟು ಹಂಚಿಕೆ ಪ್ರಕ್ರಿಯೆ ದಿನಾಂಕ ಹಾಗೂ ಸಮಯವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು ಡಿ.21 ಕೊನೇ ದಿನ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 080-22483465 ಅಥವಾ ಇಮೇಲ್-principal.gcp123@gmail.com

ಕೃತಕ ಆಭರಣ ತಯಾರಿಕೆ ಕೋರ್ಸ್

ಬೆಂಗಳೂರು: ಜೆಎಸ್‌ಎಸ್ ಮಹಾವಿದ್ಯಾಪೀಠದ ಸುಧಾರಿತ ಆಭರಣ ವಿನ್ಯಾಸ ತಂತ್ರಜ್ಞಾನ ಕೇಂದ್ರದಲ್ಲಿ ಎರಡು ತಿಂಗಳ ಕೃತಕ ಆಭರಣ ತಯಾರಿಕೆ ಕೋರ್ಸ್ ಆರಂಭಿಸಲಾಗಿದೆ.

18ರಿಂದ 50 ವರ್ಷದೊಳಗಿನವರು ಕೋರ್ಸ್‌ಗೆ ಪ್ರವೇಶ ಪಡೆಯಬಹುದು. ಕೋರ್ಸ್‌ಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಕುಶಲಕರ್ಮಿ ಕಾರ್ಡ್ ಹಾಗೂ ಸ್ಟೈಫಂಡ್ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಜೆಎಸ್‌ಎಸ್ ಮಹಾವಿದ್ಯಾಪೀಠದ ಸುಧಾರಿತ ಆಭರಣ ವಿನ್ಯಾಸ ತಂತ್ರಜ್ಞಾನ ಕೇಂದ್ರ, ವಿಷ್ಣುವರ್ಧನ್ ರಸ್ತೆ. **ಸಂಪರ್ಕ:** 9108108123.

ಐಸಿಎಆರ್ ನೀಡಿರುವ ಶ್ರೇಯಾಂಕ

ಬೆಂಗಳೂರು ಕೃಷಿ ವಿ.ವಿಗೆ ಮೊದಲ ಸ್ಥಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ, ವಿಸ್ತರಣೆ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಾಧನೆ ಗುರುತಿಸಿ ಭಾರತೀಯ ಕೃಷಿ ಸಂಶೋಧನಾ ಪರಿಷತ್ (ಐಸಿಎಆರ್) ನೀಡುವ ಶ್ರೇಯಾಂಕದಲ್ಲಿ ದಕ್ಷಿಣ ಭಾರತದ ಮಟ್ಟದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಮೊದಲ ಸ್ಥಾನ ಪಡೆದಿದೆ.

2020-21ನೇ ಸಾಲಿನಲ್ಲಿ ದೇಶದಾದ್ಯಂತ ಕೃಷಿ ಮತ್ತು ಅದಕ್ಕೆ ಸಂಬಂಧಿ ಸಿದ 67 ವಿಶ್ವವಿದ್ಯಾನಿಲಯಗಳನ್ನು ಶ್ರೇಣೀಕರಿಸಲಾಗಿತ್ತು. ಈ ಪೈಕಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ರಾಷ್ಟ್ರಮಟ್ಟದಲ್ಲಿ ಮೂರನೇ ಸ್ಥಾನ ಹಾಗೂ ದಕ್ಷಿಣ ಭಾರತದಲ್ಲಿ ಮೊದಲ ಸ್ಥಾನ ಪಡೆದಿದೆ.

ಸಿಬ್ಬಂದಿ-ವಿದ್ಯಾರ್ಥಿಗಳ ಅನುಪಾತ, ವಿದ್ಯಾರ್ಥಿವೇತನ ಮತ್ತು ಪ್ರವೇಶಕ್ಕೆ ಸಂಬಂಧಿಸಿದಂತೆ ಸ್ನಾತಕೋತ್ತರ ವಿದ್ಯಾರ್ಥಿಗಳ ಸಾಧನೆ, ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳು, ಬಾಹ್ಯಮೂಲಗಳಿಂದ ಪಡೆದ ನಿಧಿಗಳು, ವಿಸ್ತರಣೆ ಚಟುವಟಿಕೆಗಳು ಮತ್ತು ಪಡೆದ ಪ್ರಶಸ್ತಿಗಳ ಮಾನದಂಡಗಳನ್ನು ಆಧರಿಸಿ ಕೃಷಿ ವಿಶ್ವವಿದ್ಯಾಲಯಗಳನ್ನು ಶ್ರೇಯಾಂಕಕ್ಕೆ ಪರಿಗಣಿಸಲಾಗುವುದು.

'ದೇಶದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳ ಗುಣಮಟ್ಟ ಹೆಚ್ಚಿಸಲು ಈ ಶ್ರೇಯಾಂಕ ನೀಡಲಾಗುತ್ತದೆ. ವಿದ್ಯಾರ್ಥಿಗಳು ಅತ್ಯುತ್ತಮ ಕೃಷಿ ವಿಶ್ವವಿದ್ಯಾಲಯಗಳನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ ವಿಶ್ವವಿದ್ಯಾಲಯಗಳ ಸ್ವಯಂಮೌಲ್ಯಮಾಪನಕ್ಕೆ ಈ ಶ್ರೇಯಾಂಕ ನೆರವಾಗಲಿದೆ' ಎಂದು ವಿಶ್ವವಿದ್ಯಾಲಯದ ಪ್ರಕಟಣೆಯು ತಿಳಿಸಿದೆ.

'ಶ್ರೇಯಾಂಕದಲ್ಲಿ ಮೊದಲ ಸ್ಥಾನ ಸಿಕ್ಕಿರುವುದು ವಿಶ್ವವಿದ್ಯಾಲಯದ ಕಾರ್ಯಕ್ಷಮತೆಗೆ ಹಿಡಿದ ಕೈಗನ್ನಡಿ. ಈ ಯಶಸ್ಸು ರೈತ ಬಾಂಧವರು, ವಿಶ್ವವಿದ್ಯಾಲಯದ ಅಧಿಕಾರಿಗಳು, ಬೋಧಕ-ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಸಲ್ಲುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ರಾಜೇಂದ್ರ ಪ್ರಸಾದ್ ಸಂತಸ ವ್ಯಕ್ತಪಡಿಸಿದರು.

ಆರೋಗ್ಯ ಕೇಂದ್ರಗಳಲ್ಲಿ ಸೂಕ್ತ ಸೌಲಭ್ಯಗಳೇ ಇಲ್ಲ; ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ವರದಿ ಸಲ್ಲಿಕೆ

ಆಸ್ಪತ್ರೆ ಸುಧಾರಣೆ: ವರದಿ ಜಾರಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ಸೌಕರ್ಯ ಪರಿಶೀಲಿಸಿರುವ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿರುವ ವರದಿಯನ್ನು ಅನುಷ್ಠಾನಗೊಳಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

'ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ಪತ್ರೆ ಆರಂಭಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಗುರುನಾಥ ವದ್ದೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಸರ್ಕಾರಿ ಆಸ್ಪತ್ರೆಗಳಿಗೆ ನಿಗದಿತ ಮೂಲ ಸೌಕರ್ಯ ಕಲ್ಪಿಸಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ಹೈಕೋರ್ಟ್ ನಿರ್ದೇಶನದ ಮೇರೆಗೆ ರಾಜ್ಯದ ವಿವಿಧ ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿದ್ದ ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳು ಅಲ್ಲಿನ ಸೌಕರ್ಯ ಪರಿಶೀಲಿಸಿದ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದ್ದಾರೆ. ರಾಜ್ಯದ ಅನೇಕ ಆರೋಗ್ಯ ಕೇಂದ್ರಗಳಲ್ಲಿ ಸೂಕ್ತ ಸೌಲಭ್ಯ ಇಲ್ಲ. ಕೆಲ ಕೇಂದ್ರಗಳಲ್ಲಿ ಪರಿಸ್ಥಿತಿ ತೀರಾ ಕೆಟ್ಟದಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಪ್ರಾಧಿಕಾರದ ಶಿಫಾರಸುಗಳು

- ಪಿಎಚ್‌ಸಿಗಳಲ್ಲಿ ಐಪಿಎಚ್‌ಎಸ್ ಮಾರ್ಗಸೂಚಿ ಜಾರಿಗೊಳಿಸಬೇಕು. ದಿನದ 24 ಗಂಟೆ ತುರ್ತು ಸೇವೆ ಲಭ್ಯವಾಗಿಸಬೇಕು.
- ತಜ್ಞರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಮೀಕ್ಷೆ ನಡೆಸಬೇಕು. ಶಿಥಿಲಗೊಂಡ ಕೇಂದ್ರಗಳ ದುರಸ್ತಿಗೆ ತುರ್ತು ಕ್ರಮ ಕೈಗೊಳ್ಳಬೇಕು.
- ಎಲ್ಲ ಪಿಎಚ್‌ಸಿಗಳಲ್ಲಿ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿಗೆ ವಸತಿ ಸೌಲಭ್ಯ ಕಲ್ಪಿಸಬೇಕು. ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ಒದಗಿಸಬೇಕು.
- ನಿಯಮಿತವಾಗಿ ಆರೋಗ್ಯ ಕೇಂದ್ರಗಳ ಪರಿಶೀಲನೆ ನಡೆಸಬೇಕು. ಎಲ್ಲ ಕೇಂದ್ರಗಳಲ್ಲಿ ಸಿಸಿಟಿವಿ ಕಡ್ಡಾಯವಾಗಿ ಅಳವಡಿಸಬೇಕು.

ಗೇಮ್ಸ್‌ಕ್ರಾಫ್ಟ್: ₹ 419 ಕೋಟಿ ಜಿಎಸ್‌ಟಿ ಪಾವತಿ ಆದೇಶಕ್ಕೆ ತಡೆ

ಬೆಂಗಳೂರು: 'ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಕಂಪೆನಿಯು, ₹ 419 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸುವಲ್ಲಿ ವಿಫಲವಾಗಿದೆ' ಎಂಬ ಕಾರಣಕ್ಕೆ ಅದರ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಲು ಜಿಎಸ್‌ಟಿ ಗುಪ್ತಚರ ವಿಭಾಗದ ಮಹಾನಿರ್ದೇಶಕರು ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಸೀಮಿತ ಅವಧಿಗೆ ಷರತ್ತುಬದ್ಧ ತಡೆ ನೀಡಿದೆ.

ಜಿಎಸ್‌ಟಿ ಗುಪ್ತಚರ ವಿಭಾಗದ ಆದೇಶ ಪ್ರಶ್ನಿಸಿ ಗೇಮ್ಸ್‌ಕ್ರಾಫ್ಟ್ ಕಂಪನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣದ ತನಿಖೆಯು ಪ್ರಾಥಮಿಕ ಹಂತದಲ್ಲಿದೆ. ಸಂಸ್ಥೆಯು ₹ 130 ಕೋಟಿ ಮೊತ್ತದ ಸ್ಥಿರಾಸ್ತಿಯನ್ನು ಭದ್ರತೆಯನ್ನಾಗಿ ನೀಡಿದೆ. ಆದರೂ, ಕಂಪನಿ ಸಲ್ಲಿಸಿದ ದಾಖಲೆ ಪರಿಗಣಿಸದೇ ಜಿಎಸ್‌ಟಿ ಗುಪ್ತಚರ ವಿಭಾಗ ಹೊರಡಿಸಿರುವ ಆದೇಶ ವಿವೇಚನಾರಹಿತವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಅರ್ಜಿದಾರ ಕಂಪನಿಯು ತನ್ನ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಡುವಂತೆ ಕೋರಿರುವುದು ನ್ಯಾಯಸಮ್ಮತವಾಗಿದೆ. ಆದ್ದರಿಂದ ಬಾಕಿ, ವೇತನ ಪಾವತಿ, ಗ್ರಾಹಕರು ಮತ್ತು ಪೂರೈಕೆದಾರರಿಗೆ ಹಣ ಪಾವತಿಸಲು ಗೇಮ್ಸ್‌ಕ್ರಾಫ್ಟ್‌ಗೆ ಅವಕಾಶ ಮಾಡಿಕೊಡಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ. ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಗಿದೆ.

ಸುದ್ದಿ 2 ನಿಮಿಷ

ಹೆಬ್ಬಾಳ ಕ್ಷೇತ್ರದಲ್ಲಿ ಸ್ಪರ್ಧೆಗೆ ಬನ್ನಿ : ಸಿದ್ದರಾಮಯ್ಯಗೆ ಆಹ್ವಾನ

ಬೆಂಗಳೂರು: 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೆಬ್ಬಾಳ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಬೇಕು. ಅವರಿಗೆ ಶಕ್ತಿ ತುಂಬುವ ಹೊಣೆ ನಮ್ಮದು' ಎಂದು ಹೆಬ್ಬಾಳ ಶಾಸಕ ಬೈರತಿ ಸುರೇಶ್ ಆಹ್ವಾನ ನೀಡಿದ್ದಾರೆ.

'ಸಿದ್ದರಾಮಯ್ಯ ಒಂದು ಕ್ಷೇತ್ರಕ್ಕೆ ಸೀಮಿತವಾದ ನಾಯಕರಲ್ಲ. ಹೆಬ್ಬಾಳ ಸೇರಿದಂತೆ ರಾಜ್ಯದ ಯಾವುದೇ ಕ್ಷೇತ್ರದಿಂದ ಸ್ಪರ್ಧಿಸಿದರೂ ಗೆದ್ದು ಬರುವ ವರ್ಚಸ್ಸು ಹಾಗೂ ಕಾರ್ಯಕರ್ತ ಪಡೆ ಹೊಂದಿರುವ ನಾಯಕ ಅವರು. ಸಿದ್ದರಾಮಯ್ಯ ಬಗ್ಗೆ ಕೀಳು ಹೇಳಿಕೆ ನೀಡುವವರಿಗೆ ತಲೆ ಕೆಟ್ಟಿರಬೇಕು' ಎಂದು ಅವರು ಹರಿಹಾಯ್ದಿದ್ದಾರೆ.

ಬಿ.ಬಿ. ಚಿಮ್ಮನಕಟ್ಟಿ ನೀಡಿರುವ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಅವರು, 'ಚಿಮ್ಮನಕಟ್ಟಿ ಅವರು ರಾಜಕಾರಣದಲ್ಲಿ ಚಲಾವಣೆ ಕಳೆದುಕೊಂಡ ನಾಣ್ಯ. ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ಅವರು ಸಿದ್ದರಾಮಯ್ಯ ವಿರುದ್ಧ ಕೀಳು ಹೇಳಿಕೆ ನೀಡಿದ್ದಾರೆ. ಇಂತಹ ಹೇಳಿಕೆಗಳಿಗೆ ಕವಡೆ ಕಾಸಿನ ಕಿಮ್ಮತ್ತು ಇಲ್ಲ' ಎಂದಿದ್ದಾರೆ.

'ಸಿದ್ದರಾಮಯ್ಯ ಅವರನ್ನೇ ನಂಬಿರುವ ದೊಡ್ಡ ಸಂಖ್ಯೆಯ ಸಮುದಾಯಗಳು ರಾಜ್ಯದೆಲ್ಲೆಡೆ ಇವೆ. ಇಂತಹ ಸಮುದಾಯಗಳ ಒಳಿತಿಗೆ, ಅಭಿವೃದ್ಧಿಗೆ ಸಿದ್ದರಾಮಯ್ಯ ಅವರ ಸಮರ್ಥ ನಾಯಕತ್ವದ ಅಗತ್ಯವಿದೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಲ ನೀಡಲು ಸಿದ್ದರಾಮಯ್ಯ ರಾಜ್ಯದಾದ್ಯಂತ ಸಂಚರಿಸಿ ಪ್ರಚಾರ ನಡೆಸುವ ಅಗತ್ಯವೂ ಇದೆ. ಹೀಗಾಗಿ ಹೆಬ್ಬಾಳದಿಂದ ಸ್ಪರ್ಧಿಸಬೇಕು' ಎಂದು ಅವರು ಹೇಳಿದ್ದಾರೆ.



ಆಯುಷ್ಮಾನ್: 1.12 ಲಕ್ಷ ಮಂದಿಗೆ ಸೌಲಭ್ಯ

ಬೆಂಗಳೂರು: 'ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆ'ಯಡಿ ನವೆಂಬರ್ ಒಂದೇ ತಿಂಗಳಲ್ಲಿ 1.12 ಲಕ್ಷ ಮಂದಿ ವೈದ್ಯಕೀಯ ಸೌಲಭ್ಯ ಪಡೆದಿದ್ದಾರೆ' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಈ ವರ್ಷ ಏಪ್ರಿಲ್‌ನಿಂದ ನವೆಂಬರ್ ತಿಂಗಳವರೆಗೆ 7.78 ಲಕ್ಷ ಮಂದಿ ಯೋಜನೆಯಡಿ ವೈದ್ಯಕೀಯ ಸೌಲಭ್ಯ ಪಡೆದಿದ್ದಾರೆ. ಅವರಲ್ಲಿ 6 ಲಕ್ಷಕ್ಕೂ ಹೆಚ್ಚು ಜನರು ಸರ್ಕಾರಿ ಆಸ್ಪತ್ರೆಗಳನ್ನೇ ಆಯ್ಕೆ ಮಾಡಿಕೊಂಡಿದ್ದಾರೆ' ಎಂದು ಹೇಳಿದ್ದಾರೆ.



ನಗರದ ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಆ್ಯಂಡ್ ಟೆಕ್ನಾಲಜಿ ಸಂಸ್ಥೆಯಲ್ಲಿ 'ಎಂಡ್ ಆಫ್ ಟರ್ಮ್ ಎಕ್ಸಿಬಿಟ್ಸ್' ಶೀರ್ಷಿಕೆಯಡಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕಲಾ ವಿನ್ಯಾಸಗಳನ್ನು ಪ್ರದರ್ಶಿಸಿದರು.

₹11 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಲಿನಿಂದ ಬಿಡುಗಡೆಯಾದ ನಂತರವೂ ಸಹಚರರ ಜೊತೆಗೂಡಿ ಮಾದಕ ವಸ್ತು ಮಾರಾಟ ದಂಧೆ ನಡೆಸುತ್ತಿದ್ದ ಅಂತರರಾಜ್ಯ ಡ್ರಗ್ ಪೆಡ್ಲರ್‌ನನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಅನೂಪ್ ಬಂಧಿತ. ಈತನಿಂದ ₹11 ಕೋಟಿ ಮೌಲ್ಯದ 11 ಕೆ.ಜಿ.ಹಶಿಶ್ ಆಯಿಲ್ ಹಾಗೂ 250 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಂಧಿತ ಆರೋಪಿ, ಆತನ ಸಹಚರರು ಆಂಧ್ರಪ್ರದೇಶ ಹಾಗೂ ಇತರ ರಾಜ್ಯಗಳಿಂದ ಹಶಿಶ್ ಆಯಿಲ್ ಮತ್ತು ಗಾಂಜಾ ತಂದು ಬೆಂಗಳೂರು, ಮಂಗಳೂರು ಹಾಗೂ ಕೇರಳದಲ್ಲಿ ಮಾರಾಟ ಮಾಡುತ್ತಿದ್ದರು. ಈ ಕುರಿತು ಒಂದು ತಿಂಗಳ ಹಿಂದೆ ಮಾಹಿತಿ ಲಭ್ಯವಾಗಿತ್ತು. ಈ ಜಾಲದ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು.



ಆರೋಪಿ ಅನೂಪ್

ಇದರಲ್ಲಿ ಭಾಗಿಯಾಗಿದ್ದವರ ಮೇಲೆ ನಿಗಾ ಇಟ್ಟಿದ್ದ ತಂಡವು ಅವರ ಚಲನ-ವಲನಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಿತ್ತು' ಎಂದು ಅವರು ಹೇಳಿದ್ದಾರೆ.

'ಹೆಬ್ಬಾಳ ಮೇಲ್ಸೇತುವೆಯ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಗ್ರಾಹಕರಿಗೆ ಗಾಂಜಾ ಮಾರುತ್ತಿರುವ ಬಗ್ಗೆ ಇದೇ 4ರಂದು ಮಾಹಿತಿ ಲಭಿಸಿತ್ತು. ಸಂಜೆ 4.20ರ ವೇಳೆಗೆ ಸ್ಥಳಕ್ಕೆ ಹೋಗಿ ಆತನನ್ನು ಬಂಧಿಸಲಾಗಿತ್ತು. ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಆತ ಅಂತರರಾಜ್ಯ ಡ್ರಗ್ ಪೆಡ್ಲರ್ ಎಂಬ ಮಾಹಿತಿ ಗೊತ್ತಾಯಿತು. ಆತನ ಬಳಿ ಇದ್ದ ಬ್ಯಾಗ್ ಪರಿಶೀಲಿಸಿದಾಗ ಹಶಿಶ್ ಆಯಿಲ್ ಹಾಗೂ ಗಾಂಜಾ ಸಿಕ್ಕಿತ್ತು' ಎಂದು ಮಾಹಿತಿ ನೀಡಿದ್ದಾರೆ.

'ಬಂಧಿತನ ವಿರುದ್ಧ ಬಾಣಸವಾಡಿಯ ಅಬಕಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈತನ ಸಹಚರರ ವಿರುದ್ಧ ಬೆಂಗಳೂರಿನ ವಿವಿಧ ಠಾಣೆ ಹಾಗೂ ಉಡುಪಿ ಜಿಲ್ಲೆಯ ಪೊಲೀಸ್ ಠಾಣೆಗಳಲ್ಲೂ ಪ್ರಕರಣಗಳಿವೆ. ಇತ್ತೀಚೆಗಷ್ಟೆ ಜೈಲಿನಿಂದ ಬಿಡುಗಡೆಯಾಗಿದ್ದ ಇವರು ಮತ್ತೆ ಮಾದಕ ವಸ್ತು ಮಾರಾಟ ದಂಧೆ ಮುಂದುವರಿಸಿರುವುದು ವಿಚಾರಣೆಯಿಂದ ತಿಳಿದುಬಂದಿದೆ. ಪ್ರಮುಖ ಪೆಡ್ಲರ್‌ವೊಬ್ಬ ತಲೆಮರೆಸಿಕೊಂಡಿದ್ದಾನೆ. ಆತನ ಕುರಿತು ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ರೌಡಿ ನಾರಾಯಣ ಹತ್ಯೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಷ್ಕರ್ಮಿಗಳ ಗುಂಪೊಂದು ರೌಡಿ ಜೆಸಿಬಿ ನಾರಾಯಣನ ಹತ್ಯೆಗೆ ಯತ್ನಿಸಿದ್ದು, ಆತ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಳಿಮಾವು ಠಾಣೆಯ ರೌಡಿಶೀಟರ್ ನಾರಾಯಣ ಇದೇ 5ರ ಬೆಳಿಗ್ಗೆ 9.30ರ ಸುಮಾರಿಗೆ ಹುಳಿಮಾವು ಡಿಎಲ್‌ಎಫ್ ರಸ್ತೆಯಲ್ಲಿ ಕಾರಿನಲ್ಲಿ ಹೋಗುತ್ತಿದ್ದ. ಆತನ ಬರುವಿಕೆಗಾಗಿಯೇ ಕಾದು ಕುಳಿತಿದ್ದ ದುಷ್ಕರ್ಮಿಗಳು ಮತ್ತೊಂದು ಕಾರಿನಿಂದ ಆತನ ಕಾರಿಗೆ ಡಿಕ್ಕಿ ಹೊಡೆಸಿದ್ದಾರೆ. ಬಳಿಕ ನಡುರಸ್ತೆಯಲ್ಲೇ ಮಾರಕಾಸ್ತ್ರಗಳಿಂದ ಆತನ ಮೇಲೆ ದಾಳಿ ನಡೆಸಲು ಮುಂದಾಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಅಪಾಯ ಅರಿತ ನಾರಾಯಣ, ಕಾರನ್ನು ಹಿಮ್ಮುಖವಾಗಿ ಚಲಾಯಿಸಿಕೊಂಡು ಹೋಗಿದ್ದಾನೆ. ಮಾರಕಾಸ್ತ್ರ ಹಿಡಿದಿರುವ ಮೂವರು ದುಷ್ಕರ್ಮಿಗಳು ಆತನ ಕಾರನ್ನು ಬೆನ್ನಟ್ಟಿ ಹೋಗಿದ್ದಾರೆ. ಆತ ಸಿಗದಿದ್ದಾಗ ಹಿಂದಕ್ಕೆ ಬಂದು ತಾವು ತಂದಿದ್ದ ಕಾರು ಏರಿ ಸ್ಥಳದಿಂದ ಪರಾರಿಯಾಗುವ ದೃಶ್ಯವೂ ಸಿಸಿಟಿವಿ ಕ್ಯಾಮೆರಾದಲ್ಲಿದೆ.

'ಒಟ್ಟು ಏಳು ದುಷ್ಕರ್ಮಿಗಳು ಈ ಕೃತ್ಯದಲ್ಲಿ ಭಾಗಿಯಾಗಿರುವ ಶಂಕೆ ಇದೆ. ಅವರ ಸುಳಿವು ಲಭಿಸಿದೆ. ಅದರ ಆಧಾರದಲ್ಲಿ ಅವರನ್ನು ಶೀಘ್ರವೇ ಬಂಧಿಸಲಾಗುತ್ತದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ದೇವಸ್ಥಾನದ ಹುಂಡಿ ಹೊತ್ತೊಯ್ದ ಕಳ್ಳರು

ಬೆಂಗಳೂರು: ನಡುರಾತ್ರಿಯಲ್ಲಿ ಚೋಳನಾಯಕನಹಳ್ಳಿಯ ಶಂಭುಲಿಂಗೇಶ್ವರ ಹಾಗೂ ಶನೇಶ್ವರ ದೇವಸ್ಥಾನಗಳಿಗೆ ನುಗ್ಗಿದ ದುಷ್ಕರ್ಮಿಗಳು ಅಲ್ಲಿದ್ದ ಹುಂಡಿ ಹೊತ್ತೊಯ್ದಿದ್ದಾರೆ. ಈ ಸಂಬಂಧ ಹೆಬ್ಬಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಳೆದ ಒಂದು ವರ್ಷದಿಂದ ದೇವಾಲಯದ ಹುಂಡಿ ಎಣಿಕೆ ಕಾರ್ಯ ನಡೆದಿರಲಿಲ್ಲ. ಅದರಲ್ಲಿ ₹25 ಸಾವಿರ ಹಣ ಇರಬಹುದೆಂದು ಅಂದಾಜಿಸಲಾಗಿದೆ. ಸ್ಥಳೀಯರೇ ಕಳ್ಳತನ ಮಾಡಿರುವ ಶಂಕೆ ಇದೆ. ಖದೀಮರು ಹುಂಡಿ ಹೊತ್ತೊಯ್ಯುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲೂ ಸೆರೆಯಾಗಿದೆ. ಕತ್ತಲೆಯಾಗಿದ್ದರಿಂದ ಆರೋಪಿಗಳ ಗುರುತು ಸರಿಯಾಗಿ ಕಾಣುತ್ತಿಲ್ಲ. ಇತರ ಸುಳಿವುಗಳ ಆಧಾರದಲ್ಲಿ ಅವರನ್ನು ಬಂಧಿಸಲಾಗುತ್ತದೆ' ಎಂದು ಪೊಲೀಸರು ಹೇಳಿದ್ದಾರೆ.

ರೈತರು, ವಿದ್ಯಾರ್ಥಿಗಳ ದತ್ತಾಂಶ ಮಾರಾಟಕ್ಕೆ ಮುಂದಾದ ರಾಜ್ಯ ಸರ್ಕಾರ

ಇ–ಸಹಮತಿಗೆ ಕಾನೂನು ಇಲಾಖೆ ಅಂಕಿತ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಬಳಿ ಇರುವ ರೈತರು ಮತ್ತು ವಿದ್ಯಾರ್ಥಿಗಳ ಸಮಗ್ರ ಮಾಹಿತಿಯುಳ್ಳ ದತ್ತಾಂಶವನ್ನು ಸಂಪೂರ್ಣ ಸಹಮತಿಯ ಆಧಾರದಲ್ಲಿ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲು ಅವಕಾಶ ಕಲ್ಪಿಸುವ 'ಇ-ಸಹಮತಿ' ಯೋಜನೆ ಅಂತಿಮ ಅನುಮೋದನೆಗಾಗಿ ಕಾನೂನು ಇಲಾಖೆಯನ್ನು ತಲುಪಿದೆ.

ತನ್ನ ಬಳಿ ಇರುವ ದತ್ತಾಂಶವನ್ನು ಮಾರಾಟ ಮಾಡುವುದಕ್ಕಾಗಿ 'ಸಹಮತಿ ಆಧಾರದ ವ್ಯವಸ್ಥೆ'ಯೊಂದನ್ನು ರೂಪಿಸುವ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ 2020ರ ಡಿಸೆಂಬರ್‌ನಲ್ಲಿ ಆರಂಭಿಸಿತ್ತು. ಅದರ ಮುಂದುವರಿದ ಭಾಗವಾಗಿಯೇ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ಅಧಿಸೂಚಿತ ಮಾರುಕಟ್ಟೆಗಳ ಬಳಿ ರೈತರಿಂದ ಕೃಷಿ ಉತ್ಪನ್ನ ಖರೀದಿಸುವ ಕಂಪನಿಗಳಿಗೆ ರೈತರ ದತ್ತಾಂಶ ಒದಗಿಸುವುದು ಇದರ ಉದ್ದೇಶವಾಗಿತ್ತು.

ಈಗ ವಿದ್ಯಾರ್ಥಿಗಳ ದತ್ತಾಂಶವನ್ನೂ ಮಾರಾಟ ಮಾಡಲು ಸರ್ಕಾರ ಯೋಚಿಸಿದೆ. ಡಿಸೆಂಬರ್ 10ರ ವೇಳೆಗೆ ಇ-ಸಹಮತಿ ಯೋಜನೆಗೆ ಕಾನೂನು ಇಲಾಖೆಯ ಒಪ್ಪಿಗೆ ದೊರೆಯುವ ಸಾಧ್ಯತೆ ಇದೆ. ಆ ಬಳಿಕ ಮೊಬೈಲ್ ತಂತ್ರಾಂಶದ ಮೂಲಕ ದತ್ತಾಂಶಗಳ ಖರೀದಿಗೆ ಅವಕಾಶ ದೊರೆಯಲಿದೆ ಎಂದು ಇ-ಆಡಳಿತ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ (ಫ್ರೂಟ್ಸ್) ತಂತ್ರಾಂಶದಲ್ಲಿ ರಾಜ್ಯದ 70 ಲಕ್ಷ ರೈತರ ಮಾಹಿತಿಯ ಸಂಗ್ರಹವಿದೆ. ಜಮೀನುಗಳ ವಿಸ್ತೀರ್ಣ, ಸರ್ವೆ ನಂಬರ್, ಬೆಳೆ ಮತ್ತಿತರ ಮಾಹಿತಿ ಈ ದತ್ತಾಂಶದಲ್ಲಿದೆ. ರೈತರ ಸಹಮತಿಯನ್ನು ಪಡೆದು ಈ ಮಾಹಿತಿಯನ್ನು ಖಾಸಗಿ ಕಂಪನಿಗಳ ಜತೆ ಹಂಚಿಕೊಳ್ಳಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಬೃಹತ್ ಕಂಪನಿಗಳು ನೇಮಕಾತಿಯ ಸಂದರ್ಭದಲ್ಲಿ ಅಭ್ಯರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಪರಿಶೀಲಿಸಲು ಬಯಸುತ್ತವೆ. ಅಂತಹವರಿಗೆ ನೇರವಾಗಿ ಸರ್ಕಾರದ ಬಳಿ ಲಭ್ಯವಿರುವ ಅಂಕಪಟ್ಟಿ, ಪ್ರಮಾಣಪತ್ರ ಮತ್ತಿತರ ದಾಖಲೆಗಳನ್ನು ಪಡೆಯಲು ಅವಕಾಶ ಕಲ್ಪಿಸುವ ಪ್ರಸ್ತಾವವಿದೆ. ಕೇಂದ್ರದ ರಾಷ್ಟ್ರೀಯ ಶೈಕ್ಷಣಿಕ ದಾಖಲೆಗಳ ಸಂಗ್ರಹಾಗಾರದಲ್ಲಿ (ಎನ್‌ಎಡಿ) ಇರುವ ಮಾಹಿತಿಯನ್ನು ಸಹಮತಿ ಆಧಾರದಲ್ಲಿ ಹಂಚಿಕೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದರು.

ದತ್ತಾಂಶ ಮಾರಾಟಕ್ಕೆ ಈವರೆಗೂ ದರ ನಿಗದಿಯಾಗಿಲ್ಲ. ಮೊಬೈಲ್ ಆ್ಯಪ್ ಮೂಲಕ ದತ್ತಾಂಶ ಒದಗಿಸುವ ಈ ಯೋಜನೆ ವೈಯಕ್ತಿಕ ದತ್ತಾಂಶ ಮಸೂದೆಯ ವ್ಯಾಪ್ತಿಗೆ ಬರುತ್ತದೆ. ಈ ಮಸೂದೆಗೆ ಸಂಸತ್ತಿನ ಅಂಗೀಕಾರ ದೊರೆಯುವುದು ಬಾಕಿ ಇದೆ ಎಂದು ಮೂಲಗಳು ಹೇಳಿವೆ.

ಜಂಟಿ ಕಮಿಷನರ್ ಮನೆ ಕೆಲಸದ ಮಹಿಳೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ ಅವರ ಮನೆಯಿಂದ ನಾಪತ್ತೆಯಾಗಿದ್ದ ಕೆಲಸದ ಮಹಿಳೆಯನ್ನು ಸಂಜಯನಗರ ಠಾಣೆ ಪೊಲೀಸರು ಪತ್ತೆಮಾಡಿದ್ದಾರೆ.

'ಬಳ್ಳಾರಿಯ ಮಹಿಳೆ ಹಿಂದಿನ ಎರಡೂವರೆ ವರ್ಷದಿಂದ ರವಿಕಾಂತೇಗೌಡ ಅವರ ಮನೆಯಲ್ಲಿ ಕೆಲಸಕ್ಕಿದ್ದರು. ಕೆಲಸದಲ್ಲಿ ಮುಂದುವರಿಯುವುದಕ್ಕೆ ಆಸಕ್ತಿ ಇರಲಿಲ್ಲ. ಹೀಗಾಗಿ ಮನೆಬಿಟ್ಟು ಹೋಗಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದಾರೆ.

ಮನೆಯಿಂದ ₹4,000 ನಗದು ಹಾಗೂ ಮತ್ತೊಬ್ಬ ಕೆಲಸದಾಕೆಯ ಮೊಬೈಲ್ ತೆಗೆದುಕೊಂಡು ಹೋಗಿದ್ದಾಗಿ ಒಪ್ಪಿಕೊಂಡಿದ್ದಾರೆ. ಹೇಳಿಕೆ ಪಡೆದು ಅವರನ್ನು ಮನೆಗೆ ಕಳುಹಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಮಹಿಳೆಯು ಚಿನ್ನಾಭರಣಗಳನ್ನು ಕಳವು ಮಾಡಿಲ್ಲ. ಆಕೆಯಿಂದ ಹಣವನ್ನಷ್ಟೇ ಜಪ್ತಿ ಮಾಡಲಾಗಿದೆ. ಮೊಬೈಲ್ ಬೇರೊಬ್ಬರಿಗೆ ಕೊಟ್ಟಿದ್ದಾಗಿ ತಿಳಿಸಿದ್ದು ಅದನ್ನು ವಶಕ್ಕೆ ಪಡೆಯಲಾಗುತ್ತದೆ' ಎಂದು ತಿಳಿಸಿದ್ದಾರೆ.

ಕೊಕ್ಕರೆ ಬೆಳ್ಳೂರು; 3 ಪೆಲಿಕಾನ್ ಸಾವು



ಅಸ್ವಸ್ಥಗೊಂಡಿರುವ ಪೆಲಿಕಾನ್

ಭಾರತೀನಗರ (ಮಂಡ್ಯ ಜಿಲ್ಲೆ): 'ಸಮೀಪದ ಕೊಕ್ಕರೆಬೆಳ್ಳೂರು ಪಕ್ಷಿಧಾಮದಲ್ಲಿ ತಿಂಗಳ ಅವಧಿಯಲ್ಲಿ ಮರದ ಮೇಲಿಂದ ಬಿದ್ದು 3 ಪೆಲಿಕಾನ್‌ಗಳು ಮೃತಪಟ್ಟಿವೆ' ಎಂದು ಗ್ರಾಮದ ಹೆಜ್ಜಾರ್ಲೆ ಬಳಗದ ಲಿಂಗೇಗೌಡ ತಿಳಿಸಿದ್ದಾರೆ.

'ಮೃತಪಟ್ಟ ಒಂದು ಪೆಲಿಕಾನ್‌ನ ಕಳೇಬರವನ್ನು ಶಿವಪುರದ ಪಶು ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಲಾಗಿದೆ. ಮತ್ತೆರಡು ಪೆಲಿಕಾನ್‌ಗಳ ಕಳೇಬರವನ್ನು ಬೆಂಗಳೂರಿನ ಹೆಬ್ಬಾಳದ ಪಶು ಜೈವಿಕ ಸಂಸ್ಥೆಗೆ ಕಳುಹಿಸಿಕೊಡಲಾಗಿತ್ತು. ಜಂತುಹುಳ ಬಾಧೆಯಿಂದ ಮೃತಪಟ್ಟಿವೆ ಎಂದು ವರದಿ ತಿಳಿಸಿದೆ' ಎಂದು ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕ ಹನುಮೇಗೌಡ ತಿಳಿಸಿದರು.

ಅಕ್ಟೋಬರ್ ಆರಂಭದಲ್ಲಿ ಗ್ರಾಮಕ್ಕೆ ವಲಸೆ ಬಂದಿರುವ ಸುಮಾರು 70 ಪೆಲಿಕಾನ್‌ಗಳು ಗೂಡು ಕಟ್ಟಿ ಸಂತಾನೋತ್ಪತ್ತಿ ಮಾಡಲು ಆರಂಭಿಸಿದ್ದವು.

ಮುಖ್ಯಮಂತ್ರಿ ವಿರುದ್ಧ ಪಿಸಿಆರ್ ದಾಖಲು: ವಿನಯ್ ರಾಜಾವತ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಗೃಹ ಸಚಿವ ಆರಗ ಜ್ಞಾನೇಂದ್ರರ ನಂತರ ಮುಖ್ಯಮಂತ್ರಿ ಸಹ ಪೊಲೀಸರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದು, ಇವರ ವಿರುದ್ಧ ನ್ಯಾಯಾಲಯದಲ್ಲಿ ಸರ್ಕಾರದ ಅನುಮತಿಯೊಂದಿಗೆ ಪಿಸಿಆರ್ ದಾಖಲಿಸಲಾಗುವುದು ಎಂದು ವಿದ್ಯಾರ್ಥಿ ಸಂಘಟನೆ ರಾಜ್ಯಾಧ್ಯಕ್ಷ ವಿನಯ್ ಕೆ.ಸಿ. ರಾಜಾವತ್ ಹೇಳಿದರು.

'ಬೀದರ್‌ನ ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಪೊಲೀಸರನ್ನು ಗೇಟ್‌ಔಟ್ ಎಂದು ನಿಂದಿಸಿದ್ದಾರೆ. ಪೊಲೀಸರು ಸಾರ್ವಜನಿಕರ ರಕ್ಷಣೆಗಾಗಿ ಹಗಲಿರುಳೂ ಶ್ರಮಿಸುತ್ತಿದ್ದಾರೆ. ಆದರೆ, ರಾಜಕಾರಣಿಗಳು ಇವರನ್ನು ನಿಂದಿಸುತ್ತಿರುವುದು ವಿಪರ್ಯಾಸ. ಈ ಹಿಂದೆ ಆರಗ ಜ್ಞಾನೇಂದ್ರ ಅವರನ್ನು ನಾಯಿಗಳು ಎಂದು ಸಂಬೋಧಿಸಿದ್ದರು. ಈಗ ಮುಖ್ಯಮಂತ್ರಿ 'ನಿಮ್ಮ ಅವಶ್ಯಕತೆ ಇಲ್ಲ. ಗೇಟ್‌ಔಟ್' ಎಂದು ಪೊಲೀಸರನ್ನು ನಿಂದಿಸಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಇಂತಹ ಅತಿರೇಕಗಳು ನಡೆಯುತ್ತಿರುವುದು ಖಂಡನೀಯ. ಇದು ಪೊಲೀಸರ ಆತ್ಮಸ್ಥೈರ್ಯವನ್ನೇ ಕುಗ್ಗಿಸುತ್ತದೆ' ಎಂದು ಆರೋಪಿಸಿದರು.

'ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿ ಕೂಡಲೇ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಬಹಿರಂಗವಾಗಿ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಅವರ ವಿರುದ್ಧ ಕಾನೂನಿನ ಮೊರೆ ಹೋಗಲಾಗುವುದು' ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವೆಂಕಟೇಶ್ ನಾಯ್ಕ್, ಸೈಯದ್, ಗೌಸ್ ಪೀರ್, ನಜರುಲ್ಲಾ ಇದ್ದರು.

ಜೆಡಿಎಸ್ ಜತೆ ಒಳ ಒಪ್ಪಂದ ಇಲ್ಲ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಸ್ಪರ್ಧಿಸದ ಕಡೆ, ಬಿಜೆಪಿಗೆ ಬೆಂಬಲ ನೀಡುವಂತೆ ಕೇಳಿದ್ದೇವೆ. ಆ ಪಕ್ಷದ ವರಿಷ್ಠರು ನಿರ್ಧಾರವನ್ನು ಸ್ಥಳೀಯ ಮುಖಂಡರ ವಿವೇಚನೆಗೆ ಬಿಟ್ಟಿದ್ದಾರೆ, ಜೆಡಿಎಸ್‌ನೊಂದಿಗೆ ಒಳ ಒಪ್ಪಂದ ಮಾಡಿಕೊಂಡಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಕ್ರಿಯಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಚುನಾವಣೆಯಲ್ಲಿ ಬಿಜೆಪಿ ಕನಿಷ್ಠ 11 ರಿಂದ ಗರಿಷ್ಠ 16 ಸ್ಥಾನಗಳಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಚಿಕ್ಕಮಗಳೂರಿನಲ್ಲಿ ಬಿಜೆಪಿಯ ಪ್ರಾಣೇಶ್ 500ಕ್ಕೂ ಹೆಚ್ಚು ಮತಗಳ ಅಂತರದಿಂದ ಜಯಗಳಿಸಲಿದ್ದಾರೆ' ಎಂದರು.



ಸಿ.ಟಿ.ರವಿ

'ದತ್ತ ಪೀಠ ವಿಚಾರಕ್ಕೆ ಸಂಬಂಧಿಸಿದಂತೆ ಸಂಪುಟ ಉಪಸಮಿತಿ ರಚನೆಯಾಗಿದೆ. ಉಪ ಸಮಿತಿಯು ಪರಿಶೀಲನೆ ಮಾಡಿ ಶಿಫಾರಸು ಮಾಡಲಿದೆ. ದತ್ತಪೀಠದಲ್ಲಿ ಅರ್ಚಕರ ನೇಮಕಕ್ಕೆ ಸಂಬಂಧಿಸಿದ ಅಡೆತಡೆಗಳು ನಿವಾರಣೆ ಆಗುವ ಭರವಸೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಪ್ರಧಾನಿ ಮೋದಿ ಅವರನ್ನು ಜಗತ್ತಿನ ಎಲ್ಲ ಕಡೆ ಗುರುತಿಸುತ್ತಾರೆ. ಸಿದ್ದರಾಮಯ್ಯ ಅವರನ್ನು ಕರ್ನಾಟಕದ ಹೊರಗೆ ಯಾರೂ ಗುರುತಿಸಲ್ಲ, ಪಾಕಿಸ್ತಾನದಲ್ಲಿ ಯಾರಾದರೂ ಗುರುತಿಸಬಹುದು' ಎಂದು ವ್ಯಂಗ್ಯವಾಡಿದರು.

ನಾಗರಹಾವು ಸಾವು: ಎಂಜಿನಿಯರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ


ಶಿವಮೊಗ್ಗ: ಇಲ್ಲಿಯ ಭಾರ್ಗವಿ ಪೆಟ್ರೋಲ್ ಪಂಪ್ ಬಳಿ ಸ್ಮಾರ್ಟ್ ಸಿಟಿ ಕಾಮಗಾರಿಯ ಕಾರಣ ಆಂಜನೇಯ ಸ್ವಾಮಿ ದೇವಾಲಯದ ಕಟ್ಟಡವನ್ನು ತೆರವುಗೊಳಿಸುವಾಗ ಪ್ರತ್ಯಕ್ಷವಾದ ನಾಗರಹಾವನ್ನು ಜೆಸಿಬಿಯಿಂದ ಕೊಂದ ಪ್ರಕರಣಕ್ಕೆ ಸಬಂಧಿಸಿ ಅರಣ್ಯ ಇಲಾಖೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಭಾನುವಾರ ಭಾರ್ಗವಿ ಪೆಟ್ರೋಲ್ ಪಂಪ್ ಬಳಿ ಸ್ಮಾರ್ಟ್‌ಸಿಟಿ ಕಾಮಗಾರಿ ನಡೆದಾಗ ಫುಟ್‌ಪಾತ್ ಮೇಲೆ ಇದ್ದ ದೇವಸ್ಥಾನವನ್ನು ಕೆಡವಲಾಗಿತ್ತು. ಈ ವೇಳೆ ನಾಗರಹಾವು ಪ್ರತ್ಯಕ್ಷವಾಗಿತ್ತು. ಆಗ ಹಾವು ಸಾವನ್ನಪ್ಪಿತ್ತು.

ಕಣ್ಣಿಗೆ ಹಾವು ಕಂಡರೂ ಉರಗ ತಜ್ಞ ಅಥವಾ ಅರಣ್ಯ ಇಲಾಖೆಯವರನ್ನು ಕರೆಯಿಸದೇ ಸ್ಮಾರ್ಟ್ ಸಿಟಿ ಅಧಿಕಾರಿಗಳು ಕಾಮಗಾರಿ ಮುಂದುವರಿಸಿದ್ದಾರೆ. ಅವರ ನಿರ್ಲಕ್ಷ್ಯದಿಂದಾಗಿ ಹಾವು ಸಾವನ್ನಪ್ಪಿದೆ ಎಂದು ಆರೋಪಿಸಿ ಪಾಲಿಕೆ ಸದಸ್ಯ ರಾಹುಲ್ ಬಿದರೆ ಮತ್ತು ತಂಡದವರು ಸ್ಮಾರ್ಟ್ ಸಿಟಿ ಎಂಜಿನಿಯರ್ ಎ. ವಿವಿಜಯ್ ಕುಮಾರ್ ವಿರುದ್ಧ ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ನಿಧನ ವಾರ್ತೆ


ವಿ. ದೊಡ್ಡ ಮಹದೇವಯ್ಯ



ಕನಕಪುರ: ವಸತಿ ಸಚಿವ ವಿ.ಸೋಮಣ್ಣ ಅವರ ಹಿರಿಯ ಸಹೋದರ ನಿವೃತ್ತ ಶಿಕ್ಷಕ ವಿ. ದೊಡ್ಡ ಮಹದೇವಯ್ಯ (80) ಅನಾರೋಗ್ಯದಿಂದ ನಿಧನರಾದರು. ಅವರಿಗೆ ನಿವೃತ್ತ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ ಸಿ.ಎಂ. ರಾಜೇಂದ್ರಕುಮಾರ್ ಸೇರಿದಂತೆ ಮೂವರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ಮೃತರ ಅಂತ್ಯಸಂಸ್ಕಾರವು ಬುಧವಾರ ಚಿಕ್ಕಮುದುವಾಡಿ ಗ್ರಾಮದಲ್ಲಿ ನೆರವೇರಿತು. ವಸತಿ ಸಚಿವ ವಿ.ಸೋಮಣ್ಣ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ಕೆ.ಎನ್.ಗೋಪಾಲ್



ಬೆಂಗಳೂರು: ವಿಧಾನಸಭೆ ಸಚಿವಾಲಯದ ಸೆಕ್ಷನ್ ಅಧಿಕಾರಿಯಾಗಿದ್ದ ಕೆ.ಎನ್. ಗೋಪಾಲ್ (64) ಅವರು ಮಂಗಳವಾರ ರಾತ್ರಿ ನಿಧನರಾದರು.

ಲಗ್ಗೆರೆಯಲ್ಲಿ ವಾಸವಿದ್ದ ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಸುಮನಹಳ್ಳಿಯ ಚಿತಾಗಾರದಲ್ಲಿ ಬುಧವಾರ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಮನಗರ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಘಟನೆ

ತರಗತಿಗೆ ನುಗ್ಗಿ ವಿದ್ಯಾರ್ಥಿಗೆ ಕಚ್ಚಿದ ಕೋತಿ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ನಾಗೋಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ತರಗತಿಗೆ ಬುಧವಾರ ಸಂಜೆ ಕೋತಿ ನುಗ್ಗಿದ್ದು, ವಿದ್ಯಾರ್ಥಿಯೊಬ್ಬನಿಗೆ ಕಚ್ಚಿ ಗಾಯಗೊಳಿಸಿದೆ.

ನಾಲ್ಕನೇ ತರಗತಿ ವಿದ್ಯಾರ್ಥಿ ಲಿಖಿತ್ ಕಾಲು ಹಾಗೂ ಕೈಗೆ ತೀವ್ರ ಗಾಯವಾಗಿದೆ. ಸಂಜೆ 4 ಗಂಟೆ ವೇಳೆಗೆ ಪಾಠ ನಡೆಯುತ್ತಿದ್ದ ವೇಳೆ ಕೋತಿ ಏಕಾಏಕಿ ತರಗತಿಗೆ ನುಗ್ಗಿತು. ಅದು ವಿದ್ಯಾರ್ಥಿಯ ಮೇಲೆರಗುವುದನ್ನು ನೋಡಿ ಶಿಕ್ಷಕಿ ಕವಿತಾ ಕೋಲು ಹಾಗೂ ಇಟ್ಟಿಗೆಯಿಂದ ಕೋತಿ ಓಡಿಸಿದ್ದಾರೆ. ಅಷ್ಟರಲ್ಲಿ ಆಗಲೇ ಕೋತಿ ವಿದ್ಯಾರ್ಥಿ ಕಾಲಿಗೆ ಮಾಂಸ ಹೊರಬರುವಂತೆ ಬಲವಾಗಿ ಕಚ್ಚಿ ಗಾಯಗೊಳಿಸಿದೆ.



ವಿದ್ಯಾರ್ಥಿ ಕಾಲಿಗೆ ಗಾಯವಾಗಿರುವುದು

ವಿದ್ಯಾರ್ಥಿಗಳ ಚೀರಾಟ ಕೇಳಿ ಪಕ್ಕದ ತರಗತಿಗಳ ಶಿಕ್ಷಕರು ಹಾಗೂ ಶಾಲೆ ಸುತ್ತಲಿನ ಮನೆಗಳ ನಿವಾಸಿಗಳು ಓಡಿಬಂದು ಕೋತಿಯನ್ನು ಅಲ್ಲಿಂದ ಓಡಿಸಿದ್ದಾರೆ. ತರಗತಿಯ ಅಲ್ಲಲ್ಲಿ ರಕ್ತ ಚೆಲ್ಲಿದ್ದು, ಗಾಯಾಳುವಿಗೆ ಹತ್ತಿರದ ಕೈಲಾಂಚ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಯಿತು. ತೀವ್ರ ರಕ್ತಸ್ರಾವವಾದ ಕಾರಣ ವಿದ್ಯಾರ್ಥಿಯನ್ನು ಆತನ ಪೋಷಕರು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದರು.

ಕಳೆದೊಂದು ವಾರದಿಂದ ಕೈಲಾಂಚ ಗ್ರಾಮದ ಆಸುಪಾಸಿನಲ್ಲಿ ಓಡಾಡುತ್ತಿದ್ದ ಕೋತಿ ಸೋಮವಾರ ಸಂಜೆ ಕೈಲಾಂಚ ಗ್ರಾಮದಲ್ಲಿ 4 ಮಕ್ಕಳಿಗೆ ಒಬ್ಬ ಮಹಿಳೆಗೆ ಕಚ್ಚಿ ಗಾಯಗೊಳಿಸಿತ್ತು. ಅವರೆಲ್ಲರಿಗೂ ಚಿಕಿತ್ಸೆ ಕೊಡಿಸಲಾಗಿತ್ತು ಎಂದು ಸ್ಥಳೀಯರು ತಿಳಿಸಿದರು.

ಭೇಟಿ: ರಾಮನಗರ ವಲಯ ಅರಣ್ಯಾಧಿಕಾರಿ ಕಿರಣ್‌ಕುಮಾರ್ ಶಾಲಾ ಕೊಠಡಿಗೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಆಸ್ಪತ್ರೆಯಲ್ಲಿ ವಿದ್ಯಾರ್ಥಿಯ ಆರೋಗ್ಯ ವಿಚಾರಿಸಿದರು. ಚಿಕಿತ್ಸೆಗೆಂದು ₹5 ಸಾವಿರ ನೀಡಿದ್ದು, ಚಿಕಿತ್ಸಾ ವೆಚ್ಚವನ್ನು ಇಲಾಖೆಯೇ ಭರಿಸಲಿದೆ ಎಂದು ಅವರು ತಿಳಿಸಿದರು.

ಚಿತ್ರಾವಳಿ



ಸಶಸ್ತ್ರ ಪಡೆಗಳ ಧ್ವಜ ನಿಧಿಗೆ ಅತೀ ಹೆಚ್ಚು ನಿಧಿ ಸಂಗ್ರಹಿಸಿದ ಕೆಎಸ್‌ಆರ್‌ಟಿಸಿಗೆ ಪ್ರಶಸ್ತಿ ಲಭಿಸಿದೆ. ಸತತ 7ನೇ ಬಾರಿಗೆ ಈ ಪ್ರಶಸ್ತಿಯನ್ನು ನಿಗಮ ಪಡೆದಿದೆ. ರಾಜ್ಯಪಾಲ ತಾವರ ಚಂದ ಗೆಹಲೋತ್ ಅವರು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಗೃಹ ಸಚಿವ ಆರಗ ಜ್ಞಾನೇಂದ್ರ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ನಿವೃತ್ತ ಮೇಜರ್ ಜನರಲ್ ಹರೀಶ್ ಎಸ್. ಶಾನಭಾಗ್ ಇದ್ದರು



ನಗರದ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿರುವ ಹವ್ಯಾಸಿ ಕಲಾವಿದರ ಚಿತ್ರಕಲೆ ಪ್ರದರ್ಶನವನ್ನು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಪ್ರೊ.ಕೆ.ಎಸ್.ಅಪ್ಪಾಜಯ್ಯ ಉದ್ಘಾಟಿಸಿ ವೀಕ್ಷಿಸಿದರು. ಡಿ.13ರವರೆಗೆ ಪ್ರದರ್ಶನ ಇರಲಿದೆ. ಪ್ರಜಾವಾಣಿ ಚಿತ್ರ



ನಗರದಲ್ಲಿ ದಿ ಗ್ರೈನ್ ಮರ್ಚೆಂಟ್ ಕೋ–ಆಪರೇಟಿವ್ ಬ್ಯಾಂಕ್ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ 160ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪುರಸ್ಕರಿಸಲಾಯಿತು. ಅಧ್ಯಕ್ಷ ಎಂ. ಚಂದ್ರ ಇದ್ದರು ಪ್ರಜಾವಾಣಿ ಚಿತ್ರ

'ಇಮ್ಯಾಜಿನ್ ಕ್ಲಾಥ್ ಬ್ಯಾಂಕ್': ಬಡವರ ನೆರವಿಗೆ ನಿಂತ ಟ್ರಸ್ಟ್

'ಇ–ಸಿಟಿ'ಯಲ್ಲಿ ₹1ಕ್ಕೆ ಸಿಗಲಿದೆ ಬಟ್ಟೆ

• ಕುಮಾರ ಸುಬ್ರಹ್ಮಣ್ಯ ಎಸ್.

ಹೊಸ ಬೆಳಕು

ಬೆಂಗಳೂರು: ಉಣಲೊಂದು ತುತ್ತು, ಉಡಲೊಂದು ಬಟ್ಟೆ ಮನುಷ್ಯನಿಗೆ ಅನಿವಾರ್ಯ. ಸುಡುವ ಬಿಸಿಲು, ಕೊರೆಯುವ ಚಳಿ ತಡೆಯಲು ಬೇಕಾದ ಬಟ್ಟೆ ಖರೀದಿಸಲು ಬಡವರಿಗೆ ಸಾಧ್ಯವಿಲ್ಲ. ಕೇವಲ ₹1ಕ್ಕೆ ಬಟ್ಟೆ ಕೊಡಲಾಗುತ್ತಿದೆ ಎಂದರೆ ನಂಬಲೂ ಅಸಾಧ್ಯ.

ಬಡವರಿಗೆ ಉಡುಗೆ ನೀಡುವ ಜತೆಗೆ, ಬಟ್ಟೆಯ ಸದುಪಯೋಗದ ಬಗ್ಗೆ ಸಂದೇಶವನ್ನೂ ನೀಡುವ 'ಬಟ್ಟೆ ಬ್ಯಾಂಕ್' ಇಲ್ಲಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ತಲೆ ಎತ್ತಿದೆ. ಇದು ಬಡವರ ಪಾಲಿಗೆ ಬಂಧುವಾಗಿದೆ.

ನಾಲ್ವರು ಸ್ನೇಹಿತರಾದ ಸಂವಹನ ತಜ್ಞ ವಿನೋದ್ ಪ್ರೇಮ್ ಲೋಬೊ, ಮಾನವ ಸಂಪನ್ಮೂಲ ವೃತ್ತಿಪರರಾಗಿರುವ ಮೆಲಿಶಾ ನೊರೋನ್ಹಾ ಮತ್ತು ನಿತಿನ್ ಕುಮಾರ್ ಹಾಗೂ ಕಲಾ ವಿನ್ಯಾಸಕಾರ ವಿಘ್ನೇಶ್ ಅವರು, ಎಲೆಕ್ಟ್ರಾನಿಕ್ ಸಿಟಿಯ ಬೆರಟೇನ ಅಗ್ರಹಾರದ ಲವಕುಶ ಬಡಾವಣೆಯಲ್ಲಿ 'ಇಮ್ಯಾಜಿನ್ ಕ್ಲಾಥ್ ಬ್ಯಾಂಕ್ ಟ್ರಸ್ಟ್' ಆರಂಭಿಸಿದ್ದಾರೆ. ಈ ಮೂಲಕ ಬಟ್ಟೆಯ ಮರು ಬಳಕೆಗೆ ಮತ್ತು ಉಳ್ಳವರು ಇಲ್ಲದವರಿಗೆ ನೀಡುವ ಜಾಗವೊಂದನ್ನು ಕಟ್ಟಿದ್ದಾರೆ.

ಉತ್ತಮ ಗುಣಮಟ್ಟದ ಬಟ್ಟೆ, ಬೆಡ್‌ಶೀಟ್ ಸೇರಿದಂತೆ ವಿವಿಧ ವಸ್ತುಗಳನ್ನು ಈ ಬ್ಯಾಂಕ್‌ಗೆ ಯಾರೂ ಬೇಕಾದರೂ ನೀಡಬಹುದು. ₹1 ನೀಡಿ ಇಲ್ಲಿನ ವಸ್ತುಗಳನ್ನು ಪಡೆಯಬಹುದು. ಮಹಿಳೆಯರ, ಪುರುಷರ, ಮಕ್ಕಳ ಬಟ್ಟೆಗಳು ಇಲ್ಲಿ ಸಿಗುತ್ತದೆ. ಚಿಕ್ಕ ಮಕ್ಕಳ ಬಟ್ಟೆ, ಆಟಿಕೆ, ಟವೆಲ್, ಹೊದಿಕೆ, ಶಾಲಾ ಬ್ಯಾಗ್ ಸಹ ಇಲ್ಲಿ ಸಿಗುತ್ತವೆ.

ಒಂದು ಕುಟುಂಬದಲ್ಲಿ ನಾಲ್ವರು ಸದಸ್ಯರಿದ್ದರೆ, 40 ಬಟ್ಟೆಗಳನ್ನು ನೀಡಲಾಗುತ್ತಿದೆ. ಅದಕ್ಕೆ ₹40 ಕೊಟ್ಟರೆ ಸಾಕು. ಬಟ್ಟೆಗಳನ್ನು ನೀಡುವಾಗ ಆಧಾರ್ ಕಾರ್ಡ್ ಪರಿಗಣಿಸಲಾಗುತ್ತಿದ್ದು, ಒಂದು ಕಾರ್ಡ್‌ಗೆ ಹತ್ತು ಬಟ್ಟೆಗಳ ಮಿತಿ ಇದೆ.

'ಕೇವಲ ₹1ಕ್ಕೆ ಒಂದು ಬಟ್ಟೆ ಸಿಕ್ಕಿದರೆ ಬಡವರಿಗೆ ಸಹಾಯವಾಗುತ್ತದೆ ಎಂಬ ಕಾರಣಕ್ಕೆ ಟ್ರಸ್ಟ್ ಆರಂಭಿಸಿದೆವು. ವಾರಕ್ಕೊಮ್ಮೆ ಸರಾಸರಿ 130ರಿಂದ 150 ಮಂದಿ ಇಲ್ಲಿಗೆ ಭೇಟಿ ನೀಡಿ ಬಟ್ಟೆ ಖರೀದಿಸುತ್ತಾರೆ' ಎಂದು ಟ್ರಸ್ಟ್‌ನ ವಿನೋದ್ ವಿವರಿಸುತ್ತಾರೆ.

'2002ರಲ್ಲಿ ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಓದುತ್ತಿದ್ದಾಗ 'ಕ್ಯಾಂಪಸ್ ಇನಿಷಿಯೇಷನ್' ಎನ್ನುವ ಯೋಜನೆ ಆರಂಭಿಸಲಾಗಿತ್ತು. ಆಗ ಸ್ನೇಹಿತರ ಬಟ್ಟೆಗಳನ್ನು ಸಂಗ್ರಹಿಸಿ ಬಟ್ಟೆ ಬ್ಯಾಂಕ್ ಮಾಡಲಾಗಿತ್ತು. ಆಗಲೂ ಕೇವಲ ₹1ಕ್ಕೆ ಮಂಗಳೂರಿನಲ್ಲಿ ಮಾರಾಟ ಮಾಡಲಾಗಿತ್ತು. ಅದೇ ಈಗ ಪ್ರೇರಣೆ' ಎಂದರು.

'ಕೋವಿಡ್ ಕಾಲದಲ್ಲಿ ಉದ್ಯೋಗ ಕಳೆದುಕೊಂಡ ಅನೇಕರು ತೀರ ಸಂಕಷ್ಟ ಅನುಭವಿಸಿದರು. ಕಷ್ಟದಲ್ಲಿದ್ದವರಿಗೆ ನೆರವಾಗಲು ಮತ್ತೆ ಬಟ್ಟೆ ಬ್ಯಾಂಕ್ ಅನ್ನು ಇದೇ ಸೆಪ್ಟೆಂಬರ್‌ನಲ್ಲಿ ಆರಂಭಿಸಿದೆವು. ಈ ಬ್ಯಾಂಕ್ ಭಾನುವಾರ ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ ಮಾತ್ರ ತೆರೆದಿರುತ್ತದೆ. ಉಳಿದ ದಿನಗಳಲ್ಲಿ ಬಟ್ಟೆ ನೀಡಲು ಸಂಪರ್ಕಿಸಬಹುದು' ಎಂದ ಇನ್ನೊಬ್ಬ ಸದಸ್ಯ ನಿತಿನ್ ತಿಳಿಸಿದ್ದಾರೆ.

'ಬೆಂಗಳೂರಿನ ಸ್ನೇಹಿತರ ಸಹಾಯದಿಂದ ಇದುವರೆಗೆ 30ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳಿಂದ ಬಟ್ಟೆಗಳನ್ನು ಸಂಗ್ರಹಿಸಿದ್ದೇವೆ. ಬಟ್ಟೆಗಳ ಮಾರಾಟದಿಂದ ಸಂಗ್ರಹವಾಗುತ್ತಿರುವ ಹಣವನ್ನು ಬಡ ಕುಟುಂಬಗಳ ಆರೋಗ್ಯ ಮತ್ತು ಮಕ್ಕಳ ಶಿಕ್ಷಣಕ್ಕೆ ನೀಡುತ್ತೇವೆ.' ಎಂದರು.

ಸಂಪರ್ಕಕ್ಕೆ: 9886701145, 9972099323, 9886701148



ಇಮ್ಯಾಜಿನ್ ಕ್ಲಾಥ್ ಬ್ಯಾಂಕ್‌ನಲ್ಲಿ ಮಕ್ಕಳು ಬಟ್ಟೆತೆಗೆದು ತೆಗೆದು ಕೊಳ್ಳುತ್ತಿರುವುದು.



ಇಮ್ಯಾಜಿನ್ ಕ್ಲಾಥ್ ಬ್ಯಾಂಕ್ ಟ್ರಸ್ಟ್‌ನ ಸಂಸ್ಥಾಪಕರು (ಎಡದಿಂದ)ವಿಘ್ನೇಶ್ ವಿನೋದ್ ಪ್ರೇಮ್ ಲೋಬೊ, ಮಲಿಶಾ ನೊರೋನ್ಹಾ ಮತ್ತು ನಿತಿನ್ ಕುಮಾರ್

'10 ದಿನ ಆಸ್ಪತ್ರೆಯಲ್ಲೇ ಚಿಕಿತ್ಸೆ'


ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ದೃಢಪಟ್ಟವರನ್ನು 10 ದಿನ ಆಸ್ಪತ್ರೆಗಳಲ್ಲಿಯೇ ಪ್ರತ್ಯೇಕಿಸಿ, ಚಿಕಿತ್ಸೆ ಒದಗಿಸಬೇಕು ಎಂದು ತಜ್ಞರ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸರ್ಕಾರ ರಚಿಸಿದ್ದ ಕ್ಲಿನಿಕಲ್ ತಜ್ಞರ ಸಮಿತಿಯು ಬುಧವಾರ ಮೊದಲ ಸಭೆ ನಡೆಸಿತು. ದಕ್ಷಿಣ ಆಫ್ರಿಕಾದಲ್ಲಿನ ಪರಿಸ್ಥಿತಿ ಹಾಗೂ ಅಲ್ಲಿ ಚಿಕಿತ್ಸೆಗೆ ಅನುಸರಿಸಿರುವ ಕ್ರಮಗಳ ಬಗ್ಗೆ ತಜ್ಞರು ವಿಶ್ಲೇಷಿಸಿದರು. ಈ ಮಾದರಿಯ ವೈರಾಣು ಹೊಂದಿದವರ ಸಂಖ್ಯೆ ಹೆಚ್ಚಳವಾದಲ್ಲಿ ಪರಿಸ್ಥಿತಿ ಎದುರಿಸಲು ಹಾಸಿಗೆಗಳ ವ್ಯವಸ್ಥೆ ಮಾಡುವ ಕುರಿತೂ ಚರ್ಚಿಸಲಾಯಿತು.

ಓಮೈಕ್ರಾನ್ ದೃಢಪಟ್ಟಿದ್ದ ರೋಗಿಯನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸುವ ಮೊದಲು ಎರಡು ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಬೇಕು. ಸೋಂಕಿತರಾಗಿಲ್ಲ ಎನ್ನುವುದು ದೃಢಪಟ್ಟ ಬಳಿಕವಷ್ಟೇ ಅವರನ್ನು ಮನೆಗೆ ಕಳುಹಿಸಬೇಕು ಎಂದು ತಜ್ಞರು ಅಭಿಮತ ವ್ಯಕ್ತಪಡಿಸಿದರು.

'ಓಮೈಕ್ರಾನ್ ತೀವ್ರತೆ ಕಡಿಮೆ ಇದ್ದರೂ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ. ಹೀಗಾಗಿ, 10 ದಿನಗಳು ಆಸ್ಪತ್ರೆಯಲ್ಲಿಯೇ ಪ್ರತ್ಯೇಕವಾಸಕ್ಕೆ ಒಳಪಡಬೇಕು. ಮನೆಗೆ ತೆರಳುವ 24 ಗಂಟೆಗಳ ಮೊದಲು ಎರಡು ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಿ, ಸೋಂಕಿತರಾಗಿಲ್ಲ ಎನ್ನುವುದು ದೃಢಪಟ್ಟ ಬಳಿಕ ಮನೆಗೆ ಕಳುಹಿಸಬೇಕು' ಎಂದು ಸಮಿತಿಯಲ್ಲಿನ ತಜ್ಞರೊಬ್ಬರು ತಿಳಿಸಿದರು.

'ದಕ್ಷಿಣ ಆಫ್ರಿಕಾದಲ್ಲಿ ಮಕ್ಕಳಿಗೂ ಈ ತಳಿಯ ಸೋಂಕು ಹರಡಿದೆ. ಹೀಗಾಗಿ, ಮನೆ ಆರೈಕೆಗೆ ಅವಕಾಶ ನೀಡಬಾರದು. ಈ ಬಗ್ಗೆ ವಿಸ್ತೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ವಿವರಿಸಿದರು.



ಓಮೈಕ್ರಾನ್: ಪ್ರತ್ಯೇಕವಾಸಕ್ಕೆ 2 ಆಸ್ಪತ್ರೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ನಿಲ್ದಾಣಗಳಲ್ಲಿ ನಡೆಸಲಾಗುವ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಗಳಲ್ಲಿ ಸೋಂಕಿತರಾದ ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ಪ್ರತ್ಯೇಕವಾಸ ಮತ್ತು ಚಿಕಿತ್ಸೆ ಒದಗಿಸಲು ರಾಜ್ಯದಲ್ಲಿ ಎರಡು ಆಸ್ಪತ್ರೆಗಳನ್ನು ಮೀಸಲಿಡಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆಯು ಸುತ್ತೋಲೆ ಹೊರಡಿಸಿದ್ದು, ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ ಹಾಗೂ ಮಂಗಳೂರಿನಲ್ಲಿ ವೆನ್‌ಲಾಕ್ ಆಸ್ಪತ್ರೆ ಗುರುತಿಸಲಾಗಿದೆ. ಈ ಆಸ್ಪತ್ರೆಗಳಲ್ಲಿ ಮಾತ್ರ ಸೋಂಕಿತರು ಹಾಗೂ ಸೋಂಕು ಶಂಕಿತರನ್ನು ದಾಖಲಿಸುವಂತೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾದ ದೇಶಗಳನ್ನು ಅಪಾಯಕಾರಿ ದೇಶಗಳು ಎಂದು ಪಟ್ಟಿ ಮಾಡಲಾಗಿದೆ. ಈ ದೇಶಗಳಿಂದ ಬರುವ ಪ್ರಯಾಣಿಕರಿಗೆ ಬೆಂಗಳೂರು ಹಾಗೂ ಮಂಗಳೂರು ವಿಮಾನ ನಿಲ್ದಾಣದಲ್ಲಿ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಗುತ್ತಿದೆ. ಸೋಂಕಿತರಾದವರನ್ನು ಗುರುತಿಸಲಾದ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಸಕ್ಕೆ ಒಳಪಡಿಸಬೇಕು ಎಂದು ಹೇಳಲಾಗಿದೆ.

'ಓಮೈಕ್ರಾನ್ ಸೋಂಕಿಗೆ ಒಳಗಾದವರ ಚಿಕಿತ್ಸೆಗೆ ಅಗತ್ಯವಿರುವ ವೈದ್ಯಕೀಯ ಸೌಲಭ್ಯಗಳ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳೂ ಅಗತ್ಯ ಕ್ರಮವಹಿಸಬೇಕು. ಪ್ರತ್ಯೇಕ ವಾರ್ಡ್‌ಗಳಲ್ಲಿ ಅಗತ್ಯದಷ್ಟು ಹಾಸಿಗೆಗಳನ್ನು ವ್ಯವಸ್ಥೆ ಮಾಡಿಕೊಳ್ಳಬೇಕು. ವಿದೇಶಗಳಿಂದ ಬಂದವರಿಗೆ ಕೋವಿಡ್ ಪರೀಕ್ಷೆ ನಡೆಸಬೇಕು. ಓಮೈಕ್ರಾನ್ ಸೋಂಕು ದೃಢಪಟ್ಟಲ್ಲಿ ಪ್ರತ್ಯೇಕ ವಾರ್ಡ್‌ನಲ್ಲಿ ಇರಿಸಬೇಕು. ಉಳಿದ ಕೋವಿಡ್ ರೋಗಿಗಳು ಇರುವ ವಾರ್ಡ್‌ನಲ್ಲಿ ಇವರನ್ನು ಇರಿಸಬಾರದು' ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.



ಸತತ ಮಳೆಯಿಂದಾಗಿ ಒಂದು ತಿಂಗಳಿನಿಂದ ನಿರಂತರ ಏರಿಕೆ

₹100ರ ಗಡಿ ದಾಟಿದ ತರಕಾರಿ ಬೆಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಳೆದ ವಾರ ಕಡಿಮೆ ಇದ್ದ ತರಕಾರಿಗಳ ದರ ದಿಢೀರ್ ಏರಿದ್ದು, ಬೀನ್ಸ್, ಬದನೆ, ತೊಂಡೆಕಾಯಿ ಸೇರಿದಂತೆ ಹಲವು ತರಕಾರಿಗಳ ಬೆಲೆ ಕೆ.ಜಿ.ಗೆ ₹100ಕ್ಕೆ ತಲುಪಿದೆ.

ಸತತ ಮಳೆಯಿಂದಾಗಿ ಒಂದು ತಿಂಗಳಿನಿಂದ ನಿರಂತರ ಏರಿಕೆ ಕಂಡು ₹150ರವರೆಗೆ ತಲುಪಿದ್ದ ಟೊಮೆಟೊ ದರ ಕಳೆದ ವಾರ ಕೊಂಚ ತಗ್ಗಿತ್ತು. ಇದರಿಂದ ಗ್ರಾಹಕರು ನಿಟ್ಟುಸಿರು ಬಿಟ್ಟಿದ್ದರು. ಈಗ ಮತ್ತೆ ಟೊಮೆಟೊ ದರ ₹100ಕ್ಕೆ ಏರಿ ಗ್ರಾಹಕರಿಗೆ ದರ ಏರಿಕೆ ಬಿಸಿ ನೀಡಿದೆ.

'ಬೆಂಡೆಕಾಯಿ, ತೊಗರಿಕಾಯಿ, ಕ್ಯಾರೆಟ್, ಮೂಲಂಗಿ, ಬೀಟ್‌ರೂಟ್, ಮೆಣಸಿನಕಾಯಿ, ಅವರೆಕಾಯಿ ದರಗಳೂ ಕೆ.ಜಿ.ಗೆ ₹50ಕ್ಕಿಂತ ಹೆಚ್ಚಳ ಕಂಡಿವೆ. ಈ ತರಕಾರಿಗಳ ದರ ಕಳೆದ ವಾರ ಕಡಿಮೆ ಇದ್ದವು. ಪ್ರತಿ ತರಕಾರಿ ದರ ₹10ರಿಂದ ₹20 ಹೆಚ್ಚಳವಾಗಿದ್ದು, ತರಕಾರಿಗಳ ದರ ₹30ಕ್ಕಿಂತ ಹೆಚ್ಚೇ ಇದೆ' ಎನ್ನುತ್ತಾರೆ ಕೆ.ಆರ್.ಮಾರುಕಟ್ಟೆಯ ತರಕಾರಿ ವ್ಯಾಪಾರಿ ವೆಂಕಟೇಶ್.

ದಾಸನಪುರ ಎಪಿಎಂಸಿ ಮಾರುಕಟ್ಟೆಯ ತರಕಾರಿ ಸಗಟು ವರ್ತಕ ಕುಮಾರ್, 'ಎರಡು ತಿಂಗಳಿನಿಂದ ಸುರಿದಿದ್ದ ಭಾರಿ ಮಳೆಯಿಂದ ತರಕಾರಿಗಳ ದರ ನಿರಂತರವಾಗಿ ಏರಿಕೆ ಕಂಡಿತ್ತು. ಈಗ ಮಳೆ ನಿಂತಿರುವ ಮಾತ್ರಕ್ಕೆ ಬೆಲೆಗಳು ಕಡಿಮೆಯಾಗುವುದಿಲ್ಲ' ಎಂದರು.

'ಮಳೆಯಿಂದ ತರಕಾರಿಗಳು ಹಾನಿಗೆ ತುತ್ತಾಗಿ, ಮಾರುಕಟ್ಟೆಗಳಲ್ಲಿ ಆವಕ ಪ್ರಮಾಣ ಕುಸಿಯುತ್ತದೆ. ಇದರಿಂದ ತರಕಾರಿ ದರ ಮತ್ತಷ್ಟು ಏರುತ್ತದೆ. ಮೊದಲಿನಂತೆ ಅಗತ್ಯಪ್ರಮಾಣದ ತರಕಾರಿಗಳು ಮಾರುಕಟ್ಟೆಗೆ ಪೂರೈಕೆಯಾಗಲು ತಿಂಗಳುಗಟ್ಟಲೆ ಸಮಯ ಬೇಕು. ಅಲ್ಲಿಯವರೆಗೆ ದರ ಏರಿಕೆ ತಪ್ಪಿದ್ದಲ್ಲ' ಎಂದೂ ಹೇಳಿದರು.

ಸೊಪ್ಪುಗಳೂ ದುಬಾರಿ: ಒಂದು ತಿಂಗಳಿನಿಂದ ಹೆಚ್ಚಳವಾಗಿದ್ದ ಸೊಪ್ಪಿನ ದರಗಳು ಈವರೆಗೆ ಕಡಿಮೆಯಾಗಿಲ್ಲ. ದಂಟು, ಪಾಲಕ್, ಮೆಂತ್ಯೆ, ಕೊತ್ತಂಬರಿ, ಸಬ್ಬಸಿಗೆ ಸೇರಿದಂತೆ ಎಲ್ಲ ಸೊಪ್ಪುಗಳು ಪ್ರತಿ ಕಟ್ಟಿಗೆ ₹20ಕ್ಕೂ ಹೆಚ್ಚಿನ ದರದಲ್ಲಿ ಮಾರಾಟ ಆಗುತ್ತಿವೆ. ಕೊತ್ತಂಬರಿ ಸೊಪ್ಪು ₹40 ಇದೆ.

ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ನುಗ್ಗೇಕಾಯಿ	250	350
ತೊಂಡೆಕಾಯಿ	100	163
ಬದನೆ	100	114
ಟೊಮೆಟೊ	100	115
ಬೀನ್ಸ್	100	90
ಬೆಂಡೆಕಾಯಿ	80	94
ತೊಗರಿಕಾಯಿ	80	108
ಕ್ಯಾರೆಟ್	70	94
ಮೂಲಂಗಿ	60	86
ಬೀಟ್‌ರೂಟ್	50	70
ಮೆಣಸಿನಕಾಯಿ	50	64
ಅವರೆಕಾಯಿ	50	60
ಶುಂಠಿ	40	70
ಈರುಳ್ಳಿ	40	56
ಹೂಕೋಸು	40	54
ಆಲೂಗಡ್ಡೆ	30	42
ಎಲೆಕೋಸು	30	64

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ದಂಟು	30	140
ಪಾಲಕ್	25	125
ಮೆಂತ್ಯೆ	25	124
ಕೊತ್ತಂಬರಿ	20	70
ಸಬ್ಬಸಿಗೆ	20	70



ನುಗ್ಗೇಕಾಯಿ ಕೆ.ಜಿ.ಗೆ ₹200!



ನುಗ್ಗೇಕಾಯಿ ಸಗಟು ದರ ಪ್ರತಿ ಕೆ.ಜಿ.ಗೆ ₹200, ಚಿಲ್ಲರೆ ದರ ₹250 ಹಾಗೂ ಹಾಪ್‌ಕಾಮ್ಸ್‌ನಲ್ಲಿ ₹350ರಂತೆ ಬುಧವಾರ ಮಾರಾಟವಾಗಿದೆ. ಕಳೆದ ತಿಂಗಳು ₹30ರಿಂದ ₹50ರವರೆಗೆ ಮಾರಾಟವಾಗಿತ್ತು.


'ಆರೋಗ್ಯಕರ ಅಂಶಗಳು ಹೇರಳವಾಗಿರುವ ಕಾರಣದಿಂದ ಸಾಮಾನ್ಯವಾಗಿ ಪ್ರತಿ ವರ್ಷ ಚಳಿಗಾಲದಲ್ಲಿ ನುಗ್ಗೇಕಾಯಿಯ ದರ ಹೆಚ್ಚಾಗುತ್ತದೆ. ಈ ವರ್ಷದ ಭಾರಿ ಮಳೆಯಿಂದ ನುಗ್ಗೇಕಾಯಿ ಫಸಲು ಹಾಳಾಗಿದೆ. ಹಾಗಾಗಿ, ಮಾರುಕಟ್ಟೆಗಳಲ್ಲಿ ನುಗ್ಗೇಕಾಯಿ ಕೊರತೆ ಎದುರಾಗಿ, ಬೆಲೆಯೂ ಏರಿದೆ. ಕಳೆದ ತಿಂಗಳಿಗೆ ಹೋಲಿಸಿದರೆ ದರ ಹತ್ತು ಪಟ್ಟು ಹೆಚ್ಚಾಗಿದೆ' ಎಂದು ತರಕಾರಿ ವ್ಯಾಪಾರಿ ಮಂಜೇಶ್ ಹೇಳಿದರು.



ಲೇಖಕಿ ಬಿ.ವಿ.ಭಾರತಿ ಬರೆದಿರುವ 'ಸಾಸಿವೆ ತಂದವಳು' ಕೃತಿಯ ನಾಲ್ಕನೇ ಮುದ್ರಣವನ್ನು ಕೃತಿ ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್‌ನ ಕಾರ್ಮಿಕರು ಬಿಡುಗಡೆ ಮಾಡಿದರು. ಬಿ.ವಿ.ಭಾರತಿ ಹಾಗೂ ಇತರರು ಇದ್ದರು.

13ರಿಂದ ಸುವರ್ಣ ವಿಧಾನಸೌಧ ಮುತ್ತಿಗೆ

ಶಿವಮೊಗ್ಗ: ರಾಜ್ಯ ಸರ್ಕಾರ ರೈತರ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಡಿ. 13ರಿಂದ ಬೆಳಗಾವಿ ಸುವರ್ಣ ವಿಧಾನ ಸೌಧ ಮುತ್ತಿಗೆ ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗೌರವಾಧ್ಯಕ್ಷ ಎಚ್.ಆರ್. ಬಸವರಾಜಪ್ಪ ತಿಳಿಸಿದರು.



ಬಸವರಾಜಪ್ಪ

ಕೇಂದ್ರ ಸರ್ಕಾರ ರೈತ ವಿರೋಧಿ 3 ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿರುವುದು ಸ್ವಾಗತಾರ್ಹ. ಆದರೂ, ರೈತ ಬೆಳೆದ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಕಾನೂನು ಖಾತರಿ ಪಡಿಸುವುದು, ವಿದ್ಯುತ್ ಖಾಸಗೀಕರಣ ಮಸೂದೆಯನ್ನು ವಾಪಸ್ ಪಡೆಯುವುದು, ರೈತನ ಮೇಲೆ ಹಾಕಿರುವ ಎಲ್ಲ ಕೇಸುಗಳನ್ನು ವಾಪಸ್ ಪಡೆಯುವುದು, ಚಳವಳಿಯಿಂದ ಪ್ರಾಣ ಕಳೆದುಕೊಂಡ 700ಕ್ಕೂ ಹೆಚ್ಚು ಜನ ರೈತ ಕುಟುಂಬಗಳಿಗೆ ಪರಿಹಾರ ಕೊಡುವ ಬಗ್ಗೆ ಮೀನಮೇಷ ಎಣಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಚಳವಳಿ ಮುಂದುವರಿದಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭತ್ತ ಮತ್ತು ಮೆಕ್ಕಜೋಳಕ್ಕೆ ನ್ಯಾಯಯುತ ಬೆಲೆ ಕ್ವಿಂಟಲ್ ಒಂದಕ್ಕೆ ₹ 3 ಸಾವಿರ ನಿಗದಿ ಮಾಡಿ, ಖರೀದಿ ಕೇಂದ್ರ ಆರಂಭಿಸಬೇಕು. ಹನಿ ನೀರಾವರಿಯನ್ನು ಮೊದಲಿನಂತೆ ಎಲ್ಲ ವರ್ಗದ ರೈತರಿಗೆ ಶೇ 90 ಸಹಾಯಧನದಲ್ಲಿ ಹೊಸ ದರಪಟ್ಟಿಯ ಪ್ರಕಾರ ಜಾರಿಗೊಳಿಸಬೇಕು. ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿಪಡಿಸಬೇಕು ಮತ್ತು ಕಬ್ಬಿನ ಬಾಕಿ ಹಣ ಕೂಡಲೇ ನೀಡಬೇಕು. ಅತಿವೃಷ್ಟಿಯಿಂದ ರೈತರ ಬೆಳೆಹಾನಿಯಾಗಿದ್ದು, ರೈತರ ಸಾಲ ಮನ್ನಾ ಮಾಡಬೇಕು. ರೈತರಿಗೆ ಆಶಾಕಿರಣವಾದ ಯಶಸ್ವಿನಿ ಯೋಜನೆಯನ್ನು ಜಾರಿಗೆ ಆಗ್ರಹಿಸಿ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದರು.

ಡಿ.13ರಿಂದ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ಆರಂಭವಾಗಲಿದ್ದು, ರೈತರ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಅನಿರ್ದಿಷ್ಟಾವಧಿ ಬೆಳಗಾವಿ ಸುವರ್ಣ ವಿಧಾನಸೌಧ ಮುತ್ತಿಗೆ ಚಳವಳಿಯನ್ನು ಹಮ್ಮಿಕೊಂಡಿದೆ. ಸರ್ಕಾರ ಸ್ಪಂದಿಸುವ ಆಧಾರದ ಮೇಲೆ ಚಳವಳಿ ಮುಂದುವರಿಯಲಿದೆ. ಶಿವಮೊಗ್ಗದಿಂದ 500ಕ್ಕೂ ಹೆಚ್ಚು ರೈತರು ಚಳವಳಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಮುಖಂಡರಾದ ಡಾ.ಬಿ.ಎಂ.ಚಿಕ್ಕಸ್ವಾಮಿ, ಟಿ.ಎಂ.ಚಂದ್ರಪ್ಪ, ಈರಣ್ಣ, ಕೆ.ರಾಘವೇಂದ್ರ, ಕಸಟ್ಟಿ ರುದ್ರೇಶ್, ಸಿ.ಚಂದ್ರಪ್ಪ, ಪಿ.ಡಿ.ಮಂಜಪ್ಪ, ಡಿ.ಎಚ್. ರಾಮಚಂದ್ರಪ್ಪ ಉಪಸ್ಥಿತರಿದ್ದರು.

ಜಿ–ಕೆಟಗರಿ ಪರಿಶೀಲನೆ ಪಟ್ಟಿಗೆ ಮತ್ತೆ 27 ಪ್ರಕರಣ

ಬೆಂಗಳೂರು: ಜಿ–ಕೆಟಗರಿ ಕೋಟಾದಡಿ ಹಂಚಿಕೆ ಮಾಡಲಾಗಿರುವ 814 ನಿವೇಶನಗಳ ಕಾನೂನು ಬದ್ಧತೆ ಪರಾಮರ್ಶೆ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಡಿ.ವಿ.ಶೈಲೇಂದ್ರ ಕುಮಾರ್ ಅಧ್ಯಕ್ಷತೆಯ ಮೂವರು ಸದಸ್ಯರ ಸಮಿತಿಗೆ ಪುನಃ 27ಕ್ಕೂ ಹೆಚ್ಚು ಜನರ ನಿವೇಶನ ಹಂಚಿಕೆ ಪರಿಶೀಲನೆ ನಡೆಸಲು ಹೈಕೋರ್ಟ್ ಒಪ್ಪಿಗೆ ನೀಡಿದೆ.

ಈ ಕುರಿತಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಮಾನ್ಯ ಮಾಡಿದೆ.

'2004ರಿಂದ 2011ರ ಅವಧಿಯಲ್ಲಿ 308 ಜನಪ್ರತಿನಿಧಿಗಳು ಅಕ್ರಮವಾಗಿ ಬಿಡಿಎ ನಿವೇಶನ ಪಡೆದಿದ್ದಾರೆ' ಎಂದು ದೂರಿ ದಿವಂಗತ ಎಸ್. ವಾಸುದೇವ ಅವರು ಹೈಕೋರ್ಟ್‌ನಲ್ಲಿ 2010ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

2,684 ಶಾಲಾ ಕಟ್ಟಡ ಪೂರ್ಣ: ಪಾಟೀಲ

ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ₹756 ಕೋಟಿ ವೆಚ್ಚದಲ್ಲಿ 3,423 ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ಈ ಪೈಕಿ 2,684 ಕಟ್ಟಡಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ತಿಳಿಸಿದ್ದಾರೆ.

ಉಳಿದ ಕಟ್ಟಡಗಳ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. ಈ ಯೋಜನೆಯನ್ನು ನಬಾರ್ಡ್‌ನ ಆರ್‌ಐಡಿಎಫ್–25 ಅನ್ವಯ ಜಾರಿಗೊಳಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ಸುಸಜ್ಜಿತ ಶಾಲೆ, ಪ್ರೌಢಶಾಲೆಗಳ ಕಟ್ಟಡಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲಭ್ಯ ಮತ್ತು ಸುರಕ್ಷತೆ ಕಲ್ಪಿಸಿಕೊಡುವ ಉದ್ದೇಶದಿಂದ ಲೋಕೋಪಯೋಗಿ ಇಲಾಖೆ ಈ ಕಟ್ಟಡಗಳನ್ನು ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಿದೆ ಎಂದರು.

₹137 ಕೋಟಿ ವೆಚ್ಚದಲ್ಲಿ ಒಟ್ಟು 842 ಸುಸಜ್ಜಿತ ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಆಯುಷ್ಮಾನ್: ಪೂರಕ ದಾಖಲೆ ಕೇಳಿದರೆ ಶಿಸ್ತುಕ್ರಮ

ಬೆಂಗಳೂರು: 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಫಲಾನುಭವಿಗಳು ಆರೋಗ್ಯ ಕಾರ್ಡ್ ಹೊಂದಿದ್ದಲ್ಲಿ ಚಿಕಿತ್ಸೆಗೆ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸುವ ಅಗತ್ಯವಿಲ್ಲ. ಈ ಕಾರ್ಡ್ ಹೊಂದಿರುವವರಿಗೆ ಪೂರಕ ದಾಖಲಾತಿ ಒದಗಿಸುವಂತೆ ಸೂಚಿಸಿದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಆರೋಗ್ಯ ಇಲಾಖೆ ಎಚ್ಚರಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕಿ ಎನ್.ಟಿ. ಅಬ್ರು ಅವರು ಜಂಟಿ ಸುತ್ತೋಲೆ ಹೊರಡಿಸಿದ್ದಾರೆ.

'ರಾಜ್ಯದಲ್ಲಿನ ಆದ್ಯತೆ ಮತ್ತು ಸಾಮಾನ್ಯ ವರ್ಗದ ಕುಟುಂಬದ ಸದಸ್ಯರಿಗೆ ಶೀಘ್ರ ಹಾಗೂ ಶುಲ್ಕ ರಹಿತ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಯೋಜನೆ ಪ್ರಾರಂಭಿಸಲಾಗಿದೆ. ಸರ್ಕಾರಿ ಅಥವಾ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಅವಶ್ಯಕತೆಆಧರಿಸಿ ಚಿಕಿತ್ಸೆ ಒದಗಿಸಲಾಗುತ್ತದೆ. ರಾಜ್ಯದಲ್ಲಿ ಯೋಜನೆಯ 1.5 ಕೋಟಿ ಗುರುತಿನಚೀಟಿ ವಿತರಿಸಲಾಗಿದೆ' ಎಂದು ತಿಳಿಸಲಾಗಿದೆ.

'ಯೋಜನೆಯ ಫಲಾನುಭವಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಬಂದಾಗ ಹಾಗೂ ಒಳರೋಗಿಯಾಗಿ ದಾಖಲಾದಾಗ ಗುರುತಿನ ಚೀಟಿ ತೋರಿಸಿದರೂ ಪಡಿತರ ಚೀಟಿ ಸೇರಿದಂತೆ ಕೆಲವೊಂದು ಪೂರಕ ದಾಖಲೆಗಳನ್ನು ಒದಗಿಸುವಂತೆ ಸೂಚಿಸಲಾಗುತ್ತಿದೆ. ಆಸ್ಪತ್ರೆಗಳಲ್ಲಿನ ಆರೋಗ್ಯ ಮಿತ್ರ ಸಹಾಯಕರು ಚಿಕಿತ್ಸೆಗೆ ಅವಕಾಶ ನೀಡದಿರುವ ಬಗ್ಗೆ ದೂರುಗಳು ಬಂದಿವೆ.

ಪೂರಕ ದಾಖಲೆಗಳನ್ನು ಒದಗಿಸುವಂತೆ ಒತ್ತಾಯಿಸುವುದನ್ನು ನಿಷೇಧಿಸಲಾಗಿದೆ. ಆರೋಗ್ಯ ಕಾರ್ಡ್ ಹೊಂದಿರುವವರಿಗೆ ಚಿಕಿತ್ಸೆ ನೀಡದಿದ್ದಲ್ಲಿ ನಿಯಮಾನುಸಾರ ದುರ್ನಡತೆಯೆಂದು ಪರಿಗಣಿಸಿ, ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಲಾಗಿದೆ.

ನಗರದಲ್ಲಿ ಇಂದು

ತಾರಿಕ–ಇನ್ನರ್‌ವೀಲ್ 319ನೇ ಜಿಲ್ಲಾ ಸಮ್ಮೇಳನ: ಅತಿಥಿಗಳು–ಅನುಜ ಅಗರ್ವಾಲ್, ವೀಣಾ ನಿರಂಜನ್, ಆಯೋಜನೆ–ಇನ್ನರ್ ವೀಲ್ 319ನೇ ಜಿಲ್ಲೆ, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಬೆಳಿಗ್ಗೆ 9.30

'ಶಿಶಿರ ರಂಗೋತ್ಸವ' ಮತ್ತು ಹರೇಕಳ ಹಾಜಬ್ಬ ಅವರಿಗೆ ಪದಗೌರವ: ಉದ್ಘಾಟನೆ–ಪಾಲಿಕೆ ವಿಶೇಷ ಆಯುಕ್ತ ಕೆ.ಎ.ದಯಾನಂದ, ಅಧ್ಯಕ್ಷತೆ–ಚಿತ್ರ ಕಲಾವಿದ ಎಂ.ಎಸ್.ಮೂರ್ತಿ, ಅತಿಥಿಗಳು–ಬೆಂಗಳೂರು ವಿವಿ ಸಂವಹನ ವಿಭಾಗದ ಮುಖ್ಯಸ್ಥ ಬಿ.ಕೆ.ರವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಆಯುರ್ವೇದ ತಜ್ಞ ಅಬ್ದುಲ್ ಖಾದರ್, ರಂಗಕರ್ಮಿ ನೀಲಕಂಠ, ಆಯೋಜನೆ–ಪದ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ– ರವೀಂದ್ರ ಕಲಾಕ್ಷೇತ್ರ, ಸಂಜೆ 6.30

'ಮಹಿಳೆ ಮತ್ತು ಕಾನೂನು' ಉಪನ್ಯಾಸ: ಬಿ.ಜೆ.ಜಿ.ಸತ್ಯಶ್ರೀ, ಸ್ಥಳ–ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ಪ್ರಸನ್ನ ಕುಮಾರ್ ಕೆರಗೋಡು ಅವರ 'ಮಧುರ ಮಂಡೋದರಿ' ಏಕವ್ಯಕ್ತಿ ರಂಗ ಪ್ರಯೋಗ: ವನಿತಾ ರಾಜೇಶ್, ಆಯೋಜನೆ–ರಂಗಬಂಡಿ, ಸ್ಥಳ–ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಅತಿವೃಷ್ಟಿಯಿಂದ ಹಲವೆಡೆ ನೆಲಕಚ್ಚಿದ ರಾಗಿ ಬೆಳೆ, ಇಳುವರಿ ಕುಸಿತ

ಕೃಷಿ ಕಾರ್ಮಿಕರ ಕೊರತೆ: ದುಬಾರಿಯಾದ ದಿನಗೂಲಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯುದ್ದಕ್ಕೂ ರಾಗಿ ಬೆಳೆ ಕೊಯಿಲು ಸಾಗಿದೆ. ಕೃಷಿ ಕಾರ್ಮಿಕರ ಕೊರತೆ ಉಲ್ಬಣಿಸಿದ್ದು, ದಿನಗೂಲಿಯೂ ಏರಿಕೆಯಾಗಿದೆ.

ಅತಿವೃಷ್ಟಿಯಿಂದ ಹೋಬಳಿಯಲ್ಲಿ ಹೆಚ್ಚಿನ ರಾಗಿ ಬೆಳೆ ನೆಲಕಚ್ಚಿ ಅಧಿಕ ಪ್ರಮಾಣದಲ್ಲಿ ರಾಗಿ, ಹುಲ್ಲು ಹಾಳಾಗಿದೆ. ಇದರಿಂದ ರೈತರು ಹೈರಾಣಾಗಿದ್ದಾರೆ. ಗಾಯದ ಮೇಲೆ ಬರೆ ಎಳೆದಂತೆ ಇರುವ ಒಂದಷ್ಟು ರಾಗಿ, ಹುಲ್ಲು ಕೂಡಿಟ್ಟುಕೊಳ್ಳಲು ಕೂಲಿ ಕಾರ್ಮಿಕರ ಕೊರತೆ ಜೊತೆಗೆ, ದುಬಾರಿ ಕೂಲಿ ರೈತರನ್ನು ಚಿಂತೆಗೀಡು ಮಾಡಿದೆ.

ಇರುವ ಬೆಳೆ ಪಡೆಯುವ ಅನಿವಾರ್ಯತೆಯಲ್ಲಿ 'ದುಪ್ಪಟ್ಟು' ಹಣ ಕೊಟ್ಟು ಕೊಯಿಲು ಮಾಡಿಸುತ್ತಿದ್ದಾರೆ ರೈತರು. ಅತೀ ಮಳೆಯಿಂದ ತೆನೆಗಳೆಲ್ಲಾ ನೆಲಕ್ಕುರುಳಿದೆ, ಪೈರು ನೆಲಕಚ್ಚಿ ಕೊಳೆತಿರುವ ಆತಂಕವೂ ಇದೆ. ಮಳೆ ನಿಂತು ಭೂಮಿ ಒಣಗುತ್ತಿರುವುದರಿಂದ ರಾಗಿ ಕೊಯಿಲು ಮಾಡಲು ರೈತರು ಮುಂದಾಗಿರುವುದು ಕೃಷಿ ಕಾರ್ಮಿಕರ ಕೊರತೆ ಉಂಟಾಗುವಂತೆ ಮಾಡಿದೆ.

ಕಳೆದ ವರ್ಷ ₹400 ಇದ್ದ ಕೂಲಿ, ಈ ಬಾರಿ ₹500ಕ್ಕೆ ಏರಿದೆ. ಮಳೆ ಹಾಗೂ ಗಾಳಿಯಿಂದ ನೂರಾರು ಹೆಕ್ಟೇರ್ ಬೆಳೆ ನೆಲಕಚ್ಚಿದೆ. ಅದು ಕೊಯ್ಯಲು ಹೆಚ್ಚು ಕಾರ್ಮಿಕರ ಅಗತ್ಯವಿದೆ.

ಕೆಲವರು 10–15 ಜನರ ಗುಂಪು ಮಾಡಿಕೊಂಡು 'ಗುತ್ತಿಗೆ' ಒಪ್ಪಿಕೊಂಡು ಕೊಯ್ಲು ಮಾಡುತ್ತಿದ್ದಾರೆ. ಕೊಯ್ಲಿಗೆ ಬೇಡಿಕೆ ಹೆಚ್ಚಿದ ಮೇಲೆ ಅವರು ಕೂಲಿಯನ್ನು ಹೆಚ್ಚಿಸಿಕೊಂಡಿದ್ದಾರೆ. ₹5 ಸಾವಿರಕ್ಕೆ ಕೊಯ್ಲು ಮಾಡುವುದಕ್ಕೆ ₹8–10 ಸಾವಿರ ಕೇಳುತ್ತಿದ್ದಾರೆ. ಅನಿವಾರ್ಯವಾಗಿ ಹಣ ತೆತ್ತು ಕೊಯ್ಲು ಮಾಡಿಸಬೇಕಾಗಿದೆ ಎನ್ನುತ್ತಾರೆ ರೈತ ಗೋವಿಂದರಾಜು.

ಮಧುಗಿರಿ, ಕೊರಟಗೆರೆ ಕಡೆಗಳಿಂದಲೂ ಅವರು ಕೇಳಿದಷ್ಟು ಕೂಲಿ ಕೊಟ್ಟು ಕೃಷಿ ಕಾರ್ಮಿಕರನ್ನು ಕರೆದುಕೊಂಡು ಬರಲಾಗುತ್ತಿದೆ. ಅವರಿಗೆ ದಿನಕ್ಕೆ ಕೂಲಿ ಜೊತೆಗೆ ಹೆಚ್ಚುವರಿಯಾಗಿ ಬಸ್ ಚಾರ್ಜ್, ಊಟ, ತಿಂಡಿ ಎಲ್ಲ ಕೊಡಬೇಕಾಗಿದೆ. ಮಧುಗಿರಿಯಿಂದ ಕರೆದುಕೊಂಡು ಬಂದಿದ್ದೆ. ಒಂದು ದಿನಕ್ಕೆ ಕೊಯಿಲು ಮಾಡಬೇಕಾಗಿದ್ದನ್ನು ಎರಡು ದಿನ ಮಾಡಿದರು ಎಂದರು ರೈತ ವಿಶ್ವನಾಥ್.

ಖಾಸಗಿ ರಾಗಿ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಪ್ರತಿ ಗಂಟೆಗೆ ಅಥವಾ ಪ್ರತಿ ಎಕರೆಗೆ ₹3,500 ರಿಂದ ₹5,000ದವರೆಗೆ ಹಣ ಪಡೆಯುತ್ತಿದ್ದಾರೆ. ಇದು ಹೊರೆಯಾಗಿದೆ. ಹೆಚ್ಚು ಕೂಲಿ ಕೊಡಲು ಆಗದೆ, ಕೆಲವು ಊರುಗಳಲ್ಲಿ ಮುಯ್ಯಾಳು ಮಾಡಿಕೊಂಡು ತಮ್ಮ ಹೊಲಗಳನ್ನು ಕೊಯ್ಲು ಮಾಡಿಕೊಳ್ಳುತ್ತಿದ್ದಾರೆ.

'ಸೋಂಪುರ ಕೈಗಾರಿಕಾ ಪ್ರದೇಶದ ಈಗಾಗಲೇ ನೂರಾರು ವಿವಿಧ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿನ ಕೃಷಿಯಲ್ಲಿ ತೊಡಗಿದ ಕುಟುಂಬಗಳ ಮಹಿಳೆಯರು, ಯುವಕರು ಕೃಷಿಯಿಂದ ವಿಮುಖರಾಗಿ ಕಾರ್ಖಾನೆಗಳತ್ತ ಮುಖ ಮಾಡಿದ್ದಾರೆ. ಗ್ರಾಮಗಳಲ್ಲಿ ವಯಸ್ಸಾದವರು, ಕೃಷಿ ಆಸಕ್ತಿ ಇರುವವರಷ್ಟೇ ಕೃಷಿಯಲ್ಲಿ ಸಕ್ರೀಯರಾಗಿದ್ದಾರೆ. ಇದು ಕೃಷಿ ಕಾರ್ಮಿಕರ ಕೊರತೆಗೆ ಕಾರಣ' ಅನ್ನುತ್ತಾರೆ ರೈತ ಶಿವಕುಮಾರ್.



ಹೊಲವೊಂದರಲ್ಲಿ ಗುತ್ತಿಗೆ ಒಪ್ಪಿಕೊಂಡು ಹೊಲ ಕೊಯಿಲು ಮಾಡುತ್ತಿರುವುದು

ರಾಗಿ ಕಟಾವು ಯಂತ್ರಕ್ಕೆ ಬಾಡಿಗೆ ದರ ನಿಗದಿ

ದಾಬಸ್ ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರಾಗಿ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ₹2,700 ಬಾಡಿಗೆ ದರ ನಿಗದಿಗೊಳಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಸಾಲಿನ ಮುಂಗಾರು ಹಂಗಾಮಿನಲ್ಲಿ 67,105 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆ ಬೆಳೆಯಲಾಗಿದೆ. ಜಿಲ್ಲೆಯ ಉದ್ದಕ್ಕೂ ರಾಗಿ ಬೆಳೆ ಕಟಾವು ನಡೆಯುತ್ತಿದೆ. ಮಳೆ ಕಾರಣದಿಂದ ಹಾಗೂ ಕೂಲಿ ಕಾರ್ಮಿಕರ ಕೊರತೆಯಿಂದ ಬಹುತೇಕ ರೈತರು ರಾಗಿ ಬೆಳೆಯನ್ನು ಖಾಸಗಿ ಕಟಾವು ಮೂಲಕ ಮಾಡಿಸುತ್ತಿದ್ದಾರೆ. ಖಾಸಗಿ ರಾಗಿ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಪ್ರತಿ ಗಂಟೆಗೆ ಅಥವಾ ಪ್ರತಿ ಎಕರೆಗೆ ₹3,500 ರಿಂದ ₹5,000ದವರೆಗೆ ಹಣ ಪಡೆಯುತ್ತಿದ್ದಾರೆ ಅನ್ನುವ ಬಗ್ಗೆ ದೂರು ಬಂದಿತ್ತು. ಅತಿವೃಷ್ಟಿ ಸಂಕಷ್ಟದ ಸಂದರ್ಭದಲ್ಲಿ, ರೈತರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ ಎಂದು ರಾಗಿ ಕಟಾವು ಮಾಡಲು ಯಂತ್ರಕ್ಕೆ ಬಾಡಿಗೆ ಹಣ ನಿಗದಿಪಡಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಿನ ಹಣವನ್ನು ರಾಗಿ ಕಟಾವು ಯಂತ್ರದ ಮಾಲೀಕರು ಪಡೆದುಕೊಂಡರೆ, ಅವರ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ 2005 ರ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅತಿವೃಷ್ಟಿ ಸಂಕಷ್ಟದ ದಿನಗಳಲ್ಲಿ ಕಟಾವು ಯಂತ್ರದ ಮಾಲೀಕರು ಸಹಕರಿಸಬೇಕೆಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

‘ಮೂತ್ರಪಿಂಡ ದಾನ: ಜಾಗೃತಿಗೆ ಮನವಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂತ್ರಪಿಂಡ ದಾನದ ಬಗ್ಗೆ ಕೆಲವು ತಪ್ಪು ಕಲ್ಪನೆಗಳನ್ನು ಮೂಡಿಸಲಾಗಿದೆ. ಆರೋಗ್ಯದಿಂದ ಇರುವ ಯಾವುದೇ ವ್ಯಕ್ತಿಯು ದಾನ ಮಾಡಬಹುದು. ಆದರೆ, ಕೆಲವು ಕಾನೂನುಗಳನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದು ತಜ್ಞ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

‘ಡಿಎಚ್’ ಬ್ರ್ಯಾಂಡ್‌ಸ್ಪಾಟ್ ಮತ್ತು ಸರ್ಜಾಪುರ ರಸ್ತೆಯ ಮಣಿಪಾಲ್ ಆಸ್ಪತ್ರೆ ಸಹಯೋಗದಲ್ಲಿ ಮೂತ್ರಪಿಂಡ ಕಸಿ ಕುರಿತು ಬುಧವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಪಲ್ಲವಿ ಪತ್ರಿ, ‘ರಕ್ತ ಶುದ್ಧೀಕರಿಸುವ ಕಾರ್ಯವನ್ನು ಮೂತ್ರಪಿಂಡ ಮಾಡುತ್ತದೆ. ವಿವಿಧ ಕಾಯಿಲೆಗಳು ಮತ್ತು ಕಾರಣಗಳಿಂದ ಮೂತ್ರಪಿಂಡಕ್ಕೆ ಹಾನಿಯಾಗುತ್ತದೆ’ ಎಂದು ವಿವರಿಸಿದರು.

‘ಅಂಗಾಂಗ ದಾನಗಳ ಬಗ್ಗೆ ಜನಸಾಮಾನ್ಯರಲ್ಲಿ ಇನ್ನೂ ಅರಿವು ಮೂಡಿಲ್ಲ. ಯುವಕರಿಗೂ ಈ ಬಗ್ಗೆ ಹೆಚ್ಚು ತಿಳಿವಳಿಕೆ ಮೂಡಿಸಬೇಕಾಗಿದೆ’ ಎಂದು ಸಲಹೆ ನೀಡಿದರು.



ಸಂವಾದ ಕಾರ್ಯಕ್ರಮದಲ್ಲಿ ಡಾ. ಪಲ್ಲವಿ ಪತ್ರಿ ಮತ್ತು ಡಾ. ಮನೋಹರ್ ಭದ್ರಪ್ಪ ಚರ್ಚಿಸಿದರು– ಪ್ರಜಾವಾಣಿ ಚಿತ್ರ

ತಜ್ಞ ವೈದ್ಯ ಡಾ.ಮನೋಹರ್ ಭದ್ರಪ್ಪ ಮಾತನಾಡಿ, ’ದಾನಿಗಳಿಂದ ಮೂತ್ರಪಿಂಡ ಪಡೆಯಲು ಸರ್ಕಾರ ಹಲವಾರು ನಿಯಮಗಳನ್ನು ರೂಪಿಸಿದೆ. ಸರ್ಕಾರ ರಚಿಸಿರುವ ಸಮಿತಿಯ ಅನುಮೋದನೆ ಪಡೆಯಬೇಕು ಮತ್ತು ರೋಗಿ ಜತೆ ಹಣಕಾಸಿನ ವ್ಯವಹಾರ ನಡೆಸಿರಬಾರದು’ ಎಂದು ತಿಳಿಸಿದರು.

‘18 ವರ್ಷದ ಮೇಲ್ಪಟ್ಟ ಆರೋಗ್ಯವಂತರಾಗಿರುವ ಯಾವುದೇ ವ್ಯಕ್ತಿಯು ದಾನ ಮಾಡಲು ಅರ್ಹ. ಆದರೆ, ಯಾವುದೇ ಕಾಯಿಲೆಗಳಿಂದ ಬಳಲುತ್ತಿರಬಾರದು. 60–65 ವರ್ಷದವರೂ ಸಹ ದಾನ ಮಾಡಬಹುದು. ಇದು ಆಯಾ ವ್ಯಕ್ತಿಗಳ ಆರೋಗ್ಯದ ಮೇಲೆಯೂ ಅವಲಂಬನೆಯಾಗಿದೆ. ಜೀವಸಾರ್ಥಕತೆ ಸಂಸ್ಥೆಯಲ್ಲಿ ಅಂಗಾಂಗಗಳನ್ನು ದಾನ ಮಾಡುವವರು ಹೆಸರು ನೋಂದಾಯಿಸಿ ಕಾರ್ಡ್ ಪಡೆದುಕೊಳ್ಳಬೇಕು. ಆನ್‌ಲೈನ್ ಮೂಲಕವೂ ಹೆಸರು ನೋಂದಾಯಿಸಿಕೊಳ್ಳಬಹುದು’ ಎಂದು ವಿವರಿಸಿದರು.

‘ಮೂತ್ರಪಿಂಡ ದಾನ ಮಾಡುವವರ ಕುಟುಂಬದ ಸದಸ್ಯರ ಒಪ್ಪಿಗೆ ಪಡೆಯುವುದು ಸಹ ಮಹತ್ವದ್ದಾಗಿದೆ. ದಾನ ಮಾಡಲು ಇಚ್ಛಿಸಿದ್ದರೂ ಕುಟುಂಬದ ಸದಸ್ಯರು ಒಪ್ಪಿಗೆ ಸೂಚಿಸದ ಹಲವಾರು ಸಂದರ್ಭಗಳನ್ನು ನೋಡಿದ್ದೇವೆ’ ಎಂದು ತಿಳಿಸಿದರು.

ಮೂತ್ರಪಿಂಡ ಕಸಿಗೆ ಒಳಗಾದ ತಮ್ಮ ಅನುಭವಗಳನ್ನು ಹಂಚಿಕೊಂಡ ಪ್ರಿಯಾಂಕಾ ಅವರು, ‘60 ವರ್ಷದ ನನ್ನ ಅತ್ತೆಯೇ ನನಗೆ ಮೂತ್ರಪಿಂಡ ದಾನ ಮಾಡಿದರು. ಕಸಿ ಮಾಡಿಸಿಕೊಂಡ ಬಳಿಕ ನನ್ನ ಜೀವನವೇ ಬದಲಾಗಿದೆ. ಮತ್ತೆ ಎಂದಿನಂತೆಯೇ ಈಗ ಉದ್ಯೋಗದಲ್ಲಿ ತೊಡಗಿದ್ದೇನೆ’ ಎಂದು ಹೇಳಿದರು.

ಮೂತ್ರಪಿಂಡ ಕಸಿಗೆ ಒಳಗಾದ ಶ್ರೀಕಾಂತ್ ಇದ್ದರು.

ಪತ್ರಕರ್ತೆಯರ ವಿರುದ್ಧದ ತನಿಖೆಗೆ ‘ಸುಪ್ರೀಂ’ ತಡೆ

ನವದೆಹಲಿ: ಕೋಮುಗಲಭೆಯ ವರದಿಗೆ ಸಂಬಂಧಿಸಿದಂತೆ ತ್ರಿಪುರಾ ಪೊಲೀಸರು ಎಚ್‌ಡಬ್ಲ್ಯು ನ್ಯೂಸ್ ನೆಟ್‌ವರ್ಕ್ ಮತ್ತು ಪತ್ರಕರ್ತೆಯರಾದ ಸಮೃದ್ಧಿ ಸುಕುನಿಯಾ ಮತ್ತು ಸ್ವರ್ಣಾ ಝಾ ಅವರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸುಪ್ರೀಂಕೋರ್ಟ್ ಬುಧವಾರ ತಡೆ ನೀಡಿದೆ.

ಡಿಜಿಟಲ್ ನ್ಯೂಸ್ ಪೋರ್ಟಲ್ ಎಚ್‌ಡಬ್ಲ್ಯು ನ್ಯೂಸ್ ನೆಟ್‌ವರ್ಕ್ ಮತ್ತು ಥಿಯೋಸ್ ಕನೆಕ್ಟ್ ಸಲ್ಲಿಸಿದ ಮನವಿಯ ಮೇರೆಗೆ ಮೇಲೆ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠವು ತ್ರಿಪುರಾ ಪೊಲೀಸರಿಗೆ ನೋಟಿಸ್ ಜಾರಿ ಮಾಡಿದೆ. ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಸಿದ್ಧಾರ್ಥ್ ಲೂತ್ರಾ, ‘ಇಬ್ಬರು ಪತ್ರಕರ್ತೆಯರ ವಿರುದ್ಧ ಈಗಾಗಲೇ ಎಫ್‌ಐಆರ್ ದಾಖಲಾಗಿದೆ, ನಂತರ ಅವರಿಗೆ ಜಾಮೀನು ನೀಡಲಾಗಿದೆ. ಆದರೆ, ಈಗ ಅವರ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಿಸಿರುವುದು ಸಮರ್ಥನೀಯವಲ್ಲ’ ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ರೈತರ ಹೋರಾಟ: ಇಂದು ಅಂತಿಮ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತರ ಹೋರಾಟವನ್ನು ಹಿಂಪಡೆಯುವ ಕುರಿತಂತೆ, ಸಿಂಘು ಗಡಿಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಆಯೋಜಿಸಿದ್ದ ಬುಧವಾರದ ಸಭೆಗೆ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಾಗಲಿಲ್ಲ. ಕಾರಣ, ಸಭೆಯನ್ನು ಗುರುವಾರಕ್ಕೆ ಮುಂದೂಡಲಾಗಿದೆ.

ಸಂಯುಕ್ತ ಕಿಸಾನ್ ಮೋರ್ಚಾಗೆ ಕೇಂದ್ರ ಸರ್ಕಾರ ಹೊಸ ಪ್ರಸ್ತಾವನೆಯನ್ನು ನೀಡಿತ್ತು. ಪ್ರಸ್ತಾವನೆಯಲ್ಲಿ ಹೇಳಲಾಗಿರುವ ಹಲವು ಅಂಶಗಳ ಕುರಿತ ಎಸ್‌ಕೆಎಂಗೆ ಆಕ್ಷೇಪಣೆಗಳು ಇರುವುದರಿಂದ ಸಭೆಯ ಎರಡನೇ ದಿನವೂ ಅಂತಿಮ ನಿರ್ಧಾರ ಸಾಧ್ಯವಾಗಲಿಲ್ಲ ಎನ್ನಲಾಗಿದೆ.

‘ಸಿಂಘು ಗಡಿಯಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ಎಸ್‌ಕೆಎಂ ಪುನಃ ಸಭೆ ಸೇರಲಿದೆ. ರೈತರ ಹೋರಾಟವನ್ನು ಮುಕ್ತಾಯಗೊಳಿಸುವ ಕುರಿತು ಆ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಎಸ್‌ಕೆಎಂ ಪ್ರಕಟಣೆಯಲ್ಲಿ ಹೇಳಿದೆ.

‘ಈ ಕುರಿತು ಐವರು ಸದಸ್ಯರ ಸಮಿತಿಯಲ್ಲಿದ್ದ ರೈತರೇ ಮಾಹಿತಿ ನೀಡಿದ್ದಾರೆ. ಹೋರಾಟವನ್ನು ಹಿಂಪಡೆಯುವ ಬಗ್ಗೆ ಇನ್ನು ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ ಎಂದು ರೈತ ನಾಯಕ ಗುರ್ನಾಮ್ ಸಿಂಗ್ ಚದುನಿ ಹೇಳಿದ್ದಾರೆ.

ಚೆಂಡು ಈಗ ಸರ್ಕಾರದ ಅಂಗಳದಲ್ಲಿ ಇದೆ. ನಾವು ನಮ್ಮ ಅಂತಿಮ ನಿರ್ಧಾರವನ್ನು ನಾಳೆ ಘೋಷಿಸುತ್ತೇವೆ’ ಎಂದು ರೈತ ನಾಯಕ ಯುದ್ವೀರ್ ಸಿಂಗ್ ಅವರು ಬುಧವಾರದ ಸಭೆ ಮುಕ್ತಾಯವಾದ ಬಳಿಕ ಹೇಳಿದ್ದಾರೆ.

ಬಲ್ಬೀರ್ ಸಿಂಗ್ ರಾಜೇವಾಲ್, ಅಶೋಕ್ ಧ್ವಾಲೆ, ಶಿವ್ ಕುಮಾರ್ ಕಾಕ್ಕಾ, ಗುರ್ನಾಮ್ ಸಿಂಗ್ ಚದುನಿ ಮತ್ತು ಯುದ್ವೀರ್ ಸಿಂಗ್ ಅವರು, ಸಮಿತಿಯಲ್ಲಿರುವ ಇತರ ರೈತ ನಾಯಕರು.

ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ ‘ಬ್ರಹ್ಮೋಸ್’ ಪರೀಕ್ಷೆ ಯಶಸ್ವಿ

ಬಾಲಸೋರ್, ಒಡಿಶಾ (ಪಿಟಿಐ): ಸ್ವದೇಶಿ ನಿರ್ಮಿತ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ ‘ಬ್ರಹ್ಮೋಸ್’ನ ಪರೀಕ್ಷಾರ್ಥ ಪ್ರಯೋಗ ಬುಧವಾರ ಯಶಸ್ವಿಯಾಯಿತು.

ಒಡಿಶಾ ಕರಾವಳಿಯ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಈ ಪರೀಕ್ಷೆ ನೆರವೇರಿತು. ಸೂಪರ್‌ಸಾನಿಕ್ ಯುದ್ಧವಿಮಾನ ಸುಖೋಯ್ 30 ಎಂಕೆ–1 ನಿಂದ ಚಿಮ್ಮಿದ ಬ್ರಹ್ಮೋಸ್ ಕ್ಷಿಪಣಿ, ನಿರ್ದೇಶಿತ ಪಥದಲ್ಲಿ ಸಾಗಿ ಗುರಿಯನ್ನು ನಾಶಪಡಿಸಿತು ಎಂದು ಡಿಆರ್‌ಡಿಒ ಮೂಲಗಳು ಹೇಳಿವೆ.

‘ಈ ಪರೀಕ್ಷೆಯಲ್ಲಿ ದೊರೆತ ಯಶಸ್ಸು ಬ್ರಹ್ಮೋಸ್‌ನ ಇತರ ಆವೃತ್ತಿಯ ಕ್ಷಿಪಣಿಗಳ ಉತ್ಪಾದನೆಗೆ ಹಾದಿಯನ್ನು ಸುಗಮಗೊಳಿಸಿದಂತಾಗಿದೆ’ ಎಂದು ಇವೇ ಮೂಲಗಳು ಹೇಳಿವೆ.


ಸಾಂದರ್ಭಿಕ ಚಿತ್ರ

ಕ್ಷಿಪಣಿ ಪರೀಕ್ಷೆ ನೆರವೇರಿಸಿದ ತಂಡಕ್ಕೆ ಅಭಿನಂದನೆ ಸಲ್ಲಿಸಿರುವ ಡಿಆರ್‌ಡಿಒ ಮುಖ್ಯಸ್ಥ ಡಾ.ಜಿ.ಸತೀಶ್ ರೆಡ್ಡಿ, ‘ಹಲವಾರು ಪ್ರಯೋಗಾಲಯಗಳು, ಶೈಕ್ಷಣಿಕ ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ದಿಮೆಗಳು ಹಾಗೂ ವಾಯುಪಡೆ ಈ ಸಂಕೀರ್ಣವಾದ ಕ್ಷಿಪಣಿಯ ಅಭಿವೃದ್ಧಿ, ಪರೀಕ್ಷೆ ಕಾರ್ಯದಲ್ಲಿ ತೊಡಗಿದ್ದವು’ ಎಂದು ಹೇಳಿದ್ದಾರೆ.

ನಾಮ ನಿರ್ದೇಶಿತರು: ಮತದಾರರ ಪಟ್ಟಿಯಿಂದ ಕೈಬಿಡಲು ಕೋರಿ ರಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆನೇಕಲ್, ಅತ್ತಿಬೆಲೆ ಮತ್ತು ಮಹದೇವಪುರ ಪುರಸಭೆಗೆ ನಾಮ ನಿರ್ದೇಶನಗೊಂಡಿರುವ 15 ಸದಸ್ಯರನ್ನು ವಿಧಾನ ಪರಿಷತ್ ಚುನಾವಣೆಯ ಮತದಾರರ ಪಟ್ಟಿಯಿಂದ ಕೈಬಿಡುವಂತೆ ನಿರ್ದೇಶಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಬೆಂಗಳೂರು ನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್, ‘ನಾಮನಿರ್ದೇಶಿತ ಸದಸ್ಯರಿಗೆ ಪರಿಷತ್ ಚುನಾವಣೆಯಲ್ಲಿ ಮತದಾನದ ಹಕ್ಕು ನೀಡಿ ಮತದಾನದ ಪಟ್ಟಿಯಲ್ಲಿ ಸೇರ್ಪಡೆ ಮಾಡಿರುವುದು, ಜನತಾ ಪ್ರತಿನಿಧಿ ಕಾಯ್ದೆ ಮತ್ತು ಸಂವಿಧಾನದ 243(ಆರ್) (2)(ಎ)(ಐ) ವಿಧಿಗೆ ವಿರುದ್ಧವಾಗಿದೆ. ಇವರೆಲ್ಲಾ ಆಡಳಿತಾರೂಢ ಸರ್ಕಾರದ ಪರವೇ ಮತ ಚಲಾಯಿಸುವ ಸಾಧ್ಯತೆ ಇರುತ್ತದೆ. ಇವರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿರುವುದು ಬೊಕ್ಕಸಕ್ಕೆ ಹೊರೆ. ಆದ್ದರಿಂದ, ನಾಮನಿರ್ದೇಶಿತ ಪರಿಷತ್ ಸದಸ್ಯರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ನಿರ್ದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಸರ್ಕಾರದ ಹೆಚ್ಚುವರಿ ವಕೀಲ ಕೆ.ಆರ್.ನಿತ್ಯಾನಂದ, ‘ಹೆಚ್ಚುವರಿ ಅಡ್ವೊಕೇಟ್ ಜನರಲ್ ಹಾಜರಾಗಿ ಈ ಸಂಬಂಧ ವಿವರಣೆ ನೀಡಲಿದ್ದಾರೆ. ಆದ್ದರಿಂದ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಗುರುವಾರಕ್ಕೆ (ಡಿ.9) ಮುಂದೂಡಿದೆ. ಕೇಂದ್ರ ಚುನಾವಣಾ ಆಯುಕ್ತರು, ಬೆಂಗಳೂರು ನಗರ ಜಿಲ್ಲೆಯ ವಿಧಾನ ಪರಿಷತ್ ಚುನಾವಣಾಧಿಕಾರಿಯೂ ಸೇರಿದಂತೆ ಒಟ್ಟು 15 ನಾಮನಿರ್ದೇಶಿತ ಸದಸ್ಯರನ್ನು ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ನಾಮನಿರ್ದೇಶಿತ ಸದಸ್ಯರು: ಎಂ.ಜನಾರ್ದನ, ಕೆ.ಮಂಜುನಾಥ, ಕೆ.ಸುಧಾ ಜಾಧವ್, ಆರ್.ಜಗದೀಶ್, ವಿ.ನಿತಿನ್, ಕೆ.ಪ್ರಭಾಕರ್, ಕೆ.ನಟರಾಜ್, ಎಂ.ವೆಂಕಟೇಶ ರೆಡ್ಡಿ, ನರಸಿಂಹ ಸ್ವಾಮಿ, ಎ.ಎಂ.ರಾಜಪ್ಪ, ರಘು, ಪ್ರಕಾಶ್, ಬಿ.ಆರ್.ಪ್ರಸನ್ನಕುಮಾರ್, ಬಿ.ಎಂ. ಪ್ರವೀಣ್ ಕುಮಾರ್ ಹಾಗೂ ಕೆ.ಎಸ್. ಪ್ರದೀಪ್. ಅರ್ಜಿದಾರರ ಪರ ಬಿ.ಎನ್. ಸುರೇಶ್ ಬಾಬು ವಕಾಲತ್ತು ವಹಿಸಿದ್ದಾರೆ.

ಪರಿಷತ್ ಚುನಾವಣೆ: 86 ಮತಗಟ್ಟೆ

ಬೆಂಗಳೂರು: ವಿಧಾನ ಪರಿಷತ್ತಿನ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಸಕಲ ಸಿದ್ಧತೆ ನಡೆಸಲಾಗಿದ್ದು, 5 ತಾಲ್ಲೂಕುಗಳಲ್ಲಿ 86 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದು ನಗರ ಜಿಲ್ಲಾ ಚುನಾವಣಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

83 ಗ್ರಾಮ ಪಂಚಾಯಿತಿ, 3 ಪುರಸಭೆಗಳಲ್ಲಿ ಮತಗಟ್ಟೆ ತೆರೆಯಲಾಗಿದೆ. ಡಿ.10ರಂದು ಬೆಳಿಗ್ಗೆ 8ರಿಂದ ಸಂಜೆ 4 ಗಂಟೆ ತನಕ ಮತದಾನ ನಡೆಯಲಿದೆ ಎಂದು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಮತದಾನ	ಡಿ.10
ಮತ ಎಣಿಕೆ	ಡಿ.14
ಮತ ಎಣಿಕೆ ಸ್ಥಳ	ಅರಮನೆ ರಸ್ತೆಯ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು

‘1,077 ಮಹಿಳೆಯರು, 955 ಪುರುಷರು ಸೇರಿ 2,073 ಮತದಾರರಿದ್ದಾರೆ. 38 ಸೂಕ್ಷ್ಮ, 3 ಅತಿ ಸೂಕ್ಷ್ಮ ಮತ್ತು 45 ಸಾಮಾನ್ಯ ಮತಗಟ್ಟೆಗಳಿವೆ. ಬೆಂಗಳೂರು ನಗರ ಪೊಲೀಸ್ ಆಯುಕ್ತರ ವ್ಯಾಪ್ತಿಗೆ 21 ಮತಗಟ್ಟೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವ್ಯಾಪ್ತಿಗೆ 49 ಮತಗಟ್ಟೆ ಮತ್ತು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವ್ಯಾಪ್ತಿಯಲ್ಲಿ 16 ಮತಗಟ್ಟೆಗಳಿವೆ’ ಎಂದು ಹೇಳಿದರು.

‘5 ತಾಲ್ಲೂಕುಗಳಲ್ಲಿ 15 ಎಂಸಿಸಿ ತಂಡ ರಚಿಸಲಾಗಿದೆ. 14 ಸೆಕ್ಟರಲ್ ಮತ್ತು ಮತಗಟ್ಟೆ ಅಧಿಕಾರಿಗಳನ್ನು ಕರೆದೊಯ್ಯಲು 15 ಬಿಎಂಟಿಸಿ ಬಸ್‌ಗಳನ್ನು ನಿಯೋಜಿಸಲಾಗಿದೆ ಡಿವೈಎಸ್‌ಪಿ, ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಸೇರಿ 313 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ’ ಎಂದರು.


ಮದ್ಯ ಮಾರಾಟ ನಿಷೇಧ: ಬುಧವಾರ ಸಂಜೆ 4ರಿಂದಲೇ ಮದ್ಯ ಮಾರಾಟ ನಿಷೇಧಿಸಲಾಗಿದ್ದು, ಶುಕ್ರವಾರ ಸಂಜೆ 10 ಗಂಟೆ ತನಕ ಮದ್ಯದ ಅಂಗಡಿಗಳನ್ನು ತೆರೆಯುವಂತಿಲ್ಲ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮೀ , ತಹಶೀಲ್ದಾರ್ ಮಂಜುನಾಥ್ ಇದ್ದರು.

ಸಿದ್ದರಾಮಯ್ಯಗೆ ಜೆಡಿಎಸ್ ಭಯ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ಅವರಿಗೆ ಜೆಡಿಎಸ್ ಭಯ ಕಾಡುತ್ತಿದೆ. ಚುನಾವಣೆ ಬಂದರೆ ಅವರಿಗೆ ಜೆಡಿಎಸ್ ಚಳಿ, ಜ್ವರ ಶುರುವಾಗುತ್ತದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.


ಎಚ್‌.ಡಿ. ಕುಮಾರಸ್ವಾಮಿ

ಸಿದ್ದರಾಮಯ್ಯ ಅವರನ್ನುದ್ದೇಶಿಸಿ ಬುಧವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಚಳಿ, ಜ್ವರ ಬಿಡಿಸಿಕೊಳ್ಳಲು ಅವರು ಜೆಡಿಎಸ್ ಕುಟುಂಬ ರಾಜಕಾರಣ (ಜೆಡಿಎಫ್) ಎಂಬ ಹೊಸ ಔಷಧಿ ಬಳಸುತ್ತಾರೆ. ಅದು ಅವರನ್ನು ಉಳಿಸುವ ಟಾನಿಕ್. ಹಾಗಾದರೆ ಅವರದ್ದು ಎಸ್‌ಸಿಎಫ್ (ಸಿದ್ಧ ಸೂತ್ರಧಾರ ಕಾಂಗ್ರೆಸ್ ಫ್ಯಾಮಿಲಿ) ಅಲ್ಲವೆ' ಎಂದು ಪ್ರಶ್ನಿಸಿದ್ದಾರೆ.

ಸುಳ್ಳು ಸ್ಲೋಗನ್‌ಗಳ ಸೃಷ್ಟಿಕರ್ತರಾದ ಅವರು ಮಂಡ್ಯದಲ್ಲಿ ಜಾತ್ಯತೀತ ತತ್ವ, ಆದರ್ಶಗಳಿಗೆ ಎಳ್ಳುನೀರು ಬಿಟ್ಟಿದ್ದಾರೆ. ಸಹಕಾರ ಸಚಿವರ ಸಹಾಯಕನನ್ನು ಗೆಲ್ಲಿಸಿಕೊಳ್ಳಲು 'ಜಾತಿ ಸಹಕಾರ'ಕ್ಕೆ ಮೊರೆ ಹೋಗಿದ್ದಾರೆ. ಮೈಸೂರಿನಲ್ಲಿ ಎರಡನೇ ಪ್ರಾಶಸ್ತ್ಯದ ಮತಗಳನ್ನು ಬಿಜೆಪಿಗೇ ಹಾಕಿಸಲು ಹೊರಟಿದ್ದಾರೆ. ಅದಕ್ಕಾಗಿ ಜಾತ್ಯತೀತ ಜಗಜಟ್ಟಿ 'ಸಂದೇಶ ಸನ್ನಿಧಿ'ಯಲ್ಲಿ ಕುಳಿತು ಫರ್ಮಾನು ಹೊರಡಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಮತ ಫಸಲಿಗಾಗಿ ಜಾತಿ ರಾಜಕೀಯ ಮಾಡುತ್ತಿರುವ ನಕಲಿ ಜಾತ್ಯತೀತ ಶೂರನ ಅಸಲಿ ರೂಪ ಕಳಚಿದೆ. ಮಂಡ್ಯದಲ್ಲಿ ಸಮುದಾಯದ ಹೆಸರಿನಲ್ಲೇ ಮತ ಯಾಚನೆ ನಡೆಯುತ್ತಿದೆ. ಜೆಡಿಎಸ್ ಬಿಜೆಪಿಯ ಬಿ ಟೀಂ ಎಂದು ಟೀಕಿಸುವವರೇ ಈಗ ಸಹಕಾರ ಸಚಿವರ ಸಹಾಯಕನನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ. ಇದು ಯಾರಲೆಕ್ಕ ಚುಕ್ತಾ ಮಾಡಲು? ಯಾವ ಒಳಒಪ್ಪಂದವಿದು? ಎಂದು ಕುಮಾರಸ್ವಾಮಿ ಕೇಳಿದ್ದಾರೆ.

ರಾಜಕೀಯ ಆರಂಭಿಸಿದ ಮಾತೃಪಕ್ಷವನ್ನೇ ಕ್ರೂರವಾಗಿ ಮುಳುಗಿಸಲು ಹೊರಟ ನಾಯಕರು, ಕೈ ಹಿಡಿದ ಸ್ವಪಕ್ಷವನ್ನೂ ಸ್ವಾಹಾ ಮಾಡುತ್ತಿದ್ದಾರೆ. 'ವಿನಾಶಕಾಲೇ ವಿಪರೀತ ಸುಳ್ಳು!'. ಆ ಸುಳ್ಳುಗಳೇ ಅವರನ್ನು ಸುಡುತ್ತವೆ. ಆಟ ಈಗ ಆರಂಭವಾಗಿದೆ ಎಂದು ಹೇಳಿದ್ದಾರೆ.

'ನನ್ನದು ಸೈದ್ಧಾಂತಿಕ ವಿರೋಧವಷ್ಟೇ'

ಮೈಸೂರು: 'ಎಚ್.ಡಿ.ದೇವೇಗೌಡ ಕುಟುಂಬದವರ ಜೊತೆಗೆ ನನ್ನದು ಸೈದ್ಧಾಂತಿಕ ವಿರೋಧವಷ್ಟೇ. ಆರ್‌ಎಸ್‌ಎಸ್ ಅನ್ನು ಟೀಕಿಸುವ ಕುಮಾರಸ್ವಾಮಿ ಅವರು ಬಿಜೆಪಿ ಜೊತೆಗೆ ಸರ್ಕಾರ ರಚಿಸಿದ್ದನ್ನು ಹಾಗೂ ಚುನಾವಣೆಯಲ್ಲಿ ಒಳ ಒಪ್ಪಂದ ಮಾಡಿಕೊಳ್ಳುವುದನ್ನು ವಿರೋಧಿಸಿದ್ದೇನೆ. ಅದಕ್ಕೆ ಸಮರ್ಪಕವಾಗಿ ಉತ್ತರಿಸಲಿ' ಎಂದು ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸವಾಲು ಹಾಕಿದರು.


ಸಿದ್ದರಾಮಯ್ಯ

'ಮತಾಂತರ ನಿಷೇಧ ಕಾಯ್ದೆಯು ಮುಸ್ಲಿಮರು ಮತ್ತು ಕ್ರೈಸ್ತರನ್ನು ಗುರಿಯಾಗಿಟ್ಟುಕೊಂಡ ಹುನ್ನಾರ. ಸರ್ಕಾರದ ವೈಫಲ್ಯಗಳ ಬಗ್ಗೆ ಜನರಿಗೆ ಆಕ್ರೋಶವಿರುವುದರಿಂದ ಹಿಂದುತ್ವದ ಪ್ರತಿಪಾದನೆ ಮೂಲಕ ಮತಗಳಿಸುವ ಪ್ರಯತ್ನಕ್ಕೆ ನಡೆದಿದೆ ಎಂದು ಆರೋಪಿಸಿದರು.

ಚಿಮ್ಮನಕಟ್ಟಿ ಅಸಮಾಧಾನ ಬಗೆಹರಿದಿದೆ: 'ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿ.ಬಿ. ಚಿಮ್ಮನಕಟ್ಟಿಯವರಿಗೆ ಸ್ಪರ್ಧಿಸಲು ಅವಕಾಶ ಸಿಕ್ಕಿರಲಿಲ್ಲ. ಆ ಅಸಮಾಧಾನವನ್ನು ಅವರು ಈಗ ಬಹಿರಂಗಪಡಿಸಿದ್ದಾರೆ. ಇದು ಕಾಂಗ್ರೆಸ್ ಪಕ್ಷದಲ್ಲಿರುವ ಆಂತರಿಕ ಪ್ರಜಾಪ್ರಭುತ್ವದ ದ್ಯೋತಕ' ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.

'ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿದ್ದೇ ನಮ್ಮ ಸರ್ಕಾರ. ಯೋಜನೆಯ ಶೀಘ್ರ ಜಾರಿಗೆ ಒತ್ತಾಯಿಸಿ ಡಿ.ಕೆ. ಶಿವಕುಮಾರ್ ಜತೆ ನಾನೂ ಪಾದಯಾತ್ರೆಗೆ ಹೋಗುತ್ತೇನೆ. ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯವಿದೆ ಎಂದು ಬಿಜೆಪಿಯವರು ರಾಜಕೀಯ ಲಾಭಕ್ಕಾಗಿ ಹೇಳುತ್ತಾರಷ್ಟೇ' ಎಂದು ಹೇಳಿದರು.

'ಎಐಎಂಐಎಂಗೂ ಜೆಡಿಎಸ್‌ಗೂ ವ್ಯತ್ಯಾಸವಿಲ್ಲ'

ವಿಜಯಪುರ: 'ಸಂಸದ ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಪಕ್ಷಕ್ಕೂ ಜೆಡಿಎಸ್‌ಗೆ ಯಾವುದೇ ವ್ಯತ್ಯಾಸವಿಲ್ಲ. ಓವೈಸಿ ಅವರ ಪಕ್ಷದಂತೆ ಜೆಡಿಎಸ್ ಕೂಡ ಬಿಜೆಪಿಯ 'ಬಿ' ಟೀಂ ಎಂಬುದರಲ್ಲಿ ಅನುಮಾನವೇ ಇಲ್ಲ' ಎಂದು ಶಾಸಕ ಎಂ.ಬಿ.ಪಾಟೀಲ ಆರೋಪಿಸಿದರು.


ಎಂ.ಬಿ. ಪಾಟೀಲ

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಸವಕಲ್ಯಾಣ, ಸಿಂದಗಿ, ಹಾನಗಲ್ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಜೆಡಿಎಸ್ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಜೆಡಿಎಸ್ ಪ್ರಬಲವಾಗಿರುವ ಹಾಸನ, ಮಂಡ್ಯ, ಮೈಸೂರಿನಲ್ಲಿ ಏಕೆ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತಿಲ್ಲ' ಎಂದು ಪ್ರಶ್ನಿಸಿದರು.

ಮಾಜಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ ಅವರಿಗೆ ವಯಸ್ಸಾಗಿದೆ. ಜೊತೆಗೆ ಅನಾರೋಗ್ಯದಲ್ಲಿದ್ದಾರೆ. ಹೀಗಾಗಿ ಅವರು ಏನು ಮಾತನಾಡುತ್ತಾರೋ ಅವರಿಗೆ ತಿಳಿಯುವುದಿಲ್ಲ. ಸಿದ್ದರಾಮಯ್ಯ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿರುವುದಕ್ಕೆ ಹೆಚ್ಚಿನ ಮಹತ್ವಕೊಡುವ ಅಗತ್ಯವಿಲ್ಲ ಎಂದು ಅವರು ಹೇಳಿದರು.

ಬಿಜೆಪಿ ಸರ್ಕಾರವು ಸೋಲಿನ ಭಯದಿಂದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಯನ್ನು ಬಲವಾದ ಕಾರಣವಿಲ್ಲದೇ ಮುಂದೂಡುತ್ತಾ ಬರುತ್ತಿದೆ ಎಂದು ಆರೋಪಿಸಿದರು.

ಪ್ರಜಾ ಮತ ಜನತಂತ್ರದ ಹಬ್ಬ 2021

ಪ್ರತಿ ಮತದಾರರಿಗೆ ₹ 1 ಲಕ್ಷದ ವರೆಗೆ ಆಮಿಷ

ಬಿಜೆಪಿ ಅಭ್ಯರ್ಥಿಗೆ ಮತ: ಆಣೆ ಪ್ರಮಾಣದ ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಡಾ.ವೇಣುಗೋಪಾಲ್‌ಗೆ ಮತ ನೀಡುವುದಾಗಿ ದೇವರ ಭಾವಚಿತ್ರಗಳ ಮೇಲೆ ಕೈಯಿಟ್ಟು ಮತದಾರರಿಂದ ಆಣೆ ಪ್ರಮಾಣ ಮಾಡಿಸುತ್ತಿರುವುದು ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬಾಗೇಪಲ್ಲಿ ತಾಲ್ಲೂಕಿನ ಪರಗೋಡು ಗ್ರಾಮದಲ್ಲಿರುವ, ಬಿಜೆಪಿಯ ಜಿಲ್ಲಾ ಘಟಕದ ಅಧ್ಯಕ್ಷ ರಾಮಲಿಂಗಪ್ಪ ಅವರ ತೋಟದ ಮನೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಈ ಆಣೆ ಪ್ರಮಾಣ ಮಾಡಿಸಲಾಗಿದೆ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕಿನ ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು. ಸದಸ್ಯರು ತಮ್ಮ ಸದಸ್ಯತ್ವ ಪ್ರಮಾಣ ಪತ್ರ ತೆಗೆದುಕೊಂಡು ಈ ಸಭೆಗೆ ಹೋಗಿದ್ದರು. ಸಭೆಯ ನಂತರ ಉಡುಗೊರೆಯ ಲಕೋಟೆಗಳನ್ನು ನೀಡಲಾಗಿದೆ ಎನ್ನಲಾಗುತ್ತಿದೆ.

ಜಿಲ್ಲೆಯಲ್ಲಿ ಒಬ್ಬ ಮತದಾರನಿಗೆ ₹ 75 ಸಾವಿರದಿಂದ ₹1 ಲಕ್ಷದವರೆಗೆ ಹಣ ನೀಡಲಾಗುತ್ತಿದೆ. ಮೊದಲಿಗೆ ರೆಸಾರ್ಟ್‌ಗಳಲ್ಲಿ ಮತದಾರರ ಸಭೆ ನಡೆಯುತ್ತಿತ್ತು. ನಂತರ ಮತದಾರರ ಜತೆ ಆಯಾ ಪಕ್ಷದ ಅಭ್ಯರ್ಥಿ ಅಥವಾ ಪಕ್ಷದ ಮುಖಂಡರು ದೇಗುಲಗಳಿಗೆ ತೆರಳಿ ಹಣ ನೀಡುತ್ತಿದ್ದಾರೆ ಎನ್ನಲಾಗುತ್ತಿದೆ.


ಪರಗೋಡು ಗ್ರಾಮದಲ್ಲಿ ದೇವರ ಚಿತ್ರದ ಮೇಲೆ ಆಣೆ ಮಾಡಿಸುತ್ತಿರುವುದು

ಬೆಳಗಾವಿ: ಡಿ.12ಕ್ಕೆ ರೈತರ ಅಧಿವೇಶನ

ಬೆಂಗಳೂರು: 'ಬೆಳಗಾವಿ ಅಧಿವೇಶನದಲ್ಲಿ ಭೂಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಹಾಗೂ ಗೋಹತ್ಯೆ ನಿಷೇಧ ಕಾಯ್ದೆಗಳನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು ಎಂದು ಆಗ್ರಹಿಸಿ ಇದೇ 12ರಂದು ಬೆಳಗಾವಿಯಲ್ಲಿ ರಾಜ್ಯಮಟ್ಟದ ರೈತರ ಅಧಿವೇಶನ ಹಮ್ಮಿಕೊಳ್ಳಲಾಗಿದೆ' ಎಂದು ಸಂಯುಕ್ತ ಹೋರಾಟ ಕರ್ನಾಟಕದ ಸಂಚಾಲಕ ಜಿ.ಸಿ.ಬಯ್ಯಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಕರಾಳ ಕೃಷಿ ಕಾಯ್ದೆಗಳನ್ನು ಹಿಂಪಡೆದಿರುವಂತೆ ರಾಜ್ಯ ಸರ್ಕಾರವೂ ಈ ಮಾರಕ ಕಾಯ್ದೆಗಳನ್ನು ಹಿಂಪಡೆಯಬೇಕು. ರೈತರಿಗೆ ಅಕಾಲಿಕ ಮಳೆಯಿಂದ ಆಗಿರುವ ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡಬೇಕು' ಎಂದು ಆಗ್ರಹಿಸಿದರು.

'ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಅಧಿವೇಶನದ ಅಧ್ಯಕ್ಷತೆ ವಹಿಸಲಿದ್ದು, ಸಂಯುಕ್ತ ಕಿಸಾನ್ ಮೋರ್ಚಾದ ನಾಯಕ ಯೋಗೇಂದ್ರ ಯಾದವ್ ಉದ್ಘಾಟಿಸಲಿದ್ದಾರೆ. ಅಧಿವೇಶನದಲ್ಲಿ ರೈತರು, ಕಾರ್ಮಿಕರು, ಮಹಿಳೆಯರು, ಯುವ, ವಿದ್ಯಾರ್ಥಿ ಹಾಗೂ ದಲಿತ ಸಂಘಟನೆಗಳು ಭಾಗವಹಿಸಲಿವೆ' ಎಂದರು.

ರೈತ ಮುಖಂಡ ಬಡಗಲಪುರ ನಾಗೇಂದ್ರ, 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸರ್ಕಾರ ಹಿಂಪಡೆಯಬೇಕು. ಸಾರ್ವಜನಿಕ ಉದ್ದಿಮೆಗಳ ಮಾರಾಟ ಮತ್ತು ಖಾಸಗೀಕರಣ ನೀತಿ ಕೈಬಿಡಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇವೆ' ಎಂದರು.

ಚುನಾವಣೆ: ಬಹಿರಂಗ ಪ್ರಚಾರ ಅಂತ್ಯ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನ ಪರಿಷತ್‌ನ 25 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಬುಧವಾರ ಸಂಜೆ ತೆರೆ ಬಿದ್ದಿದೆ.

ನವೆಂಬರ್ 16ರಿಂದ ಚುನಾವಣಾ ಪ್ರಕ್ರಿಯೆ ಆರಂಭವಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ತಲಾ 20 ಕ್ಷೇತ್ರಗಳಲ್ಲಿ ಪೈಪೋಟಿಯಲ್ಲಿವೆ. ಜೆಡಿಎಸ್ ಆರು ಕ್ಷೇತ್ರಗಳಲ್ಲಿ ಸ್ಪರ್ಧೆಯಲ್ಲಿದೆ. ಮುಖ್ಯಮಂತ್ರಿ, ಸಚಿವರು, ವಿರೋಧ ಪಕ್ಷದ ನಾಯಕರು, ಶಾಸಕರು ಸೇರಿದಂತೆ ಪ್ರಭಾವಿ ರಾಜಕಾರಣಿಗಳು ತಮ್ಮ ಅಭ್ಯರ್ಥಿಗಳ ಪರ ಮತಯಾಚಿಸಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಾರ್ವಜನಿಕ ಸಭೆಗಳನ್ನು ನಡೆಸಿದ್ದ ನಾಯಕರು, ಸ್ಥಳೀಯ ಸಂಸ್ಥೆಗಳ ಸದಸ್ಯರ ಮತ ಸೆಳೆಯಲು ಪ್ರಯತ್ನ ಮಾಡಿದ್ದಾರೆ. ಬುಧವಾರ ಸಂಜೆ ಬಹಿರಂಗ ಪ್ರಚಾರ ಕೊನೆಗೊಳ್ಳುವವರೆಗೂ ಎಡೆಬಿಡದೆ ಪ್ರಚಾರ ಸಭೆಗಳನ್ನು ನಡೆಸಿದ ವಿವಿಧ ಪಕ್ಷಗಳ ಮುಖಂಡರು, ಮತ ಬುಟ್ಟಿಯನ್ನು ಭದ್ರ ಪಡಿಸಿಕೊಳ್ಳಲು ಯತ್ನಿಸಿದರು.

'ಚಿನ್ನದ ಹೆಸರಲ್ಲಿ ಹಿತ್ತಾಳೆ ನಾಣ್ಯ'

ಬೀದರ್: 'ವಿಧಾನ ಪರಿಷತ್ ಚುನಾವಣೆಯಲ್ಲಿ ಗೆಲುವು ಸಾಧಿಸುವ ದುರುದ್ದೇಶದಿಂದ ಕಾಂಗ್ರೆಸ್‌ನವರು ಮತದಾರರಿಗೆ ಚಿನ್ನದ ಹೆಸರಲ್ಲಿ ಹಿತ್ತಾಳೆ ನಾಣ್ಯ ಕೊಡುತ್ತಿದ್ದಾರೆ. ಮತದಾರರು ಮೋಸ ಹೋಗಬಾರದು' ಎಂದು ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

'ಸೋಲಿನ ಭಯದಿಂದ ಹತಾಶರಾಗಿರುವ ಕಾಂಗ್ರೆಸ್ ಮುಖಂಡರು ಮತದಾರರಿಗೆ ಬೆದರಿಕೆ ಹಾಕುವ ಕೆಲಸವನ್ನೂ ಮಾಡುತ್ತಿದ್ದಾರೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಕಾಂಗ್ರೆಸ್‌ಗೂ ಸಂಬಂಧವಿಲ್ಲ: 'ನಾಣ್ಯ ಹಂಚುವುದಕ್ಕೂ ಕಾಂಗ್ರೆಸ್‌ಗೂ ಸಂಬಂಧವಿಲ್ಲ. ಬಿಜೆಪಿಯವರು ಹತಾಶೆಯಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದು ಕಾಂಗ್ರೆಸ್‌ನ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಪ್ರತಿಕ್ರಿಯಿಸಿದರು.

ಪಕ್ಷೇತರ ಅಭ್ಯರ್ಥಿ ಅಶ್ಲೀಲ ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಜಯಪುರ-ಬಾಗಲಕೋಟೆ ವಿಧಾನ ಪರಿಷತ್ ದ್ವಿಸದಸ್ಯ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿರುವ ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಲೋಣಿ ಅವರಿದ್ದಾರೆ ಎನ್ನಲಾದ ಅಶ್ಲೀಲ ವಿಡಿಯೊ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲಿ ಬುಧವಾರ ವೈರಲ್ ಆಗಿದೆ.

ವಿಧಾನ ಪರಿಷತ್ ಚುನಾವಣೆಯ ಮತದಾನಕ್ಕೆ ಒಂದು ದಿನ ಬಾಕಿ ಇರುವಾಗ ವಿಡಿಯೊ ವೈರಲ್ ಆಗಿರುವುದು ಚರ್ಚೆಗೆ ಗ್ರಾಸವಾಗಿದೆ. ಅವರ ವಿರೋಧಿಗಳ ಕೃತ್ಯವಿದು ಎನ್ನಲಾಗುತ್ತಿದೆ. ಈ ಕುರಿತು ಪ್ರತಿಕ್ರಿಯೆಗಾಗಿ ಅಭ್ಯರ್ಥಿ ಮಲ್ಲಿಕಾರ್ಜುನ ಲೋಣಿ ಅವರನ್ನು ಸಂಪರ್ಕಿಸಲು ಯತ್ನಿಸಲಾಯಿತು. ಆದರೆ, ಅವರು ಫೋನ್ ಕರೆ ಸ್ವೀಕರಿಸಲಿಲ್ಲ.

'ನನ್ನ ಚಾರಿತ್ರ್ಯ ವಧೆ ಮಾಡಲು ಅಶ್ಲೀಲ ವಿಡಿಯೊ ಬಿಡುಗಡೆಯಾಗುವ ಸಾಧ್ಯತೆ ಇದೆ' ಎಂದು ಮಂಗಳವಾರ ನಡೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಲೋಣಿ ಅವರೇ ಸುಳಿವು ನೀಡಿದ್ದರು.

ಬಸವ ಜಯಮೃತ್ಯುಂಜಯ ಸ್ವಾಮೀಜಿ ಕಿಡಿ

ಅತೃಪ್ತ ಮನಸ್ಸುಗಳು ಸಮಾಜ ಒಡೆಯುತ್ತಿವೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: '2ಎ ಮೀಸಲಾತಿಗಾಗಿ ನಾವು ನಡೆಸುತ್ತಿರುವ ಹೋರಾಟ ಕೆಲವರಿಗೆ ಇರಿಸುಮುರಿಸು ತಂದಿದೆ. ಅದನ್ನು ಮುರಿಯಲು ಕೆಲವು ಅತೃಪ್ತ ಮನಸ್ಸುಗಳು ಮಠಾಧೀಶರ ಒಕ್ಕೂಟದ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿವೆ. ಅವರ ಮುಖವಾಡ ಸದ್ಯದಲ್ಲೇ ಕಳಚಿ ಬೀಳಲಿದೆ' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಮಾಜದ ಮೂರನೇ ಪೀಠ ರಚನೆಗೆ ಸಂಬಂಧಿಸಿದಂತೆ ಪಂಚಮಸಾಲಿ ಸಮಾಜದ ಸ್ವಾಮೀಜಿಗಳ ಒಕ್ಕೂಟ ನಡೆಸುತ್ತಿರುವ ಸಭೆಗಳನ್ನು ನನ್ನ ಕಣ್ಣು ನೋಡುತ್ತಿಲ್ಲ. ಆ ಸಭೆಗಳ ವಿಷಯವನ್ನು ನನ್ನ ಕಿವಿಗಳು ಕೇಳಿಸಿಕೊಳ್ಳುತ್ತಿಲ್ಲ. ನಾನು ಅದರ ಬಗ್ಗೆ ಪ್ರತಿಕ್ರಿಯೆ ಕೊಡೋದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.



'ಸಮಾಜದ ಭಕ್ತರನ್ನು ಒಗ್ಗಟ್ಟಾಗಿಸಿ ಮೀಸಲಾತಿ ಕೇಳುವುದು ನನ್ನ ಕೆಲಸ ಅಷ್ಟೇ. ಮಠಾಧೀಶರನ್ನು ಒಗ್ಗಟ್ಟು ಮಾಡುವುದು ನನ್ನ ಕೆಲಸ ಅಲ್ಲ' ಎಂದರು.

'ಚುನಾವಣೆ ಬಂದಾಗ ತಪ್ಪು ತಿದ್ದಿಕೊಂಡು ಬಂದು ಕಾಲು ಹಿಡಿತಾರೆ. ಯಾರು ಈ ಕೆಲಸ ಮಾಡುತ್ತಿದ್ದಾರೆ ಅಂತ ನಾನು ಹೆಸರು ಹೇಳಲು ಹೋಗುವುದಿಲ್ಲ. ಅದು ಇಡೀ ಕರ್ನಾಟಕಕ್ಕೆ ಗೊತ್ತಿದೆ. ಸಮಾಜದ ಅನ್ನ ಉಂಡು, ಸಮಾಜದಿಂದ ಬೆಳೆದು, ದೊಡ್ಡವರಾಗಿ ಸಮಾಜಕ್ಕೆ ದ್ರೋಹ ಬಗೆಯುವ ಕೆಲಸ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ನನ್ನ ಬೆಳವಣಿಗೆ, ಶಾಸಕ ಬಸನಗೌಡ ಪಾಟೀಲ ಹಾಗೂ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಖ್ಯಾತಿ ನೋಡಿ ಹೊಟ್ಟೆಕಿಚ್ಚಿಗೆ ಈ ರೀತಿ ಮಾಡುತ್ತಿದ್ದಾರೆ. ಹೇಗಾದರೂ ಮಾಡಿ ಹೋರಾಟ ಕೆಡಿಸಬೇಕು, ಹಾಳು ಮಾಡಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ' ಎಂದರು.

ಇಂತಹ ಪ್ರಯತ್ನಗಳ ಬಗ್ಗೆ ಜನರಿಗೆ ಗೊತ್ತಿದೆ ಎಂದು ಹೇಳಿದ ಶ್ರೀಗಳು, ಸಚಿವರಾಗಿರುವವರೇ ಈ ಕೆಲಸ ಮಾಡುತ್ತಿದ್ದಾರಾ ಎಂಬ ಪ್ರಶ್ನೆಗೆ, ಸಚಿವ ಸಿ.ಸಿ. ಪಾಟೀಲ ಮಾತ್ರ ಪ್ರಾಮಾಣಿಕವಾಗಿ ನಮ್ಮ ಜೊತೆ ಇದ್ದಾರೆ ಎಂದರು.

ಪ್ರಧಾನಿಗೆ ಪತ್ರ ಬರೆದ ಮೇಲೆ ತರಗತಿಗೆ ಸೇರಿಸಿದರು!

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು (ಕೊಡಗು): ಶಾಲೆಗೆ ಶುಲ್ಕ ಪಾವತಿಸಿಲ್ಲ ಎಂದು ಹೇಳಿ ವಿದ್ಯಾರ್ಥಿಗಳನ್ನು ಹೊರಕ್ಕೆ ಹಾಕಿದ್ದ ಶಾಲೆಯ ವಿರುದ್ಧ ಪೋಷಕರೊಬ್ಬರು, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೊಡಗು ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ್ದಾರೆ.

ಇಲ್ಲಿನ ಕೂರ್ಗ್ ಪಬ್ಲಿಕ್ ಶಾಲೆಯಲ್ಲಿ 5ನೇ ತರಗತಿ ವಿದ್ಯಾರ್ಥಿ ಮುತ್ತಣ್ಣ ಸೇರಿದಂತೆ 20 ವಿದ್ಯಾರ್ಥಿಗಳನ್ನು ತರಗತಿಗೆ ಸೇರಿಸದೇ ಗ್ರಂಥಾಲಯದಲ್ಲಿ ಕೂರಿಸುತ್ತಿದ್ದರು ಎನ್ನಲಾಗಿದೆ. ಈ ಬಗ್ಗೆ ಬೇಸರಗೊಂಡ ಮುತ್ತಣ್ಣ ಎಂಬ ವಿದ್ಯಾರ್ಥಿಯ ತಂದೆ ಬೆಳ್ಳಿಯಪ್ಪ ಡಿ.1ರಂದು ಪ್ರಧಾನ ಮಂತ್ರಿ ಕಚೇರಿಗೆ ಇ–ಮೇಲ್ ಮೂಲಕ ದೂರು ಸಲ್ಲಿಸಿದ್ದರು. ದೂರು ಬಂದ ಹಿನ್ನೆಲೆಯಲ್ಲಿ ಶಾಲೆಗೆ ತೆರಳಿದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಮುತ್ತಣ್ಣನನ್ನು ಅಜ್ಜಿಯೊಂದಿಗೆ ತಮ್ಮ ಕಚೇರಿಗೆ ಕರೆಸಿಕೊಂಡು ಮಾಹಿತಿ ಪಡೆದುಕೊಂಡರು. ಶಾಲೆಯ ಪ್ರಾಂಶುಪಾಲರೊಂದಿಗೆ ಚರ್ಚಿಸಿದ ಬಳಿಕ ವಿದ್ಯಾರ್ಥಿಯನ್ನು ತರಗತಿಗೆ ಸೇರಿಸಲಾಗಿದೆ.

ಧಾರವಾಡದಲ್ಲಿ ನೆಲೆಸಿರುವ ವಿದ್ಯಾರ್ಥಿಯ ತಂದೆ ಬೆಳ್ಳಿಯಪ್ಪ 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ಈ ವರ್ಷ ₹60 ಸಾವಿರ ಕಟ್ಟಿದ್ದೇನೆ. ಕೋವಿಡ್ ಸಂಕಷ್ಟದ ಕಾಲದಲ್ಲಿಯೂ ಮತ್ತೆ ಶುಲ್ಕ ಏರಿಸಿದ್ದಾರೆ. ಅದರ ಬಗ್ಗೆ ಕೇಳಿದರೆ ಪ್ರಾಂಶುಪಾಲರು ಸರಿಯಾಗಿ ಉತ್ತರಿಸಲಿಲ್ಲ. ಕೇವಲ ವಾಟ್ಸ್‌ಆ್ಯಪ್ ಮೆಸೇಜ್ ಹಾಕಿದ್ದರು. ಹೀಗಾಗಿ ಬೇಸರದಿಂದ ನೇರವಾಗಿ ಪ್ರಧಾನಮಂತ್ರಿಗೆ ಪತ್ರ ಬರೆದೆ. ಈಗ ಮಗನನ್ನು ತರಗತಿಗೆ ಸೇರಿಸುತ್ತಿದ್ದಾರೆ. ಅಲ್ಲಿಂದ ಏನು ಸಂದೇಶ ಬಂದಿತ್ತೋ ಗೊತ್ತಿಲ್ಲ' ಎಂದು ಹೇಳಿದರು. ಈ ಬಗ್ಗೆ ಶಾಲೆಯ ಪ್ರಾಂಶುಪಾಲರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

'ದೂರಿನ ಪ್ರತಿ ನನಗೆ ಸಿಕ್ಕಿಲ್ಲ. ಪರಿಶೀಲಿಸುತ್ತೇನೆ' ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ 'ಪ್ರಜಾವಾಣಿ'ಗೆ ತಿಳಿಸಿದರು.

ಹಲವು ಸುಧಾರಣೆಗಳ ಹರಿಕಾರ– ಕನಸುಗಳ ಸರದಾರ • ನಿರ್ದಿಷ್ಟ ದಾಳಿ ಸಮಯದಲ್ಲಿ ಪ್ರಮುಖ ಪಾತ್ರ

6 ವರ್ಷದ ಹಿಂದಿನ ಅದೃಷ್ಟ ಈಗ ಒಲಿಯಲಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರು ವರ್ಷಗಳ ಹಿಂದೆ ಅಂದರೆ 2015ರಲ್ಲಿ ನಾಗಾಲ್ಯಾಂಡ್‌ನಲ್ಲಿ ಸಂಭವಿಸಿದ ಚೀತಾ ಹೆಲಿಕಾಪ್ಟರ್ ಅಪಘಾತದಲ್ಲಿ ಪಾರಾಗಿ ಬಂದಿದ್ದ ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರಿಗೆ ಎರಡನೇ ಬಾರಿ ಅದೃಷ್ಟ ಒಲಿಯಲಿಲ್ಲ.

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕೂನೂರಿನಲ್ಲಿ ಬುಧವಾರ ಸಂಭವಿಸಿದ ಹೆಲಿಕಾಪ್ಟರ್ ದುರಂತ ರಾವತ್, ಅವರ ಪತ್ನಿ ಮಧುಲಿಕಾ ಮತ್ತು ಇತರ 11 ಮಂದಿಯನ್ನು ಬಲಿ ಪಡೆಯಿತು.

ಸದಾ ನಗುಮೊಗದ ಸೈನಿಕರಾಗಿದ್ದ ಜನರಲ್ ಬಿಪಿನ್ ರಾವತ್ ಅವರು ದೇಶದಲ್ಲಿ ಉನ್ನತ ರಕ್ಷಣಾ ವಿಭಾಗದಲ್ಲಿ ಸುಧಾರಣೆ ಆರಂಭಿಸಿದ ಸಾಹಸಿ. ಹೊಸದಾಗಿ ಸೃಷ್ಟಿಸಲಾದ ಮೂರೂ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿ ನೇಮಕಗೊಂಡ ಅವರು, ಬಹಳ ಮಹತ್ವದ ಸುಧಾರಣಾ ಕ್ರಮಗಳನ್ನು ಕೈಗೆತ್ತಿಕೊಂಡಿದ್ದರು. ಅದು ಹಂತ ಹಂತವಾಗಿ ಜಾರಿಗೆ ಬರುವ ಹಂತದಲ್ಲೇ ಮಹಾನ್ ಸೇನಾ ನಾಯಕ ಇನ್ನಿಲ್ಲವಾಗಿದ್ದಾರೆ.

ಕಳೆದ ವರ್ಷ ಜನವರಿ 1ರಂದು ರಕ್ಷಣಾ ಪಡೆಗಳ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದ ರಾವತ್ ಅವರು, ಸೇನೆ, ವಾಯುಪಡೆ ಮತ್ತು ನೌಕಾಪಡೆಗಳ ಹಾಲಿ ಕಮಾಂಡ್‌ಗಳನ್ನು ಒಗ್ಗೂಡಿಸುವ ಪ್ರಕ್ರಿಯೆ ಆರಂಭಿಸಿದ್ದರು. ಅತ್ಯುತ್ತಮ ಕಾರ್ಯಾಚರಣೆ ಅಗತ್ಯಗಳು ಮತ್ತು ದುಬಾರಿ ಸೇನಾ ಉಪಕರಣಗಳ ಖರೀದಿಯನ್ನು ಸುಗಮಗೊಳಿಸುವುದಕ್ಕಾಗಿ ಮೂರೂ ಪಡೆಗಳನ್ನು ಒಳಗೊಂಡ ಏಕೀಕೃತ ಕಮಾಂಡ್‌ಗಳನ್ನು ಸೃಷ್ಟಿಸುವ ಹಾದಿಯಲ್ಲಿದ್ದರು.

ಸದ್ಯ ದೇಶದಲ್ಲಿ ಸೇನಾಪಡೆಗೆ 7 ಕಮಾಂಡ್‌ಗಳು, ನೌಕಾಪಡೆಗೆ 3 ಹಾಗೂ ವಾಯುಪಡೆಗೆ 7 ಕಮಾಂಡ್‌ಗಳಿವೆ. ಇವುಗಳ ಬದಲಿಗೆ ದೇಶದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಒಂದೊಂದು ಏಕೀಕೃತ ಕಮಾಂಡ್‌ಗಳನ್ನು ರಚಿಸುವುದು ಹಾಗೂ ಚೀನಾ ಮತ್ತು ಪಾಕಿಸ್ತಾನಗಳ ಸಮೀಪ ಇರುವ ಕಾರಣಕ್ಕೆ ಈಗಾಗಲೇ ಇರುವ ಉತ್ತರ ಕಮಾಂಡ್ ಅನ್ನು ಹಾಗೆಯೇ ಉಳಿಸಿಕೊಳ್ಳುವುದು ಜನರಲ್ ರಾವತ್ ಅವರ ಯೋಜನೆಯಾಗಿತ್ತು.

ಇದರ ಜತೆಗೆ, ನೌಕಾಪಡೆಗೆ ಒಂದು ಸಮಗ್ರ ಕಮಾಂಡ್, ವಾಯುಪಡೆಗಾಗಿ ವಾಯು ರಕ್ಷಣಾ ಕಮಾಂಡ್ ರಚನೆ ಹಾಗೂ ಸಂಯುಕ್ತ ತರಬೇತಿ ಕಮಾಂಡ್ ರಚಿಸುವುದು ಸಹ ಏಕೀಕೃತ ಕಮಾಂಡ್ ಯೋಜನೆಯಲ್ಲಿ ಸೇರಿದೆ.

ಆದರೆ ಈ ಯೋಜನೆಗಳು ಹೇಳಿದಷ್ಟು ಸುಲಭವಾಗಿರಲಿಲ್ಲ,. ಏಕೆಂದರೆ ವಾಯುಪಡೆ ಈ ಯೋಜನೆಗೆ ಬಹಿರಂಗವಾಗಿಯೇ ಆಕ್ಷೇಪ ವ್ಯಕ್ತಪಡಿಸಿತ್ತು ಹಾಗೂ ರಕ್ಷಣಾ ಪಡೆಗಳ ಒಳಗಿನಿಂದಲೇ ಟೀಕೆಗಳೂ ಕೇಳಿಬಂದಿದ್ದವು

ಆದರೆ ಜನರಲ್ ರಾವತ್ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರ ವಿಶೇಷ ಗೌರವಕ್ಕೆ ಒಳಗಾಗಿದ್ದರಿಂದ ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅವರು ಸಫಲರಾಗುವ ಹಾದಿಯಲ್ಲಿದ್ದರು. ಈ ಪೈಕಿ, ನೌಕಾಪಡೆಯ ಮೊದಲ ಏಕೀಕೃತ ಕಮಾಂಡ್ 2022ರ ಮಧ್ಯಭಾಗದಲ್ಲೇ ಕಾರ್ಯಗತಗೊಳ್ಳುವ ಹಂತದಲ್ಲಿದೆ. ರಾವತ್ ಅವರ ಅಕಾಲಿಕ ಸಾವು ಏಕೀಕೃತ ಕಮಾಂಡ್‌ಗಳನ್ನು ರಚನೆಯನ್ನು ಅತಂತ್ರಗೊಳಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ರಾವತ್ ಅವರು ವೈಸ್ ಚೀಫ್ ಆಗಿದ್ದ ಸಮಯದಲ್ಲೇ ಭಾರತವು ಪಾಕಿಸ್ತಾನದ ವಿರುದ್ಧ ನಿರ್ದಿಷ್ಟ ದಾಳಿ (ಸರ್ಜಿಕಲ್ ಸ್ಟ್ರೈಕ್) ನಡೆಸಿತ್ತು. ಆಗ ಅವರು ಸೇನಾಪಡೆಯ ಕಾರ್ಯಾಚರಣೆಯನ್ನು ನೋಡಿಕೊಂಡಿದ್ದರು. ಗಡಿಯಾಚೆಗೆ ಹೋಗಿ ದಾಳಿ ನಡೆಸುವ ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾರತವು ಗಡಿ ಭಾಗದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬಯಸಿದ್ದರೂ, ಅಗತ್ಯಬಿದ್ದರೆ ಗಡಿಯಲ್ಲಿ ಬಲಪ್ರಯೋಗ ನಡೆಸುವುದಕ್ಕೆ ಹೇಸುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತಿದ್ದರು.

ಸೇನಾ ಮುಖ್ಯಸ್ಥರಾಗಿ ರಾವತ್ ಅವರು ಭಾರತೀಯ ಸೇನೆಯಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತಂದಿದ್ದರು. ಸೇನೆಯೊಳಗೆ ಕುಂದುಕೊರತೆ ನಿವಾರಣೆಗೆ ಕ್ರಮ ಹಾಗೂ ಶತಮಾನಗಳಿಂದ ಜಾರಿಯಲ್ಲಿದ್ದ ಸೇನಾ ಸಿಬ್ಬಂದಿಯನ್ನು ಅಧಿಕಾರಿಗಳ ಸಹಾಯಕರಾಗಿ ನಿಯೋಜಿಸುವ ಪದ್ಧತಿಯನ್ನು ರದ್ದುಪಡಿಸಿದ್ದರು.

ವಿವಾದ: ರಾವತ್ ಅವರನ್ನು ಸೇನಾಪಡೆ ಮುಖ್ಯಸ್ಥರನ್ನಾಗಿ ನೇಮಕ ಮಾಡಿದಾಗಲೂ ವಿವಾದ ಎದುರಾಗಿತ್ತು. ಸೇವಾ ಹಿರಿತನದ ಆಧಾರದಲ್ಲಿ ಪೂರ್ವ ಕಮಾಂಡ್‌ನ ಲೆ.ಜ.ಪ್ರವೀಣ್ ಭಕ್ಷಿ ಮತ್ತು ದಕ್ಷಿಣ ಕಮಾಂಡ್‌ನ ಲೆ.ಜ.ಪಿ.ಎಂ.ಹರೀಜ್ ಅವರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಆದರೆ ಇದನ್ನು ಕಡೆಗಣಿಸಿದ ಮೋದಿ ಸರ್ಕಾರ ರಾವತ್ ಅವರನ್ನು ಸೇನಾಪಡೆ ಮುಖ್ಯಸ್ಥರನ್ನಾಗಿ ನೇಮಕ ಮಾಡಿತ್ತು.

ಅತ್ಯಂತ ಸ್ನೇಹಮಯಿಯಾಗಿದ್ದ ರಾವತ್ ಅವರು ಪತ್ರಿಕೋದ್ಯಮ (ಮಾಧ್ಯಮ ಮತ್ತು ಸಂವಹನ) ವ್ಯಾಸಂಗ ಮಾಡಿದವರು. ಸಹಜವಾಗಿಯೇ ಅವರು ಪತ್ರಕರ್ತರಿಗೆ ಹತ್ತಿರವಾಗಿದ್ದರು. ಅವರಿಗೆ ಇಬ್ಬರು ಪುತ್ರಿಯರಿದ್ದಾರೆ.



ತಮಿಳುನಾಡಿನ ಕೂನೂರಿನಲ್ಲಿ ಬುಧವಾರ ಹೆಲಿಕಾಪ್ಟರ್ ಅಪಘಾತಕ್ಕೀಡಾದ ಸ್ಥಳದಲ್ಲಿ ಅಗ್ನಿಶಾಮಕ ದಳ ಸಿಬ್ಬಂದಿ ಮತ್ತು ಪರಿಹಾರ ಕಾರ್ಯಕರ್ತರು ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ನಿರತರಾದರು. –ಎಎಫ್‌ಪಿ ಚಿತ್ರ

ರಾವತ್ ಅವರು ಪ್ರಗತಿಪರ ಚಿಂತಕರಾಗಿದ್ದರು. ಕೆಲವೊಂದು ನಿರ್ಧಾರಗಳನ್ನು ಕ್ಷಣಮಾತ್ರದಲ್ಲೇ ತೆಗೆದುಕೊಳ್ಳಬಲ್ಲ ಧೈರ್ಯಶಾಲಿಯಾಗಿದ್ದರು
ಸಂದೀಪ್ ಥಾಪರ್, ಬ್ರಿಗೇಡಿಯರ್ (ನಿವೃತ್ತ), ರಾವತ್ ಜತೆಗೆ ಕೆಲಸ ಮಾಡಿದವರು

1978ರಲ್ಲಿ ಗೋರ್ಖಾ ರೈಫಲ್ಸ್ ಸೇರ್ಪಡೆ

1978ರ ಡಿಸೆಂಬರ್‌ನಲ್ಲಿ 11ನೇ ಗೋರ್ಖಾ ರೈಫಲ್ಸ್‌ನ 5ನೇ ಬೆಟಾಲಿಯನ್‌ಗೆ ಸೇರ್ಪಡೆಯಾದ ಬಿಪಿನ್ ರಾವತ್ ಅವರು 2017ರ ಜನವರಿ 1ರಿಂದ ಸೇನಾಪಡೆಯ ಮುಖ್ಯಸ್ಥರಾಗಿ ನಿಯೋಜನೆಗೊಂಡರು. ಉತ್ತರಾಖಂಡದ ಪೌರಿ ಘರ್ವಾಲ್‌ನವರಾದ ಅವರು ಯೋಧರ ಕುಟುಂಬದ ಕುಡಿ. ಅವರ ತಂದೆ ಲಕ್ಷ್ಮಣ ಸಿಂಗ್ ರಾವತ್ ಅವರು ಸೇನೆಯಲ್ಲಿ ಲೆಫ್ಟಿನೆಂಟ್ ಜನರಲ್ ಆಗಿದ್ದರು ಹಾಗೂ 10 ಕಾರ್ಪ್ಸ್ ಅನ್ನು ಮುನ್ನಡೆಸಿದ್ದರು.

ರಾವತ್ ಅವರು ಪೂರ್ವ ವಿಭಾಗದಲ್ಲಿನ ಪದಾತಿ ದಳವೊಂದನ್ನು ಮುನ್ನಡೆಸಿದ್ದರು. ರಾಷ್ಟ್ರೀಯ ರೈಫಲ್ಸ್, ಕಾಶ್ಮೀರ ಕಣಿವೆಯ ಪದಾತಿ ದಳ, ಪೂರ್ವ ವಿಭಾಗದ ಕಾರ್ಪ್ಸ್ ಹಾಗೂ ದಕ್ಷಿಣ ಕಮಾಂಡ್‌ಗಳ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದರು. 2016ರ ಆಗಸ್ಟ್‌ನಲ್ಲಿ ಅವರು ಸೇನಾಪಡೆಯ ಉಪಮುಖ್ಯಸ್ಥರಾಗಿ ನಿಯುಕ್ತರಾದರು.

ಅಪಘಾತ: ಏನೇನಾಯ್ತು?

ಬೆಳಿಗ್ಗೆ 08.45: ಬಿಪಿನ್ ರಾವತ್, ಅವರ ಪತ್ನಿ ಮಧುಲಿಕಾ ಹಾಗೂ ಇತರ 7 ಜನರಿದ್ದ ವಿಮಾನ ದೆಹಲಿಯ ಪಾಲಂ ನಿಲ್ದಾಣದಿಂದ ಹೊರಟಿತು

ಬೆಳಿಗ್ಗೆ 11.30: ಕೊಯಮತ್ತೂರು ಸಮೀಪದ ಸೂಲೂರಿನಲ್ಲಿರುವ ವಾಯುನೆಲೆಯಲ್ಲಿ ಇಳಿದ ವಿಮಾನ

ಬೆಳಿಗ್ಗೆ 11.48: ರಾವತ್ ಸೇರಿದಂತೆ 14 ಜನರನ್ನು ಹೊತ್ತ ಎಂಐ–17ವಿ5 ಹೆಲಿಕಾಪ್ಟರ್ ವೆಲ್ಲಿಂಗ್‌ಟನ್‌ನತ್ತ ಪಯಣ

ಮಧ್ಯಾಹ್ನ 12.15: ಊಟಿಯಿಂದ 20 ಕಿಲೋಮೀಟರ್ ದೂರದಲ್ಲಿರುವ, ಕೂನೂರು ಸಮೀಪದ ನಂಜಪ್ಪಂಚತಿರಂ ಎಂಬಲ್ಲಿ ಕಾಪ್ಟರ್ ಪತನ. ವೆಲ್ಲಿಂಗ್‌ಟನ್‌ನ ಸೇನಾ ಕೇಂದ್ರದ ಹೆಲಿಪ್ಯಾಡ್‌ನಲ್ಲಿ ಲ್ಯಾಂಡಿಂಗ್ ಆಗಲು 10 ನಿಮಿಷ ಬಾಕಿಯಿದ್ದಾಗ ಕಾಪ್ಟರ್ ಅಪಘಾತಕ್ಕೀಡಾಗಿದೆ. ಅಪಘಾತ ಸ್ಥಳಕ್ಕೂ ಲ್ಯಾಂಡಿಂಗ್ ಆಗಬೇಕಿದ್ದ ಜಾಗಕ್ಕೂ 10 ಕಿಲೋಮೀಟರ್ ಅಂತರವಿದೆ

ಹೆಲಿಕಾಪ್ಟರ್‌ನಲ್ಲಿದ್ದವರು

1	ಜನರಲ್ ಬಿಪಿನ್ ರಾವತ್ (ಸಿಡಿಎಸ್)
2	ಮಧುಲಿಕಾ ರಾವತ್
3	ಬ್ರಿಗೇಡಿಯರ್ ಎಲ್.ಎಸ್. ಲಿಡ್ಡರ್
4	ಲೆಫ್ಟಿನೆಂಟ್ ಕರ್ನಲ್ ಹರ್ಜಿಂದರ್ ಸಿಂಗ್
5	ವಿಂಗ್ ಕಮಾಂಡರ್ ಪೃಥ್ವಿ ಸಿಂಗ್ ಚೌಹಾಣ್
6	ಸ್ಕ್ವಾಡ್ರನ್ ಲೀಡರ್ ಕುಲದೀಪ್
7	ಜೆಡಬ್ಲ್ಯುಒ ಪ್ರದೀಪ್
8	ಜೆಡಬ್ಲ್ಯುಒ ದಾಸ್
9	ನಾಯಕ್ ಗುರ್‌ಸೇವಕ್ ಸಿಂಗ್
10	ನಾಯಕ್ ಜಿತೇಂದ್ರ ಕುಮಾರ್
11	ಲ್ಯಾನ್ಸ್ ನಾಯಕ್ ವಿವೇಕ್ ಕುಮಾರ್
12	ಲ್ಯಾನ್ಸ್ ನಾಯಕ್ ಬಿ. ಸಾಯಿ ತೇಜ
13	ಹವಾಲ್ದಾರ್ ಸತ್ಪಾಲ್
14	ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್

ಮರಕ್ಕೆ ಅಪ್ಪಳಿಸಿ ಸಿಡಿದು ಹೋಯಿತು...

• ಇ.ಟಿ.ಬಿ ಶಿವಪ್ರಿಯನ್

ಚೆನ್ನೈ: 'ನನ್ನ ಮನೆಯ ಸುತ್ತಲಿನಲ್ಲಿ ಭಾರೀ ಸದ್ದನ್ನು ಕೇಳಿದ ನಾನು, ಏನಾಗುತ್ತಿದೆ ಎಂದು ಹೊರಬಂದು ನೋಡಿದೆ. ಬೆಂಕಿ ಹೊತ್ತಿಕೊಂಡಿದ್ದ ಹೆಲಿಕಾಪ್ಟರ್ ಒಂದು ಮರವೊಂದಕ್ಕೆ ಅಪ್ಪಳಿಸುತ್ತಿತ್ತು. ಕೆಲವೇ ಸೆಕೆಂಡುಗಳಲ್ಲಿ ಬೃಹದಾದ ಮತ್ತೊಂದು ಮರಕ್ಕೆ ಡಿಕ್ಕಿಯಾಯಿತು. ಅದರಲ್ಲಿದ್ದ ಜನರೆಲ್ಲ ಕೆಳಗೆ ಬೀಳುತ್ತಿದ್ದರು, ಆ ಬಳಿಕ, ಹೆಲಿಕಾಪ್ಟರ್ ಸಿಡಿದು ಹೋಯಿತು...'

ಕೂನೂರು ಬಳಿಯ ನಂಜಪ್ಪನಚಟ್ಟಿರಾಮದ ನಿವಾಸಿ ಕೃಷ್ಣಸ್ವಾಮಿ ಅವರ ಮಾತುಗಳಿವು.

ಸೇನಾಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಅವರು ಪ್ರಯಾಣಿಸುತ್ತಿದ್ದ ಎಂಐ–17ವಿ5 ಹೆಲಿಕಾಪ್ಟರ್ ದುರಂತದ ಪ್ರತ್ಯಕ್ಷದರ್ಶಿಗಳಲ್ಲಿ ಕೃಷ್ಣಸ್ವಾಮಿಯೂ ಒಬ್ಬರು.

ಹೆಲಿಕಾಪ್ಟರ್‌ನಿಂದ ಜನರು ಬೀಳುವ ಭಯಾನಕ ದೃಶ್ಯ ಕಂಡು ಆಘಾತಗೊಂಡ ಅವರು, ತಕ್ಷಣವೇ ತಮ್ಮ ನೆರೆಮನೆಯ ಯುವಕ ಕುಮಾರ್ ಎಂಬುವವರಿಗೆ ವಿಷಯ ತಿಳಿಸಿದ್ದಾರೆ. ಕುಮಾರ್ ಅವರು ಕೂಡಲೇ ತಮ್ಮ ಮೊಬೈಲ್ ಫೋನ್‌ನಿಂದ ಕರೆ ಮಾಡಿ, ಪೊಲೀಸರಿಗೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗೆ ಘಟನೆಯ ಮಾಹಿತಿ ನೀಡಿದ್ದಾರೆ.


'ಹೆಲಿಕಾಪ್ಟರ್ ಹೊತ್ತಿ ಉರಿದು ಬಿದ್ದ ಮೇಲೆ ದಟ್ಟ ಹೊಗೆ–ಬೆಂಕಿಯನ್ನುಳಿದು ನಮಗೆ ಬೇರೇನೂ ಕಾಣಿಸಲಿಲ್ಲ. ಆದರೆ, ಅದು ಅಪ್ಪಳಿಸುವುದನ್ನು, ಅದರಿಂದ ಮೂವರು ಬೀಳುತ್ತಿರುವುದನ್ನು ನೋಡಿದೆ. ಆ ದೃಶ್ಯ ಭಯಾನಕವಾಗಿತ್ತು' ಎಂದು ಕೃಷ್ಣಸ್ವಾಮಿ ಹೇಳಿದರು.

ಬುರ್ಲಿಯಾರ್ ಗ್ರಾಮದ ಪ್ರಕಾಶ್ ಅವರಿಗೂ ಅದೇ ಅನುಭವ. ಪಶ್ಚಿಮ ಘಟ್ಟ ಪ್ರದೇಶವಾದ ಇಲ್ಲಿ ಹೆಲಿಕಾಪ್ಟರ್ ಹಾರಾಟ ನಡೆಸುವ ಸಂದರ್ಭದಲ್ಲಿ ದಟ್ಟ ಮಂಜು ಕವಿದಿತ್ತು ಎಂದು ಅವರು ಹೇಳಿದರು.

'ಬುರ್ಲಿಯಾರ ಗ್ರಾಮದ ಮೇಲೆ ಅತಿ ಸನಿಹದಲ್ಲೇ ಹೆಲಿಕಾಪ್ಟರ್ ಹಾರುತ್ತಿದ್ದುದನ್ನು ನಾನು ನೋಡಿದೆ. ಮರವೊಂದಕ್ಕೆ ಡಿಕ್ಕಿಹೊಡೆದು, ಪತನಗೊಂಡಿತು. ಪೈಲಟ್ ಅವರನ್ನು ಮಾತ್ರ ಜೀವಂತವಾಗಿ ಹೊರತರಲು ಸಾಧ್ಯವಾಯಿತು' ಎಂದರು. ಸುಟ್ಟು ಕರಕಲಾದ ಸೇನಾ ಅಧಿಕಾರಿಗಳ ದೇಹಗಳನ್ನು ಹೆಲಿಕಾಪ್ಟರ್‌ನಿಂದ ಹೊರತೆಗೆಯುತ್ತಿರುವುದನ್ನು ಕಂಡವರೂ ದಿಗ್ಭ್ರಮೆಗೊಂಡಿದ್ದರು.

ನೀಲಗಿರಿಯ ದಟ್ಟವಾದ ಕಾಡಿನಿಂದ ಆವೃತವಾಗಿದ್ದು, ವೆಲ್ಲಿಂಗ್ಟನ್‌ನಲ್ಲಿ ಸೇರಬೇಕಾದ ಸ್ಥಳಕ್ಕೆ ಇನ್ನೇನು 10 ನಿಮಿಷವಷ್ಟೇ ಬಾಕಿ ಇದ್ದಾಗ ಹೆಲಿಕಾಪ್ಟರ್ ಪತನಗೊಂಡಿತು. ಆ ಜಾಗದ ಸುತ್ತಮುತ್ತ 200ಕ್ಕೂ ಹೆಚ್ಚು ಮನೆಗಳಿದ್ದವು. ಈ ಪ್ರದೇಶಕ್ಕೂ ಅಪಘಾತ ನಡೆದ ಸ್ಥಳಕ್ಕೂ ಇನ್ನೂರು–ಮುನ್ನೂರು ಮೀಟರ್ ಅಷ್ಟೇ ಅಂತರವಿದ್ದು, ಸ್ಥಳೀಯರು ಪವಾಡಸದೃಶವಾಗಿ ಪಾರಾಗಿದ್ದಾರೆ. ಇಲ್ಲಿನ ನಿವಾಸಿಗಳ ಪೈಕಿ ಬಹುತೇಕರು ಚಹಾ ತೋಟಗಳಲ್ಲಿ ಕೆಲಸ ಮಾಡುವವರಾಗಿದ್ದಾರೆ. ಘಟನೆ ನಡೆದಾಗ, ಕೆಲವೇ ಜನರು ತಮ್ಮ ಮನೆಗಳಲ್ಲಿದ್ದರು.

ಸುದ್ದಿ ತಿಳಿಯುತ್ತಿದ್ದಂತೆಯೇ ಎಂಟು ತುರ್ತು ಆಂಬುಲೆನ್ಸ್ ವಾಹನಗಳು ಸ್ಥಳಕ್ಕೆ ಧಾವಿಸಿ, ರಕ್ಷಣಾ ಕಾರ್ಯಾಚರಣೆಗೆ ನೆರವಾದವು. ಕೊಯಮತ್ತೂರು ವೈದ್ಯಕೀಯ ಕಾಲೇಜಿನ ಆರು ವೈದ್ಯರು ಕೂನೂರಿಗೆ ತೆರಳಿದ್ದರು.








ರಾವತ್ ನಿಧನ ನನ್ನಲ್ಲಿ ದಿಗ್ಭ್ರಮೆ ಮೂಡಿಸಿದೆ. ಭಾರತವು ತನ್ನ ಧೀರಪುತ್ರನೊಬ್ಬನನ್ನು ಕಳೆದುಕೊಂಡಿದೆ. ಅವರಿಗೆ ದೊರೆತ ಪ್ರಶಸ್ತಿಗಳು ಅವರು ನಾಲ್ಕು ದಶಕಗಳಲ್ಲಿ ದೇಶಕ್ಕಾಗಿ ಮಾಡಿರುವ ಸೇವೆಯನ್ನು ತೋರಿಸುತ್ತದೆ
ರಾಮನಾಥ್ ಕೋವಿಂದ್
ರಾಷ್ಟ್ರಪತಿ

ಬಿಪಿನ್ ರಾವತ್ ಅತ್ಯುತ್ತಮ ಯೋಧ ಮತ್ತು ನಿಜವಾದ ದೇಶಭಕ್ತರಾಗಿದ್ದರು. ತಂತ್ರಕುಶಲತೆ ಕುರಿತು ರಾವತ್ ಅವರು ಅಸಾಧಾರಣ ಒಳನೋಟ ಮತ್ತು ಮುನ್ನೋಟಗಳನ್ನು ಹೊಂದಿದ್ದರು. ಅವರ ನಿಧನ ನನ್ನನ್ನು ತೀವ್ರವಾಗಿ ಬಾಧಿಸುತ್ತಿದೆ
ನರೇಂದ್ರ ಮೋದಿ
ಪ್ರಧಾನಿ

ಜನರಲ್ ರಾವತ್ ಅವರು ಅಸಾಧಾರಣ ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ದೇಶಕ್ಕೆ ಸೇವೆ ನೀಡಿದ್ದಾರೆ. ಸೇನಾ ಪಡೆಗಳ ಮುಖ್ಯಸ್ಥರಾಗಿ ಅವರು ಸೇನಾ ಪಡೆಗಳನ್ನು ಒಗ್ಗೂಡಿಸುವ ಯೋಜನೆಯನ್ನು ಹೊಂದಿದ್ದರು
ರಾಜನಾಥ್ ಸಿಂಗ್
ರಕ್ಷಣಾ ಸಚಿವ

ಬಿಪಿನ್ ರಾವತ್ ದೇಶ ಕಂಡ ಅಪ್ರತಿಮ ಯೋಧರಲ್ಲಿ ಒಬ್ಬರು. ನಿಷ್ಠೆಯಿಂದ ತಾಯಿನಾಡಿನ ಸೇವೆ ಮಾಡಿದ್ದಾರೆ. ಅವರ ಕೊಡುಗೆ ಮತ್ತು ಬದ್ಧತೆಯನ್ನು ಪದಗಳಲ್ಲಿ ವರ್ಣಿಸಲಾಗುವುದಿಲ್ಲ. ಅವರ ನಿಧನವು ತುಂಬಾ ನೋವು ತಂದಿದೆ
ಅಮಿತ್ ಶಾ
ಕೇಂದ್ರ ಗೃಹ ಸಚಿವ

ಇದು ಹಿಂದೆಂದೂ ಕಂಡಿರದಂಥ ದುರಂತ. ಜನರಲ್ ಬಿಪಿನ್ ರಾವತ್ ಅವರ ಕುಟುಂಬಕ್ಕೆ ನನ್ನ ಸಂತಾಪಗಳು. ದುರಂತದಲ್ಲಿ ಮಡಿದ ಇತರರಿಗೂ ನನ್ನ ಸಂತಾಪಗಳು. ಈ ನೋವಿನ ಸಂದರ್ಭದಲ್ಲಿ ದೇಶ ಒಟ್ಟಾಗಿ ನಿಲ್ಲುತ್ತದೆ
ರಾಹುಲ್ ಗಾಂಧಿ
ಕಾಂಗ್ರೆಸ್ ನಾಯಕ

ಸೇನೆಯ ಹೆಲಿಕಾಪ್ಟರ್ ದುರಂತ ಪ್ರಕರಣವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಸುಪ್ರೀಂ ಕೋರ್ಟ್ ಹಿರಿಯ ನ್ಯಾಯಮೂರ್ತಿಗಳ ಮೂಲಕ ತನಿಖೆ ನಡೆಸಬೇಕು. ದುರಂತದ ಬಗ್ಗೆ ಪ್ರಧಾನಿ ಸ್ಪಷ್ಟ ಮಾಹಿತಿ ನೀಡಬೇಕು
ಸುಬ್ರಮಣಿಯನ್ ಸ್ವಾಮಿ
ರಾಜ್ಯಸಭಾ ಸದಸ್ಯ

‘ಭರಿಸಲಾಗದ ನಷ್ಟ’

ನವದೆಹಲಿ: ಜನರಲ್ ಬಿಪಿನ್ ರಾವತ್ ಅವರ ಅಕಾಲಿಕ ಸಾವು, ರಕ್ಷಣಾ ಪಡೆಗಳಿಗೆ ಹಾಗೂ ದೇಶಕ್ಕೆ ಭರಿಸಲಾಗದ ನಷ್ಟ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಂತಾಪ ವ್ಯಕ್ತಪಡಿಸಿದ್ದಾರೆ.

ತಮಿಳುನಾಡಿನಲ್ಲಿ ಸೇನಾ ಹೆಲಿಕಾಪ್ಟರ್ ಪತನಗೊಂಡು 13 ಜನರ ಸಾವಿಗೆ ಕಾರಣವಾದ ಘಟನೆ ದುರದೃಷ್ಟಕರ ಎಂದು ಟ್ವೀಟ್ ಮಾಡಿರುವ ಸಚಿವ ಸಿಂಗ್, 'ರಾವತ್ ಅವರು ರಕ್ಷಣಾ ಪಡೆಗಳ ಮೊದಲ ಮುಖ್ಯಸ್ಥರಾಗಿ ಅಸಾಧಾರಣ ಧೈರ್ಯ ಹಾಗೂ ಶ್ರದ್ಧೆಯಿಂದ ದೇಶಕ್ಕಾಗಿ ಸೇವೆ ಸಲ್ಲಿಸಿದರು. ಸೇನಾಪಡೆ, ವಾಯುಪಡೆ ಹಾಗೂ ನೌಕಾಪಡೆಗಳನ್ನು ಬೆಸೆಯುವ ಯೋಜನೆಯನ್ನು ಸಿದ್ಧಪಡಿಸಿದ್ದರು' ಎಂದು ಸ್ಮರಿಸಿದ್ದಾರೆ. ಘಟನೆಯಲ್ಲಿ ತಮ್ಮವರನ್ನು ಕಳೆದುಕೊಂಡವರ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ಇದಕ್ಕೂ ಮುನ್ನ ಸೇನಾ ಹೆಲಿಕಾಪ್ಟರ್ ಪತನ ಸುದ್ದಿ ತಿಳಿಯುತ್ತಿದ್ದಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿವರ ನೀಡಿದ ರಕ್ಷಣಾ ಸಚಿವರು, ವಾಯುಪಡೆಯ ಮುಖ್ಯಸ್ಥರಿಗೆ ಸ್ಥಳಕ್ಕೆ ತೆರಳುವಂತೆ ಸೂಚಿಸಿದ್ದಾಗಿಯೂ ಮಾಹಿತಿ ನೀಡಿದರು.

ಹೆಲಿಕಾಪ್ಟರ್ ಅಪಘಾತಕ್ಕೀಡಾದ ವಿಷಯ ತಿಳಿಯುತ್ತಲೇ ರಾವತ್ ಮನೆಗೆ ಭೇಟಿ ನೀಡಿ, ಅವರ ಪುತ್ರಿಯೊಂದಿಗೆ ಮಾತನಾಡಿದರು.

ಪ್ರಧಾನಿ ನೇತೃತ್ವದ ಸಂಪುಟ ಸಮಿತಿಗೆ ವಿವರಣೆ

ನವದೆಹಲಿ (ಪಿಟಿಐ): ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಹಾಗೂ ಇತರರು ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ ಘಟನೆಯ ಮಾಹಿತಿಯನ್ನು ಪ್ರಧಾನಿ ನೇತೃತ್ವದ ಭದ್ರತೆ ಕುರಿತ ಸಂಪುಟ ಸಮಿತಿಗೆ (ಸಿಸಿಎಸ್) ಬುಧವಾರ ನೀಡಲಾಯಿತು.

ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹಸಚಿವ ಅಮಿತ್ ಶಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಸಭೆಯಲ್ಲಿ ಹಾಜರಿದ್ದರು ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಪ್ರಧಾನಮಂತ್ರಿಗಳ ಮುಖ್ಯ ಕಾರ್ಯದರ್ಶಿ ಪಿ.ಕೆ. ಮಿಶ್ರಾ, ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರೂ ಸಭೆಯಲ್ಲಿದ್ದರು. ರಾವತ್ ನಿಧನಕ್ಕೆ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

ಕಾರಣ ಇನ್ನಷ್ಟೇ ಪತ್ತೆಯಾಗಬೇಕು: ವಾಯುಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಿಡಿಎಸ್ ಬಿಪಿನ್ ರಾವತ್ ಅವರು ಸಂಚರಿಸುತ್ತಿದ್ದ ಎಂಐ–17ವಿ5 ಹೆಲಿಕಾಪ್ಟರ್ ಪತನಕ್ಕೆ ನಿಖರ ಕಾರಣವನ್ನು ಇನ್ನಷ್ಟೇ ಪತ್ತೆಮಾಡಬೇಕಿದೆ ಎಂದು ಭಾರತೀಯ ವಾಯುಪಡೆ ಹೇಳಿದೆ.

ಪ್ರತಿಕೂಲ ಹವಾಮಾನದ ಕಾರಣ ಹೆಲಿಕಾಪ್ಟರ್ ಪತನವಾಗಿರಬಹುದು ಎಂದು ಹಲವು ಸುದ್ದಿ ಮಾಧ್ಯಮಗಳು ವರದಿ ಮಾಡಿವೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಈ ವಿಚಾರ ಚರ್ಚೆಯಾಗುತ್ತಿದೆ.

ಆದರೆ, ರಷ್ಯಾ ನಿರ್ಮಿತ ಎಂಐ–17ವಿ5 ಹೆಲಿಕಾಪ್ಟರ್ ತನ್ನ ವರ್ಗದಲ್ಲೇ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿರುವ ಹೆಲಿಕಾಪ್ಟರ್ ಎನಿಸಿಕೊಂಡಿದೆ. ಸಣ್ಣಪುಟ್ಟ ಕಾರಣಗಳಿಗೆ ಈ ಹೆಲಿಕಾಪ್ಟರ್ ಪತನವಾಗುವ ಸಾಧ್ಯತೆ ಕಡಿಮೆ ಎಂದು ತಜ್ಞರು ಹೇಳಿದ್ದಾರೆ.

ಮಳೆ, ಮೋಡ ಮುಸುಕಿದಂತಹ ಪ್ರತಿಕೂಲ ಹವಾಮಾನದಲ್ಲಿಯೂ ಸಂಚರಿಸಲು ಅನುವು ಮಾಡಿಕೊಡುವ ಹವಾಮಾನ ರೇಡಾರ್ ಈ ಹೆಲಿಕಾಪ್ಟರ್‌ನಲ್ಲಿದೆ. ಅಲ್ಲದೆ, ಅಪಘಾತದ ಸಂದರ್ಭದಲ್ಲಿ ಇಂಧನ ಟ್ಯಾಂಕ್ ಸಿಡಿಯುವುದನ್ನು ತಡೆಯುವ ವಿಶೇಷ ಕವಚವನ್ನು ಈ ಹೆಲಿಕಾಪ್ಟರ್‌ನ ಇಂಧನ ಟ್ಯಾಂಕ್‌ಗೆ ಅಳವಡಿಸಲಾಗಿರುತ್ತದೆ. ಈ ಹೆಲಿಕಾಪ್ಟರ್‌ನಲ್ಲಿ ಅತ್ಯಾಧುನಿಕವಾದ ಏವಿಯಾನಿಕ್ಸ್ ವ್ಯವಸ್ಥೆ ಇದೆ. ಹೀಗಾಗಿ ಇದು ಪ್ರತಿಕೂಲ ಹವಾಮಾನದ ಕಾರಣದಿಂದ ಪತನವಾಗುವ ಸಾಧ್ಯತೆ ತೀರಾ ಕಡಿಮೆ ಎಂದು ವಾಯುಪಡೆಯ ನಿವೃತ್ತ ಏರ್‌ಮಾರ್ಷಲ್ ಆರ್.ಎಸ್. ಒಬೆರಾಯ್ ವಿಶ್ಲೇಷಿಸಿದ್ದಾರೆ.

ಹೆಲಿಕಾಪ್ಟರ್ ಪತನವಾಗಿರುವ ಕೂನೂರು, ನೀಲಗಿರಿ ಪರ್ವತ ಪ್ರದೇಶದಲ್ಲಿದೆ. ಸಮುದ್ರಮಟ್ಟದಿಂದ 1,850 ಮೀಟರ್‌ನಷ್ಟು ಎತ್ತರದಲ್ಲಿ ಕೂನೂರು ಇದೆ. ಅವಘಡ ಸಂಭವಿಸಿದ ಸಮಯದಲ್ಲಿ ಈ ಪ್ರದೇಶದಲ್ಲಿ ಬೀಸುತ್ತಿದ್ದ ಗಾಳಿಯ ವೇಗ ಪ್ರತಿ ಗಂಟೆಗೆ 8 ಕಿ.ಮೀ.ನಷ್ಟು ಮಾತ್ರವಿತ್ತು. ಹೀಗಾಗಿ ಬಿರುಗಾಳಿಯ ಕಾರಣಕ್ಕೆ ಹೆಲಿಕಾಪ್ಟರ್ ಪತನವಾಗಿರುವ ಸಾಧ್ಯತೆ ಇಲ್ಲ. ಅವಘಡ ಸಂಭವಿಸಿದಾಗ ಕೂನೂರು ಪ್ರದೇಶದಲ್ಲಿ ತುಂತುರು ಮಳೆಯಷ್ಟೇ ಆಗುತ್ತಿತ್ತು. ಹೀಗಾಗಿ ಮಳೆಯ ಕಾರಣಕ್ಕೆ ಹೆಲಿಕಾಪ್ಟರ್ ಪತನವಾಗಿರುವ ಸಾಧ್ಯತೆ ತೀರಾ ಕಡಿಮೆ ಎಂದು ಅವರು ವಿಶ್ಲೇಷಿಸಿದ್ದಾರೆ.

'ಹೆಲಿಕಾಪ್ಟರ್‌ಗೆ ಆಕಾಶದಲ್ಲಿಯೇ ಬೆಂಕಿ ಹೊತ್ತಿಕೊಂಡಿತ್ತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ' ಎಂದು ಎಎನ್ಐ ಸುದ್ದಿಸಂಸ್ಥೆ ತನ್ನ ವಿಡಿಯೊ ಟ್ವೀಟ್‌ನಲ್ಲಿ ಹೇಳಿದೆ. ಇದು ನಿಜವೇ ಆಗಿದ್ದರೆ ಹೆಲಿಕಾಪ್ಟರ್‌ಗೆ ಬೆಂಕಿ ಹೊತ್ತಿಕೊಂಡಿದ್ದು ಹೇಗೆ ಎಂಬುದನ್ನು ಪತ್ತೆ ಮಾಡಬೇಕಾಗುತ್ತದೆ. ಈ ಹೆಲಿಕಾಪ್ಟರ್ ಮೈನಸ್ 50 ಡಿಗ್ರಿ ಸೆಲ್ಸಿಯಸ್‌ನಷ್ಟು ಥಂಡಿಯ ವಾತಾವರಣದಿಂದ 50 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡುಬಿಸಿಯ ವಾತಾವರಣದಲ್ಲಿ ಕಾರ್ಯಾಚರಣೆ ಮಾಡುವ ಸಾಮರ್ಥ್ಯ ಹೊಂದಿದೆ. ತೀರಾ ದೂರದ ಪ್ರಯಾಣದ ವೇಳೆ ಎಂಜಿನ್‌ನ ಉಷ್ಣತೆಯು ಇಂಧನ ಟ್ಯಾಂಕ್‌ಗೆ ತಾಗದೇ ಇರುವ ರೀತಿಯಲ್ಲಿ ಉಷ್ಣ ನಿರೋಧಕ ವ್ಯವಸ್ಥೆಯನ್ನು ಈ ಹೆಲಿಕಾಪ್ಟರ್ ಹೊಂದಿದೆ. ಅಪಘಾತ ಸಂಭವಿಸಿದ ವೇಳೆ ಕೂನೂರಿನಲ್ಲಿ 20 ಡಿಗ್ರಿ ಸೆಲ್ಸಿಯಸ್‌ನಷ್ಟು ಮಾತ್ರ ಉಷ್ಣಾಂಶವಿತ್ತು. ಹೀಗಾಗಿ ಉಷ್ಣತೆಯ ಕಾರಣಕ್ಕೆ ಹೆಲಿಕಾಪ್ಟರ್‌ಗೆ ಬೆಂಕಿಹೊತ್ತಿಕೊಂಡಿರುವ ಸಾಧ್ಯತೆ ಇಲ್ಲವೇ ಇಲ್ಲ ಎನ್ನಬಹುದು' ಎಂದು ಅವರು ವಿಶ್ಲೇಷಿಸಿದ್ದಾರೆ.



ಬಿಪಿನ್ ರಾವತ್ ಮತ್ತು ಅವರ ಪತ್ನಿ ಮಧುಲಿಕಾ ರಾವತ್

ರಾಷ್ಟ್ರಪತಿ ಕಾರ್ಯಕ್ರಮ ರದ್ದು

ರಾವತ್ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಪತನದ ಸುದ್ದಿ ತಿಳಿಯುತ್ತಿದ್ದಂತೆಯೇ, ಮುಂಬೈನಲ್ಲಿ ಬುಧವಾರ ನಿಗದಿಯಾಗಿದ್ದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಕಾರ್ಯಕ್ರಮ ರದ್ದಾಯಿತು.

ರಾಜಭವನದ ದರ್ಬಾಲ್ ಹಾಲ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೋವಿಂದ್ ಭಾಗವಹಿಸಲಿದ್ದರು. ರಾಜ್ಯಪಾಲ ಭಗತ್ ಸಿಂಗ್ ಕೋಶ್ಯಾರಿ ಅವರೇ ಕಾರ್ಯಕ್ರಮ ರದ್ದಾಗಿರುವುದಾಗಿ ಘೋಷಿಸಿದರು.

ಟಿಎಂಸಿ ನಾಯಕರೊಂದಿಗೆ ಸಂಸತ್ತಿನಲ್ಲಿ ಬುಧವಾರ 3.30ಕ್ಕೆ ನಿಗದಿಯಾಗಿದ್ದ ತಮ್ಮ ಸಭೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ರದ್ದು ಮಾಡಿದರು.

ಹೆಲಿಕಾಪ್ಟರ್ ದುರಂತದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತಮ್ಮ ಹುಟ್ಟುಹಬ್ಬ ಆಚರಿಸದೇ ಇರಲು ನಿರ್ಧರಿಸಿದ್ದಾರೆ. ಸೋನಿಯಾ ಅವರ ಹುಟ್ಟುಹಬ್ಬವನ್ನು ಆಚರಿಸಬಾರದು ಎಂದು ಪಕ್ಷದ ಕಾರ್ಯಕರ್ತರಿಗೆ ಕೇಳಿಕೊಳ್ಳಲಾಗಿದೆ.

ಹೆಲಿಕಾಪ್ಟರ್ ಪತನ: ಬಿಪಿನ್ ರಾವತ್ ಸೇರಿ 13 ಮಂದಿ ಸಾವು

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಸೇನಾ ಪಡೆಗಳ ಮುಖ್ಯಸ್ಥರು ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯಲ್ಲಿ ಏನನ್ನು ಚರ್ಚಿಸಲಾಯಿತು ಎಂಬುದನ್ನು ಸರ್ಕಾರವು ಬಹಿರಂಗಪಡಿಸಿಲ್ಲ.

ಬಿಪಿನ್ ರಾವತ್ ಅವರಿದ್ದ ಸಿಡಿಎಸ್ ಮುಖ್ಯಸ್ಥನ ಹುದ್ದೆ ಈಗ ತೆರವಾಗಿದ್ದು, ಆ ಹುದ್ದೆಗೆ ಯಾರನ್ನು ನೇಮಕ ಮಾಡಲಾಗುತ್ತದೆ ಎಂಬುದರ ಬಗ್ಗೆ ಸರ್ಕಾರ ಯಾವ ಮಾಹಿತಿಯನ್ನೂ ನೀಡಿಲ್ಲ.

ವಿಡಿಯೊಗಳು ವೈರಲ್, ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ: ನೆಲಕ್ಕೆ ಅಪ್ಪಳಿಸಿದ ನಂತರವೂ ಹೆಲಿಕಾಪ್ಟರ್ ಹೊತ್ತಿ ಉರಿಯುತ್ತಿತ್ತು. ಅದರಲ್ಲಿದ್ದವರು ಬೆಂಕಿಯಲ್ಲಿ ಉರಿಯುತ್ತಿರುವ, ಹೆಲಿಕಾಪ್ಟರ್ ಛಿದ್ರವಾಗಿರುವ, ಗಾಯಾಳುಗಳನ್ನು ಬೆಡ್‌ಶೀಟ್‌ನಲ್ಲಿ ಹೊತ್ತೊಯ್ಯುತ್ತಿರುವ ದೃಶ್ಯಗಳಿರುವ ವಿಡಿಯೊ ಮತ್ತು ರಕ್ಷಣಾ ಕಾರ್ಯಾಚರಣೆಯ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. 'ಇದು ಅತ್ಯಂತ ಸುರಕ್ಷಿತ ಹೆಲಿಕಾಪ್ಟರ್ ಆಗಿದ್ದು, ಹೇಗೆ ಪತನವಾಯಿತು?' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಪ್ರಶ್ನಿಸಿದ್ದಾರೆ. ಘಟನಾ ಸ್ಥಳದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಸ್ಥಳೀಯ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ. ಆದರೆ ಪೊಲೀಸರು ಇದನ್ನು ದೃಢಪಡಿಸಿಲ್ಲ.

ಶುಕ್ರವಾರ ಅಂತ್ಯಕ್ರಿಯೆ

ಸಿಡಿಎಸ್ ಬಿಪಿನ್ ರಾವತ್ ಮತ್ತು ಅವರ ಪತ್ನಿಯ ಅಂತ್ಯಕ್ರಿಯೆ ಶುಕ್ರವಾರ (ಡಿ.10) ನಡೆಸಲು ನಿರ್ಧರಿಸಲಾಗಿದೆ. ದೆಹಲಿಯ ಕಂಟೋನ್ಮೆಂಟ್‌ನಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ. ಮಿಲಿಟರಿ ವಿಮಾನದಲ್ಲಿ ಗುರುವಾರ ಸಂಜೆ ಪಾರ್ಥಿವ ಶರೀರಗಳನ್ನು ದೆಹಲಿಗೆ ತರಲಾಗುತ್ತದೆ. ಶುಕ್ರವಾರ ಪಾರ್ಥಿವ ಶರೀರಗಳನ್ನು ರಾವತ್ ಅವರ ನಿವಾಸಕ್ಕೆ ತರಲಾಗುತ್ತದೆ. ಆ ದಿನ ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರವರೆಗೂ ಅಂತಿಮ ನಮನ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

ಕಾಮರಾಜ್ ಮಾರ್ಗದಿಂದ ದೆಹಲಿ ಕಂಟೋನ್ಮೆಂಟ್‌ನ ಬರಾಡ್ ಸ್ಕ್ವೇರ್‌ವರೆಗೂ ಪಾರ್ಥಿವ ಶರೀರದ ಮೆರವಣಿಗೆ ಸಾಗಲಿದೆ.

ಭಾರತೀಯ ಸೇನಾಪಡೆಗಳ ಸುಧಾರಣೆಯಲ್ಲಿ, ಭಾರತ ಮತ್ತು ಅಮೆರಿಕದ ನಡುವಣ ರಕ್ಷಣಾ ಸಹಕಾರ ಗಟ್ಟಿಗೊಳ್ಳುವಲ್ಲಿ ರಾವತ್ ಅವರು ಮಹತ್ವದ ಪಾತ್ರವಹಿಸಿದ್ದರು
ಭಾರತದಲ್ಲಿನ ಅಮೆರಿಕದ ರಾಯಭಾರ ಕಚೇರಿ

ಪ್ರಾಣ ಪಣಕ್ಕಿಟ್ಟು ಯುದ್ಧವಿಮಾನ ರಕ್ಷಿಸಿದ್ದ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ವಾಯುಪಡೆಯ ಅನುಭವಿ ಪೈಲಟ್ ಎನಿಸಿರುವ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರು ಎಂಐ17ವಿ5 ಕಾಪ್ಟರ್ ದುರಂತದಲ್ಲಿ ಬದುಕುಳಿದಿದ್ದು, ತಮಿಳುನಾಡಿನ ವೆಲ್ಲಿಂಗ್‌ಟನ್ ಸೇನಾ ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದಾರೆ.

2020ರಲ್ಲಿ, ಲಘು ಯುದ್ಧವಿಮಾನ (ಎಲ್‌ಸಿಎ) ತೇಜಸ್ ತಾಂತ್ರಿಕ ವೈಫಲ್ಯದಿಂದ ಪತನವಾಗುವ ಅಪಾಯವಿದ್ದಾಗಲೂ, ತಮ್ಮ ಪ್ರಾಣವನ್ನು ಲೆಕ್ಕಿಸದೆ ಅದನ್ನು ರಕ್ಷಿಸಿದ್ದ ವರುಣ್ ಸಿಂಗ್ ಅವರಿಗೆ ಸ್ವಾತಂತ್ರ್ಯೋತ್ಸವದಲ್ಲಿ ಶೌರ್ಯಚಕ್ರ ನೀಡಲಾಗಿತ್ತು.

ವರುಣ್ ಸಿಂಗ್ ಅವರು ಎಲ್‌ಸಿಎ ಸ್ಕ್ವಾಡ್ರನ್‌ನಲ್ಲಿ ಪೈಲಟ್ ಆಗಿದ್ದರು. ಯುದ್ಧವಿಮಾನದಲ್ಲಿ ಕಾಣಿಸಿದ್ದ ತಾಂತ್ರಿಕ ದೋಷವನ್ನು ಸರಿಪಡಿಸಿದ ಬಳಿಕ, ಅದನ್ನು ಪರೀಕ್ಷಾರ್ಥವಾಗಿ ಹಾರಾಟ ನಡೆಸುವ ಹೊಣೆಯನ್ನು ವರುಣ್ ಹೊತ್ತಿದ್ದರು. ಅತ್ಯಂತ ಎತ್ತರದ ಪ್ರದೇಶದಲ್ಲಿ ವಿಮಾನ ನಿಯಂತ್ರಣ ವ್ಯವಸ್ಥೆ ಮತ್ತು ವಿಮಾನದೊಳಗಿನ ಗಾಳಿಯ ಒತ್ತಡ ವ್ಯವಸ್ಥೆಯನ್ನು ಅವರು ಪರೀಕ್ಷಿಸಬೇಕಿತ್ತು.

ಅತ್ಯಂತ ಎತ್ತರದಲ್ಲಿ ಹಾರಾಟ ನಡೆಸುತ್ತಿದ್ದ ವೇಳೆ ವಿಮಾನದಲ್ಲಿ ಮತ್ತೆ ತಾಂತ್ರಿಕ ದೋಷ ಇರುವುದನ್ನು ಅವರು ಪತ್ತೆಹಚ್ಚಿದರು. ತಕ್ಷಣ ವಿಮಾನವನ್ನು ಲ್ಯಾಂಡಿಂಗ್ ಮಾಡಲು ಅವರು ಮುಂದಾದರು. ವಿಮಾನವನ್ನು ಇಳಿಸುವಾಗ ವಿಮಾನ ನಿಯಂತ್ರಣ ವ್ಯವಸ್ಥೆ ಕೈಕೊಟ್ಟಿತು. ಪೈಲಟ್‌ಗೆ ವಿಮಾನದ ಮೇಲಿದ್ದ ನಿಯಂತ್ರಣ ಸಂಪೂರ್ಣವಾಗಿ ಕೈತಪ್ಪಿತು. ಇದು ದೊಡ್ಡ ದುರಂತ ಉಂಟಾಗುವ ಸೂಚನೆಯಾಗಿತ್ತು.

ಲ್ಯಾಂಡಿಂಗ್ ಮಾಡಲು ಯತ್ನಿಸಿದಾಗ, ನಿಯಂತ್ರಣಕ್ಕೆ ಸಿಗದೇ ವಿಮಾನವು ರಭಸದಿಂದ ನೆಲದತ್ತ ಬೀಳಲಾರಂಭಿಸಿತು. ಇದು ಜೀವಕ್ಕೆ ತೀವ್ರ ಅಪಾಯ ತಂದೊಡ್ಡುವ ಪರಿಸ್ಥಿತಿ. ದೈಹಿಕ ಹಾಗೂ ಮಾನಸಿಕ ಬಲವನ್ನು ಕುಗ್ಗಿಸುವ ಈ ಸ್ಥಿತಿಯನ್ನು ಹತೋಟಿಗೆ ತಂದ ವರುಣ್ ಸಿಂಗ್, ತಮ್ಮ ಚಾಲನಾ ಕೌಶಲಗಳನ್ನು ಬಳಸಿ ವಿಮಾನವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾದರು.

ವಿಮಾನವು ಚಾಲನಾ ನಿಯಂತ್ರಣ ತಪ್ಪಿದಾಗ, ಅದರಿಂದ ಹೊರಬಂದು ಜೀವ ಉಳಿಸಿಕೊಳ್ಳುವ ಆಯ್ಕೆಯು ಪೈಲಟ್‌ಗೆ ಇರುತ್ತದೆ. ಆದರೆ ವರುಣ್ ಸಿಂಗ್ ಅವರು ತಮ್ಮ ಜೀವಕ್ಕೆ ಇದ್ದ ಅಪಾಯವನ್ನು ಲೆಕ್ಕಿಸದೆ ವಿಮಾನವನ್ನು ಉಳಿಸಿಕೊಂಡಿದ್ದರು. ಆಗಬಹುದಾಗಿದ್ದ ದೊಡ್ಡ ಹಾನಿಯನ್ನು ತಪ್ಪಿಸಿದ್ದ ಅವರಿಗೆ ಶೌರ್ಯಚಕ್ರ ನೀಡಿ ಗೌರವಿಸಲಾಗಿತ್ತು.



ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್

ಜೈಲಿನಿಂದ ಸುಧಾ ಭಾರದ್ವಾಜ್ ಬಿಡುಗಡೆಗೆ ಕೋರ್ಟ್ ಅನುಮತಿ

ಮುಂಬೈ (ಪಿಟಿಐ): ಎಲ್ಗಾರ್ ಪರಿಷದ್–ಮಾವೊವಾದಿ ಸಂಪರ್ಕ ಪ್ರಕರಣದ ಆರೋಪಿ, ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಸುಧಾ ಭಾರದ್ವಾಜ್ ಅವರನ್ನು ಇಲ್ಲಿರುವ ವಿಶೇಷ ಎನ್‌ಐಎ ಕೋರ್ಟ್ ಮುಂದೆ ಬುಧವಾರ ಹಾಜರುಪಡಿಸಲಾಯಿತು.

₹ 50 ಸಾವಿರ ಭದ್ರತೆ ಸಲ್ಲಿಸಿದ ನಂತರ ಅವರನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ವಿಶೇಷ ನ್ಯಾಯಾಧೀಶ ಡಿ.ಇ.ಕೋಥಳೀಕರ್ ಆದೇಶಿಸಿದರು. ಭದ್ರತೆಯನ್ನು ನಗದು ರೂಪದಲ್ಲಿ ಪಾವತಿಸಲು ಕೋರ್ಟ್ ಅನುಮತಿ ನೀಡಿತು. ಅವರು ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸೇರಿದ ಪ್ರದೇಶದಲ್ಲಿಯೇ ವಾಸ ಮಾಡಬೇಕು ಹಾಗೂ ಕೋರ್ಟ್ ಅನುಮತಿ ಇಲ್ಲದೇ ಮುಂಬೈ ತೊರೆಯಬಾರದು ಎಂಬ ಷರತ್ತುಗಳನ್ನು ವಿಧಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪುಣೆ ಪೊಲೀಸರು ಅವರನ್ನು 2018 ಅ.27 ರಂದು ಬಂಧಿಸಿದ್ದರು. ತನಿಖಾಧಿಕಾರಿಯ ಕರ್ತವ್ಯ ಲೋಪದಿಂದ ಸಿಗಬಹುದಾದ ಜಾಮೀನನ್ನು ಸುಧಾ ಭಾರದ್ವಾಜ್ ಅವರಿಗೆ ಬಾಂಬೆ ಹೈಕೋರ್ಟ್ ಡಿ.1 ರಂದು ಮಂಜೂರು ಮಾಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಎನ್‌ಐಎ ಸಲ್ಲಿಸಿದ್ದ ಮೇಲ್ಮನವಿ ಯನ್ನು ಸುಪ್ರೀಂ ಕೋರ್ಟ್ ಡಿ.7 ವಜಾ ಗೊಳಿಸಿತ್ತು. ಜೈಲಿನಿಂದ ಅವರನ್ನು ಬಿಡುಗಡೆ ಮಾಡುವ ದಿನಾಂಕ ಹಾಗೂ ಷರತ್ತುಗಳಿಗೆ ಸಂಬಂಧಿಸಿ ನಿರ್ಧರಿಸುವಂತೆ ವಿಶೇಷ ಎನ್‌ಐಎ ಕೋರ್ಟ್‌ಗೆ ನಿರ್ದೇಶನ ನೀಡಿತ್ತು.



ಸುಧಾ

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರೀಕ್ಷೆ



ಗ್ರೂಪ್-ಸಿ (ತಾಂತ್ರಿಕೇತರ) ಹುದ್ದೆ

ರಾಜ್ಯ ಮತ್ತು ಪ್ರಾದೇಶಿಕ ಆಡಳಿತ



ಭಾಗ- 1

ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ಡಿಸೆಂಬರ್ 19ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆಗೆ ಸಿದ್ಧತೆ ನಡೆಸುವವರಿಗಾಗಿ 'ಸಾಮಾನ್ಯ ಜ್ಞಾನ' ವಿಭಾಗದಲ್ಲಿ 'ರಾಜ್ಯ ಮತ್ತು ಪ್ರಾದೇಶಿಕ ಆಡಳಿತ' ವಿಷಯದ ಕುರಿತಾದ ಬಹುಆಯ್ಕೆ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ವಿಧಾನಪರಿಷತ್ ರಚಿಸಲು ವಿಧಾನಸಭೆಯಲ್ಲಿ ಮೂರನೇ ಎರಡರಷ್ಟು ಸದಸ್ಯರ ಬಹುಮತದಿಂದ ನಿರ್ಣಯ ಅಂಗೀಕಾರವಾಗಬೇಕು. ನಂತರ ಆ ನಿರ್ಣಯವನ್ನು ರಾಜ್ಯಪಾಲರ ಸಹಿಯೊಂದಿಗೆ ಸಂಸತ್ತಿಗೆ ಕಳುಹಿಸಬೇಕು. ಅಲ್ಲಿ ಸರಳ ಬಹುಮತದೊಂದಿಗೆ ವಿಧಾನಪರಿಷತ್ತನ್ನು ರಚಿಸಬಹುದು ಎಂದು ನಮ್ಮ ಸಂವಿಧಾನದ ಯಾವ ವಿಧಿ (ಆರ್ಟಿಕಲ್) ತಿಳಿಸುತ್ತದೆ?


ಎ) 169 ಬಿ) 269 ಸಿ) 369
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಎ

2) ಭಾರತ, ಸಂವಿಧಾನವನ್ನು ಅಂಗೀಕರಿಸುವ ಮೊದಲೇ ಮೈಸೂರು ಸಂಸ್ಥಾನದಲ್ಲಿ ಮೇಲ್ಮನೆ ಸ್ಥಾಪನೆಯಾಗಿತ್ತು. ಮುಂದೆ ರಾಷ್ಟ್ರ ಮಟ್ಟದಲ್ಲಿ 'ರಾಜ್ಯಸಭೆ' ಸ್ಥಾಪನೆಗೂ ಇದು ಸ್ಫೂರ್ತಿಯಾಯಿತು. ಹಾಗಾದರೆ ಮೈಸೂರು ಸಂಸ್ಥಾನದಲ್ಲಿ ಯಾವ ವರ್ಷ ಮೇಲ್ಮನೆ ಸ್ಥಾಪನೆ ಮಾಡಲಾಗಿತ್ತು?

ಎ) 1901 ಬಿ) 1907 ಸಿ) 1913
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಬಿ



3) ದೇಶದಲ್ಲಿ ಅತಿ ಹೆಚ್ಚು ವಿಧಾನಪರಿಷತ್ ಸದಸ್ಯರನ್ನು ಹೊಂದಿರುವ ಪ್ರಥಮ ರಾಜ್ಯ ಉತ್ತರ ಪ್ರದೇಶ. ಹಾಗಾದರೆ ದ್ವಿತೀಯ ರಾಜ್ಯ ಯಾವುದು?

ಎ) ಮಹಾರಾಷ್ಟ್ರ ಬಿ) ಕರ್ನಾಟಕ
ಸಿ) ಬಿಹಾರ ಡಿ) ತೆಲಂಗಾಣ

ಉತ್ತರ:- ಎ (ವಿವರಣೆ:- ಕರ್ನಾಟಕ ಹಾಗೂ ಬಿಹಾರ ರಾಜ್ಯಗಳು ಕ್ರಮವಾಗಿ 3ನೇ ಸ್ಥಾನದಲ್ಲಿವೆ. ಎರಡೂ ರಾಜ್ಯಗಳು ತಲಾ 75 ವಿಧಾನಪರಿಷತ್ ಸದಸ್ಯರನ್ನು ಹೊಂದಿವೆ. ಉತ್ತರ ಪ್ರದೇಶ 100 ಹಾಗೂ ಮಹಾರಾಷ್ಟ್ರ 78 ಸ್ಥಾನಗಳನ್ನು ಹೊಂದಿವೆ)

4) ಸಂವಿಧಾನದ 352ನೇ ವಿಧಿಯನ್ವಯ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಜಾರಿಯಾಗಿ, ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಸಲು ಸಾಧ್ಯವಾಗದ ಸಂದರ್ಭದಲ್ಲಿ ಸಂಸತ್ತು ತುರ್ತು ಪರಿಸ್ಥಿತಿ ಅವಧಿಯನ್ನು ಒಂದು ವರ್ಷದವರೆಗೆ ವಿಸ್ತರಿಸಬಹುದು. ಆದರೆ ತುರ್ತುಪರಿಸ್ಥಿತಿ ರದ್ದಾಗಿ .... ತಿಂಗಳ ಒಳಗಾಗಿ ಚುನಾವಣೆ ನಡೆದು ಹೊಸ ವಿಧಾನಸಭೆ ರಚನೆಯಾಗಬೇಕು.

ಎ) 6 ತಿಂಗಳ ಬಿ) 10 ತಿಂಗಳ
ಸಿ) 3 ತಿಂಗಳ ಡಿ) 9 ತಿಂಗಳ

ಉತ್ತರ:- ಎ

5) ವಿಧಾನಸಭಾ ಅಧಿವೇಶನ ನಡೆಸಲು ಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯನ್ನು ಕೋರಂ ಎಂದು ಕರೆಯುವರು. ಕೋರಂ ಆಗಲು ಒಟ್ಟು ವಿಧಾನಸಭೆಯ ಒಟ್ಟು ಸದಸ್ಯರಲ್ಲಿ 1/10 ರಷ್ಟು ಭಾಗದಷ್ಟು ಸದಸ್ಯರು ಅಧಿವೇಶನದಲ್ಲಿ ಉಪಸ್ಥಿತರಿರಬೇಕು. ಹಾಗಾದರೆ ಕರ್ನಾಟಕದಲ್ಲಿ ವಿಧಾನಸಭಾ ಅಧಿವೇಶನ ನಡೆಸಲು ಅಗತ್ಯವಾದ ಕೋರಂಗೆ ಎಷ್ಟು ಸದಸ್ಯರು ಉಪಸ್ಥಿತರಿರಬೇಕು?

ಎ) 28 ಬಿ) 29 ಸಿ) 32 ಡಿ) 22

ಉತ್ತರ:-ಡಿ

6) ವಿಧಾನಸಭೆಯ ಉಪಸಭಾಧ್ಯಕ್ಷ(ಡೆಪ್ಯೂಟಿ ಸ್ಪೀಕರ್) ತಮ್ಮ ರಾಜೀನಾಮೆ ಪತ್ರವನ್ನು ಸಭಾಧ್ಯಕ್ಷರಿಗೆ (ಸ್ಪೀಕರ್‌ಗೆ) ಸಲ್ಲಿಸುತ್ತಾರೆ. ಒಂದು ವೇಳೆ ಸಭಾಧ್ಯಕ್ಷರೇ ರಾಜೀನಾಮೆ ನೀಡಬೇಕಾದ ಸಂದರ್ಭ ಒದಗಿ ಬಂದರೆ ತಮ್ಮ ರಾಜೀನಾಮೆ ಪತ್ರವನ್ನು ಯಾರಿಗೆ ಸಲ್ಲಿಸುತ್ತಾರೆ?

ಎ) ರಾಜ್ಯಪಾಲರು ಬಿ) ಮುಖ್ಯ ಮಂತ್ರಿಗಳು
ಸಿ) ಡೆಪ್ಯೂಟಿ ಸ್ಪೀಕರ್ ಡಿ) ಗೃಹ ಸಚಿವರು

ಉತ್ತರ:- ಸಿ

7) Adjournment Sinedie ಇದು ಏನನ್ನು ಸೂಚಿಸುತ್ತದೆ?

ಎ) ವಿಧಾನಸಭೆಯ ಅಧಿವೇಶನ ಮುಗಿಯಿತು
ಬಿ) ವಿಧಾನಸಭೆಯ ಅಧಿವೇಶನ ಆರಂಭ
ಸಿ) ವಿಧಾನಸಭೆಯ ಮುಕ್ತಾಯ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಎ

8) ವಿಧಾನಸಭೆಯ ಸಭಾಧ್ಯಕ್ಷರ ಮತ್ತು ಉಪಸಭಾಧ್ಯಕ್ಷರ ಹಾಗೂ ವಿಧಾನಪರಿಷತ್‌ನ ಸಭಾಪತಿ ಮತ್ತು ಉಪಸಭಾಪತಿಯ ವೇತನವನ್ನು ಶಾಸನ ಸಭೆಯ ಸದಸ್ಯರು ನಿಶ್ಚಯ ಮಾಡುತ್ತಾರೆ. ಆ ವೇತನವನ್ನು ರಾಜ್ಯದ .... ನಿಂದ ನೀಡಲಾಗುತ್ತದೆ.

ಎ) ಕನ್ಸಾಲಿಡೇಟೆಡ್ ಫಂಡ್(Consolidated Fund)
ಬಿ) ಕಂಟೆಂಜೆನ್ಸಿ ಫಂಡ್
ಸಿ) ರಾಜ್ಯದ ಖಜಾನೆ(ಟ್ರೆಷರಿ) ಬಿಲ್ಲುಗಳು
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಎ

9) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ರಾಜ್ಯ ವಿಧಾನಸಭೆಯು ಸಂವಿಧಾನದ ರಾಜ್ಯಪಟ್ಟಿಯಲ್ಲಿರುವ 61 ಹಾಗೂ ಸಮವರ್ತಿ ಪಟ್ಟಿಯಲ್ಲಿರುವವರ 52 ವಿಷಯಗಳ ಮೇಲೆ ಶಾಸನ ರೂಪಿಸುವ ಅಧಿಕಾರವನ್ನು ಪಡೆದಿರುತ್ತದೆ.

2) ಸಂವಿಧಾನದ 250ನೇ ವಿಧಿಯ ಪ್ರಕಾರ ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ ರಾಜ್ಯ ಪಟ್ಟಿಯಲ್ಲಿರುವ ವಿಷಯದ ಮೇಲೆ ಕಾನೂನು ರೂಪಿಸುತ್ತದೆ.

3) ರಾಜ್ಯ ಶಾಸಕಾಂಗದಲ್ಲಿ ಅಂಗೀಕಾರಗೊಂಡ(ಪಾಸಾದ) ಮಸೂದೆಯು ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದಾಗ, ರಾಜ್ಯಪಾಲರಿಗೆ ಆ ಮಸೂದೆಯಿಂದ ಕೇಂದ್ರ ಹಾಗೂ ರಾಜ್ಯಗಳ ನಡುವೆ ವಿವಾದ ಉಂಟಾಗುತ್ತದೆ ಎಂದೆನಿಸಿದರೆ ಅಥವಾ ನ್ಯಾಯಾಂಗ/ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದೆನಿಸಿದರೆ ಅಂತಹ ಮಸೂದೆಗೆ ಒಪ್ಪಿಗೆ ನೀಡುವುದನ್ನು ರಾಷ್ಟಪತಿಯವರು ಕಾಯ್ದಿರಿಸುತ್ತಾರೆ.

4) ಶಾಸನ ರೂಪಿಸಲು ಇರುವ ಮಸೂದೆಯನ್ನು (ಬಿಲ್) ವಿಧಾನಸಭೆ ಅಂಗೀಕಾರ ಮಾಡಿ (ಪಾಸ್ ಮಾಡಿ) ವಿಧಾನ ಪರಿಷತ್‌ಗೆ ಕಳುಹಿಸಿದಾಗ ಅದೂ ಒಪ್ಪಿ ಅಂಗೀಕರಿಸಬೇಕು (ಪಾಸ್ ಮಾಡಬೇಕು). ಒಂದು ವೇಳೆ ತಿರಸ್ಕರಿಸಿದರೆ(ರಿಜೆಕ್ಟ್ ಮಾಡಿದರೆ) ಮತ್ತೆ ವಿಧಾನಸಭೆ ಅಂಗೀಕರಿಸಿ ವಿಧಾನಪರಿಷತ್‌ಗೆ ಕಳುಹಿಸಿದಾಗ ಅಲ್ಲೂ ಅಂಗೀಕಾರವಾಗಲೇಬೇಕು. ಈ ಮಸೂದೆಯನ್ನು ಒಂದು ತಿಂಗಳ ಒಳಗೆ ಅಂಗೀಕರಿಸದಿದ್ದರೆ 'ವಿಧಾನಪರಿಷತ್ತು ಅಂಗೀಕರಿಸಿದೆ' ಎಂದೇ ಭಾವಿಸಿ ರಾಜ್ಯಪಾಲರ ಸಹಿಗೆ ಕಳುಹಿಸಲಾಗುವುದು.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ) ಹೇಳಿಕೆ 1, 2 ಮತ್ತು 3 ಮಾತ್ರ ಸರಿಯಾಗಿವೆ
ಬಿ) ಹೇಳಿಕೆ 3 ಮತ್ತು 4 ಮಾತ್ರ ಸರಿಯಾಗಿವೆ
ಸಿ) ಹೇಳಿಕೆ 1 ರಿಂದ 4ರವರೆಗೆ ಎಲ್ಲವೂ ಸರಿಯಾಗಿವೆ
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

ಉತ್ತರ:- ಸಿ

10) ಕೆಳಮನೆಯಾದ ವಿಧಾನಸಭೆಯಲ್ಲಿ ಯಾವಾಗಲೂ ಮೊದಲು ಹಣಕಾಸಿನ ಮಸೂದೆ ಮಂಡಿಸಬೇಕು. ವಿಧಾನಸಭೆಯಲ್ಲಿ ಒಪ್ಪಿಗೆ ಪಡೆದ ಹಣಕಾಸಿನ ಮಸೂದೆಯನ್ನು ನಂತರ ವಿಧಾನಪರಿಷತ್ತಿಗೆ ಕಳುಹಿಸಲಾಗುತ್ತದೆ. ವಿಧಾನ ಪರಿಷತ್ ಆ ಮಸೂದೆಗೆ .... ದಿನಗಳ ಒಳಗಾಗಿ ಯಾವುದೇ ತರಹದ ತಿದ್ದುಪಡಿಯನ್ನು ಸೂಚಿಸದೇ ಒಪ್ಪಿಗೆಯನ್ನು ನೀಡಬೇಕು. ಅಷ್ಟು ದಿನಗಳೊಳಗೆ ಒಪ್ಪಿಗೆ ನೀಡದಿದ್ದರೆ, 'ಹಣಕಾಸಿನ ಮಸೂದೆಗೆ ಒಪ್ಪಿಗೆ ನೀಡಿದೆ' ಎಂದೇ ಭಾವಿಸಿ ರಾಜ್ಯಪಾಲರ ಸಹಿಗಾಗಿ ಕಳುಹಿಸಲಾಗುತ್ತದೆ.

ಎ) 15 ಬಿ) 14 ಸಿ) 21 ಡಿ) 30

ಉತ್ತರ:- ಬಿ

11) ರಾಜ್ಯಪಾಲರು ಮಸೂದೆಯೊಂದನ್ನು ರಾಷ್ಟಪತಿಯವರ ಒಪ್ಪಿಗೆಗೆ ಕಳುಹಿಸಲು ಕಾಯ್ದಿರಿಸಬಹುದು. ರಾಷ್ಟ್ರಪತಿಯವರು ಆ ಮಸೂದೆಗೆ ತಿದ್ದುಪಡಿಗಾಗಿ ಸೂಚಿಸಿ ಪುನರ್ ಪರಿಶೀಲನೆಗೆ ಕಳುಹಿಸಬಹುದು. ಈ ರೀತಿ ಕಳುಹಿಸಿದ ಮಸೂದೆಗೆ ರಾಜ್ಯ ಶಾಸಕಾಂಗ .... ಒಳಗಾಗಿ ರಾಷ್ಟ್ರಪತಿಯವರು ಸೂಚಿಸಿದ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿ ಇಲ್ಲದೆಯೇ ಸದನದಲ್ಲಿ ಮಂಡಿಸಿ, ಅದರ ಒಪ್ಪಿಗೆ ಪಡೆದು ಕಳುಹಿಸಬಹುದು. (ಆದರೆ ಸಂವಿಧಾನದಲ್ಲಿ ಈ ಮಸೂದೆಗೆ ರಾಷ್ಟಪತಿಯವರು ಒಪ್ಪಿಗೆ ನೀಡಬೇಕೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಏನನ್ನು ಹೇಳಿಲ್ಲ)

ಎ) 10 ತಿಂಗಳ ಬಿ) 6 ತಿಂಗಳ
ಸಿ) 9 ತಿಂಗಳ ಡಿ) 3 ತಿಂಗಳ

ಉತ್ತರ:- ಬಿ

12) ರಾಜ್ಯ ಶಾಸಕಾಂಗವು ಅಧಿವೇಶನ ನಡೆಯದ ಸಂದರ್ಭದಲ್ಲಿ ಅಗತ್ಯವಿದ್ದಾಗ ರಾಜ್ಯಪಾಲರು ಸುಗ್ರೀವಾಜ್ಞೆಯನ್ನು ಹೊರಡಿಸುತ್ತಾರೆ. ಈ ಸುಗ್ರೀವಾಜ್ಞೆಯು ಕಾನೂನಿನಷ್ಟೇ ಪ್ರಬಲವಾಗಿರುತ್ತದೆ. ಈ ಸುಗ್ರೀವಾಜ್ಞೆಗೆ ಸದನಗಳು ಸಭೆ ಸೇರಿದ 6 ವಾರಗಳ ಒಳಗಾಗಿ ಒಪ್ಪಿಗೆಯನ್ನು ಪಡೆಯಬೇಕು. ಇಲ್ಲವಾದರೆ ಅದು ಅನೂರ್ಜಿತವಾಗುತ್ತದೆ. ಹಾಗಾದರೆ ಸಂವಿಧಾನದ ಯಾವ ವಿಧಿಯ(ಆರ್ಟಿಕಲ್) ಪ್ರಕಾರ ಸುಗ್ರೀವಾಜ್ಞೆಯನ್ನು ಹೊರಡಿಸಲು ಅವಕಾಶಗಳಿವೆ?

ಎ) 113ನೇ ವಿಧಿ ಬಿ) 313ನೇ ವಿಧಿ
ಸಿ) 223ನೇ ವಿಧಿ ಡಿ) 213ನೇ ವಿಧಿ

ಉತ್ತರ:- ಡಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿಗಾಗಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಪರೀಕ್ಷೆ ಸಿದ್ಧತೆ ಕುರಿತು ಮಾಹಿತಿ ಇಲ್ಲಿದೆ

ವಿಮರ್ಶಾತ್ಮಕ ಚಿಂತನೆ ಯಶಸ್ಸಿನ ಜೀವಾಳ

ಆರ್.ಬಿ.ಗುರುಬಸವರಾಜ

ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ಹಲವರಿಗೆ ಪ್ರಾಧ್ಯಾಪಕರಾಗುವ ಕನಸಿರುತ್ತದೆ. ಆಧುನಿಕ ಕಾಲೇಜು ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಧ್ಯಾಪಕರ ಹುದ್ದೆ ಪಡೆಯುವುದು ಒಂದು ರೀತಿಯ ತಪಸ್ಸು. ಏಕೆಂದರೆ ಆ ಹುದ್ದೆ ಪಡೆಯುವ ಪ್ರತಿ ಹಂತದಲ್ಲೂ ಜಿದ್ದಾಜಿದ್ದಿನ ಸ್ಪರ್ಧೆ ಇರುತ್ತದೆ.

ಈಗ ಸರ್ಕಾರ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿದೆ. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ. ಪರೀಕ್ಷಾ ದಿನಾಂಕ ಪ್ರಕಟಣೆ ಬಾಕಿ ಇದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಪರೀಕ್ಷೆಯ ಅಂತಿಮ ಹಂತದ ಸಿದ್ಧತೆಯಲ್ಲಿದ್ದಾರೆ.

ಕಡ್ಡಾಯ ಭಾಷಾ ಪತ್ರಿಕೆ

ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎ ಮತ್ತು ಬಿ ಎಂಬ ಎರಡು ವಿಭಾಗಗಳಿವೆ. 'ಎ' ವಿಭಾಗದಲ್ಲಿ ಅಭ್ಯರ್ಥಿಯ ಭಾಷಾಜ್ಞಾನವನ್ನು ಅಳೆಯಲಾಗುತ್ತದೆ. ಈ ವಿಭಾಗದಲ್ಲಿ ಸಾಮಾನ್ಯ ಕನ್ನಡ ಮತ್ತು ಸಾಮಾನ್ಯ ಇಂಗ್ಲಿಷ್ ವಿಷಯಗಳ ಪತ್ರಿಕೆಗಳಿರುತ್ತವೆ. ಪ್ರತಿ ಪತ್ರಿಕೆಯು 100 ಅಂಕಗಳದ್ದಾಗಿದ್ದು, ವಿವರಣಾತ್ಮಕ ಪ್ರಶ್ನೆಗಳಿರುತ್ತವೆ. ಇಲ್ಲಿ ಹತ್ತನೇ ತರಗತಿವರೆಗಿನ ಭಾಷಾ ಜ್ಞಾನವನ್ನು ಪರೀಕ್ಷೆ ಮಾಡಲಾಗುತ್ತದೆ. ವ್ಯಾಕರಣ, ಭಾಷಾಜ್ಞಾನ, ಶಬ್ದ ಬಳಕೆ, ಪದಗಳ ಅರ್ಥ, ವಿರುದ್ಧ ಪದಗಳು, ಸಂಧಿ ಪ್ರಕರಣಗಳು, ವಾಕ್ಯಗಳ ಬಳಕೆ, ಭಾಷೆಯ ವಿವಿಧ ಅನ್ವಯಿಕೆಗಳು ಹೀಗೆ ಭಾಷೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಧ್ಯಯನ ಮಾಡಿದರೆ ಒಳಿತು. ಇವೆರಡೂ ಕಡ್ಡಾಯ ಪತ್ರಿಕೆಗಳಾಗಿದ್ದು, ಅಭ್ಯರ್ಥಿಗಳು ತಲಾ 30 ಅಂಕಗಳನ್ನು ಪಡೆಯಲೇಬೇಕು.

ವಿಷಯಾಧಾರಿತ ಪತ್ರಿಕೆ

'ಬಿ' ವಿಭಾಗದಲ್ಲಿಯೂ ಎರಡು ಪತ್ರಿಕೆಗಳಿರುತ್ತವೆ. ಇದರಲ್ಲಿ ಒಂದು ಪತ್ರಿಕೆ ಸಾಮಾನ್ಯಜ್ಞಾನಕ್ಕೆಸಂಬಂಧಿಸಿರುತ್ತದೆ. ಇನ್ನೊಂದು ಪತ್ರಿಕೆ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿರುತ್ತದೆ. ಸಾಮಾನ್ಯ ಜ್ಞಾನ ಪತ್ರಿಕೆಯು 50 ಅಂಕಗಳಿಗೆ ನಿಗದಿಯಾಗಿರುತ್ತದೆ. ಆದರೆ ಇಲ್ಲಿನ ಪ್ರಶ್ನೆಗಳು ಸಂಪೂರ್ಣವಾಗಿ ವೈವಿಧ್ಯಯಮವಾಗಿರುತ್ತವೆ. ಇತಿಹಾಸ, ರಾಜಕೀಯ, ಅರ್ಥಶಾಸ್ತ್ರ, ಭೂಗೋಳ, ಸಾಮಾನ್ಯ ವಿಜ್ಞಾನ ಮತ್ತು ಪ್ರಚಲಿತ ವಿಷಯಗಳನ್ನು ಒಳಗೊಂಡಿರುತ್ತವೆ. ಈ ಪತ್ರಿಕೆಯನ್ನು ಸಮರ್ಥವಾಗಿ ಎದುರಿಸಲು ತಕ್ಷಣದ ಸಿದ್ಧತೆ ಸಾಕಾಗದಿರಬಹುದು. ಇದಕ್ಕೆ ಕನಿಷ್ಠ ನಾಲ್ಕಾರು ತಿಂಗಳ ಅಭ್ಯಾಸ ಅಗತ್ಯ. ಕನಿಷ್ಠ ಆರು ತಿಂಗಳಿಂದೀಚೆಗಿನ ಪ್ರಚಲಿತ ವಿದ್ಯಮಾನಗಳ ಕುರಿತ ಪ್ರಶ್ನೆಗಳಿರುತ್ತವೆ. ಇತಿಹಾಸ, ರಾಜಕೀಯ, ಅರ್ಥಶಾಸ್ತ್ರ, ಭೂಗೋಳ, ಸಾಮಾನ್ಯ ವಿಜ್ಞಾನ ವಿಷಯಗಳ ಮೂಲ ಪರಿಕಲ್ಪನೆಯನ್ನಾಧರಿಸಿ ಪ್ರಶ್ನೆಗಳಿರುತ್ತವೆ. ಇದಕ್ಕಾಗಿ ನಾಲ್ಕರಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳನ್ನು ಅಭ್ಯಸಿಸಿದರೆ ಉತ್ತಮ.

ಐಚ್ಛಿಕ ವಿಷಯದ ಪತ್ರಿಕೆ

ಐಚ್ಛಿಕ ವಿಷಯ ಪತ್ರಿಕೆಯು 250 ಅಂಕಗಳಿಗೆ ನಿಗದಿಯಾಗಿದೆ. ಇಲ್ಲಿ ಪ್ರತಿ ವಿಷಯದ ಆಳವಾದ ಜ್ಞಾನ ಹಾಗೂ ಪ್ರಸ್ತುತತೆಯನ್ನು ಪರೀಕ್ಷಿಸಲಾಗುತ್ತದೆ. ಅದಕ್ಕಾಗಿ ಅಭ್ಯರ್ಥಿಗಳು ವಿಷಯವನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬೇಕು. ಪರೀಕ್ಷೆಗೆ ನಿಗದಿಪಡಿಸಿದ ಪಠ್ಯಕ್ರಮಕ್ಕನುಗುಣವಾಗಿ ಅಧ್ಯಯನ ನಡೆಸಬೇಕು. ಅಧ್ಯಯನದ ವೇಳೆ ಪ್ರಮುಖ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡರೆ ನೆನಪಿನಲ್ಲಿಡಲು ಸುಲಭವಾಗುತ್ತದೆ.

ವಿಷಯಾಧಾರಿತ ಪತ್ರಿಕೆಗಾಗಿ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಠ್ಯಗಳನ್ನು ಅಭ್ಯಾಸ ಮಾಡಬೇಕು. ಅಂತೆಯೇ ವಿವಿಧ ಲೇಖಕರ ವಿಮರ್ಶಾತ್ಮಕ ಪುಸ್ತಕಗಳನ್ನು ಓದಬೇಕು. ವಿಷಯವನ್ನು ಮೂಲದಿಂದ ಇಲ್ಲಿನವರೆಗಿನ ಎಲ್ಲಾ ಮಾಹಿತಿಯನ್ನು ಆಳವಾಗಿ ಅಧ್ಯಯನ ಮಾಡಬೇಕು.

ವಿಷಯಾಧಾರಿತ ಪತ್ರಿಕೆಯು ಬಹುಆಯ್ಕೆ ಮಾದರಿಯಲ್ಲಿರುತ್ತದೆ. ಬಹುಆಯ್ಕೆಗಳು ಒಂದಕ್ಕೊಂದು ಸಾಮ್ಯತೆ ಹೊಂದಿದ್ದು ಅಭ್ಯರ್ಥಿಗಳನ್ನು ಗಲಿಬಿಲಿಗೊಳಿಸುವುದು ಸಹಜ. ಅದಕ್ಕಾಗಿ ವಿಷಯದ ಆಳವಾದ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳನ್ನು ಸರಿಯಾಗಿ ಅರಿತಿರಬೇಕು. ಸಾಮಾನ್ಯಜ್ಞಾನ ಹಾಗೂ ವಿಷಯ ಪತ್ರಿಕೆಗಳಲ್ಲಿ ತಪ್ಪು ಉತ್ತರಗಳಿಗೆ ಅಂಕ ಕಡಿತ ಇರುತ್ತದೆ. ಹಾಗಾಗಿ ಖಚಿತ ಉತ್ತರಗಳನ್ನು ಮಾತ್ರ ಜಾಣತನದಿಂದ ಆಯ್ಕೆ ಮಾಡಬೇಕು.

ಸಮಯದ ಹೊಂದಾಣಿಕೆ

ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿರುವುದರಿಂದ ಸ್ಪರ್ಧೆಯೂ ತೀವ್ರವಾಗಿರುತ್ತದೆ. ಅಭ್ಯರ್ಥಿಗಳು ಆ ಸ್ಪರ್ಧೆಯನ್ನು ಎದುರಿಸಲು ಕಠಿಣ ಅಧ್ಯಯನ ಅಗತ್ಯ. ದಿನವೊಂದಕ್ಕೆ ಕನಿಷ್ಠ 8-10 ಗಂಟೆಗಳಷ್ಟು ಅಧ್ಯಯನ ಮಾಡಬೇಕು. ಇದರಲ್ಲಿ ಒಂದು ಗಂಟೆಯನ್ನು ಕಡ್ಡಾಯವಾಗಿ ಭಾಷಾ ಪತ್ರಿಕೆ ಅಧ್ಯಯನಕ್ಕೆ ಹಾಗೂ ಒಂದು ಗಂಟೆಯನ್ನು ಸಾಮಾನ್ಯಜ್ಞಾನ ಪತ್ರಿಕೆ ಅಧ್ಯಯನಕ್ಕೆ ಹಾಗೂ ಉಳಿದ ಸಮಯವನ್ನು ಐಚ್ಛಿಕ ಪತ್ರಿಕೆ ಅಧ್ಯಯನಕ್ಕೆ ಮೀಸಲಿಡಬೇಕು. ಐಚ್ಛಿಕ ವಿಷಯದಲ್ಲಿನ ಹೆಚ್ಚಿನ ಸಾಧನೆಯು ಯಶಸ್ಸು ತಂದುಕೊಡುತ್ತದೆ.

ಅಧ್ಯಯನದ ವೇಳೆ ಪರಿಕಲ್ಪನೆಯನ್ನು ವಿವಿಧ ಆಯಾಮಗಳಿಂದ ವಿಮರ್ಶಾತ್ಮಕ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳಬೇಕು. ಯಾಂತ್ರಿಕ ಓದು ಇಲ್ಲಿ ಫಲ ನೀಡದು. ಫ್ಲೋಚಾರ್ಟ್ ಹಾಗೂ ಮೈಂಡ್‌ಮ್ಯಾಪ್ ತಂತ್ರಗಳ ಮೂಲಕ ವಿಷಯವನ್ನು ಟಿಪ್ಪಣಿ ಮಾಡಿಕೊಂಡರೆ ಹೆಚ್ಚು ಅನುಕೂಲ. ಸತತ ಪರಿಶ್ರಮ ಎಂದಿಗೂ ಯಶಸ್ಸಿಗೆ ಪೂರಕವಾಗಿರುತ್ತದೆ ಎಂಬುದು ನೆನಪಿನಲ್ಲಿಡಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ಐಐಎಸ್‌ಸಿಯಲ್ಲಿ ಹುದ್ದೆಗಳು

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಎಲೆಕ್ಟ್ರಾನಿಕ್ ಸಂಪನ್ಮೂಲ ನಿರ್ವಹಣೆ, ಪ್ರಾಜೆಕ್ಟ್ ಟ್ರೈನಿ, ಲೈಬ್ರರಿ ಇನ್ಫರ್ಮೇಷನ್ ಮ್ಯಾನೇಜ್‌ಮೆಂಟ್ ಟ್ರೈನಿ
- ಹುದ್ದೆಗಳ ಸಂಖ್ಯೆ: 14
- ಸ್ಥಳ: ಬೆಂಗಳೂರು
- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಬಿಇ, ಬಿಟೆಕ್, ಪದವಿ, ಸ್ನಾತಕೋತ್ತರ ಪದವಿ ಪಡೆದಿರಬೇಕು.
- ವಯೋಮಿತಿ: ಗರಿಷ್ಠ 30 ವರ್ಷ.
- ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆ, ದಾಖಲಾತಿ ಪರಿಶೀಲನೆ ಹಾಗೂ ವೈಯಕ್ತಿಕ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 14, 2021
- ಹೆಚ್ಚಿನ ಮಾಹಿತಿಗೆ: https://iisc.ac.in/opportunities/

ಕರೂರ್ ವೈಶ್ಯ ಬ್ಯಾಂಕ್‌ನಲ್ಲಿ ಹುದ್ದೆಗಳು

ಕರೂರ್ ವೈಶ್ಯ ಬ್ಯಾಂಕ್ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮ್ಯಾನತೆ ಪಡೆದ ವಿಶ್ವವಿದ್ಯಾಲಯದಿಂದ ಶೇ 50 ಅಂಕಗಳೊಂದಿಗೆ ಪದವಿ ಮುಗಿಸಿರಬೇಕು.
- ವಯೋಮಿತಿ: ಅಭ್ಯರ್ಥಿಗಳಿಗೆ ನವೆಂಬರ್ 30ಕ್ಕೆ ಅನ್ವಯವಾಗುವಂತೆ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 28 ಆಗಿರಬೇಕು. ನೇಮಕಾತಿ ನಿಯಮಗಳ ಅನ್ವಯ ವಯೋಮಿತಿ ಸಡಿಲಿಕೆ ಇದೆ.
- ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 31, 2021
- ಹೆಚ್ಚಿನ ಮಾಹಿತಿಗೆ: https://www.kvb.co.in/

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹುದ್ದೆಗಳು

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ 2021-22 ಸಾಲಿನ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳ ಸಂಖ್ಯೆ: 115
- ಸ್ಥಳ: ಭಾರತದೆಲ್ಲೆಡೆ
- ವಿದ್ಯಾರ್ಹತೆ: ಪದವಿ, ಸ್ನಾತಕೋತ್ತರ ಪದವಿ, ಎಂಬಿಎ, ಬಿಟೆಕ್, ಎಂಎಸ್‌ಸಿ, ಸಿಎ ಹಾಗೂ ಇತ್ಯಾದಿ.
- ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗೆ ಕನಿಷ್ಠ 20 ವರ್ಷ ಹಾಗೂ ಗರಿಷ್ಠ 45 ವರ್ಷಗಳಾಗಿರಬೇಕು.
- ನೇಮಕಾತಿ ಪ್ರಕ್ರಿಯೆ: ಆನ್‌ಲೈನ್ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ.
- ಅರ್ಜಿ ಶುಲ್ಕ: ₹ 850, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ₹ 175
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 17, 2021
- ಹೆಚ್ಚಿನ ಮಾಹಿತಿಗೆ: https://www.centralbankofindia.co.in/en/recruitments

ಎಐಐಎಂಎಸ್‌ನಲ್ಲಿ ಹುದ್ದೆಗಳು

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಮಂಗಳಗಿರಿಯಲ್ಲಿರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಎಐಐಎಂಎಸ್), ತನ್ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸ್ತಕರು ನೇರ ನೇಮಕಾತಿಯಲ್ಲಿ ಪಾಲ್ಗೊಳ್ಳಬಹುದು.

- ಹುದ್ದೆ: ಜ್ಯೂನಿಯರ್ ರೆಸಿಡೆಂಟ್
- ಹುದ್ದೆಗಳ ಸಂಖ್ಯೆ: 24
- ಸ್ಥಳ: ಆಂಧ್ರಪ್ರದೇಶದ ಗುಂಟೂರು
- ವಿದ್ಯಾರ್ಹತೆ: ಈ ಹುದ್ದೆಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂಬಿಬಿಎಸ್ ಪದವಿ ಪಡೆದ ಅಭ್ಯರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು.
- ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗೆ ಗರಿಷ್ಠ 33 ವರ್ಷ ಮೀರಿರಬಾರದು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇದೆ.
- ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹ 1000, ಎಸ್‌ಸಿ, ಎಸ್‌ಸಿ ಅಭ್ಯರ್ಥಿಗಳಿಗೆ ₹ 500 ಹಾಗೂ ಅಂಗವಿಕಲರಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.
- ಆಯ್ಕೆ ಪ್ರಕ್ರಿಯೆ: ದಾಖಲಾತಿ ಪರಿಶೀಲನೆ ಹಾಗೂ ವೈಯಕ್ತಿಕ ಸಂದರ್ಶನ
ಸಂದರ್ಶನ ದಿನಾಂಕ: ಜನವರಿ 5, 2022
- ಸಂದರ್ಶನ ನಡೆಯುವ ಸ್ಥಳ: ಧರ್ಮಶಾಲಾ ಕಟ್ಟಡ, ಏಮ್ಸ್ ಮಂಗಳಗಿರಿ ಮೇನ್ ಕ್ಯಾಂಪಸ್.
ಹೆಚ್ಚಿನ ಮಾಹಿತಿಗೆ: https://www.aiimsexams.ac.in/info/Recruitments_new.html



ಸುಭಾಷಿತ

'ನನಗೆ ಸಾಧ್ಯವಿಲ್ಲ' ಎಂದು ಎಂದಿಗೂ ಹೇಳಬೇಡಿ. ನಿಮ್ಮೊಳಗೆ ಅನಂತವಾದ ಶಕ್ತಿ ಇದೆ. ನೀವು ಏನು ಬೇಕಾದರೂ ಮಾಡಬಹುದು.

-ಸ್ವಾಮಿ ವಿವೇಕಾನಂದ

ಶಾಲಾ ಮಕ್ಕಳಿಗೆ ಮೊಟ್ಟೆ ಸರ್ಕಾರ ಗಟ್ಟಿ ನಿಲುವು ತಾಳಲಿ

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ನೀಡುವುದಕ್ಕೆ ಕೆಲವು ಮಠಾಧೀಶರು ಹಾಗೂ ಜಾತಿ ಸಂಘಟನೆಗಳ ಮುಖಂಡರು ವಿರೋಧ ವ್ಯಕ್ತಪಡಿಸಿರುವುದು ದುರದೃಷ್ಟಕರ. ಮೊಟ್ಟೆ ನೀಡುವ ಮೂಲಕ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಆಹಾರದ ವಿಷಯದಲ್ಲಿ ಭೇದಭಾವ ಮಾಡಿದಂತಾಗುತ್ತದೆ, ಸಂಸ್ಕೃತಿಗೆ ಅಪಚಾರವಾಗುತ್ತದೆ ಹಾಗೂ ಧಾರ್ಮಿಕ ಸಾಮರಸ್ಯಕ್ಕೆ ಅಡಚಣೆ ಉಂಟಾಗುತ್ತದೆ ಎನ್ನುವ ವಾದಗಳು ಹುರುಳಿಲ್ಲದವು. ಮೊಟ್ಟೆಯನ್ನು ತಿನ್ನುವುದು ಅಥವಾ ತಿನ್ನದಿರುವುದು ಮಕ್ಕಳ ಆಯ್ಕೆಗೆ ಬಿಟ್ಟಿರುವುದರಿಂದ, ಸಸ್ಯಾಹಾರಿ ಮಕ್ಕಳ ಭಾವನೆಗಳಿಗೆ ಧಕ್ಕೆಯುಂಟಾಗುತ್ತದೆ ಎನ್ನುವ ವಾದದಲ್ಲಿ ಹುರುಳಿಲ್ಲ. ಮಕ್ಕಳಿಗೆ ಹಾಲು, ಬಿಸಿಯೂಟ ಹಾಗೂ ಹಣ್ಣುಗಳನ್ನು ನೀಡಬಹುದೆನ್ನುವ ಸಲಹೆ ಸ್ವಾಗತಾರ್ಹ. ಇದರೊಟ್ಟಿಗೆ ಮೊಟ್ಟೆಯನ್ನು ನೀಡುವುದರಿಂದ ಮಕ್ಕಳಿಗೆ ಆಯ್ಕೆಯ ಸ್ವಾತಂತ್ರ್ಯ ಒದಗಿಸಿದಂತಾಗುತ್ತದೆ. ವೈವಿಧ್ಯದಲ್ಲಿ ಏಕತೆಯನ್ನು ಕಾಣುವ ಭಾರತದಂತಹ ದೇಶಗಳ ಬಹುತ್ವದ ಚಹರೆಗಳಲ್ಲಿ ಆಹಾರ ವೈವಿಧ್ಯವೂ ಸೇರಿದೆ. ಆದರೆ, ಸೌಹಾರ್ದಕ್ಕೆ ಕಾರಣವಾಗಬೇಕಾದ ಆಹಾರವು ಧರ್ಮ ಮತ್ತು ರಾಜಕೀಯಕ್ಕೆ ಬಳಕೆಯಾಗುತ್ತಿರುವುದೇ ಹೆಚ್ಚು. ಆಹಾರದ ರಾಜಕಾರಣ ಶಾಲಾ ಮಕ್ಕಳಿಗೆ ಮೊಟ್ಟೆ ನೀಡುವ ವಿಷಯದಲ್ಲೂ ವ್ಯಕ್ತವಾಗುತ್ತಿದೆ. ರಾಜ್ಯದ ಶೇ 32ರಷ್ಟು ಮಕ್ಕಳು ಕಡಿಮೆ ತೂಕ ಹಾಗೂ ಕುಂಠಿತ ಬೆಳವಣಿಗೆ ಹೊಂದಿದ್ದು, ಶೇ 45.2ರಷ್ಟು ಮಕ್ಕಳು ಮತ್ತು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು 2020-21ರ 'ನೀತಿ ಆಯೋಗ'ದ ವರದಿ ಹೇಳಿದೆ. ಮಕ್ಕಳಲ್ಲಿನ ಅಪೌಷ್ಟಿಕತೆಗೆ ಮದ್ದಿನ ರೂಪದಲ್ಲಿ ಮೊಟ್ಟೆ ನೀಡುವ ಪ್ರಯೋಗಕ್ಕೆ ಮಹತ್ವವಿದೆ.



ಮಕ್ಕಳಲ್ಲಿನ ಅಪೌಷ್ಟಿಕತೆಗೆ ಮದ್ದಿನ ರೂಪದಲ್ಲಿ ಮೊಟ್ಟೆ ನೀಡುವ ಪ್ರಯೋಗಕ್ಕೆ ಮಹತ್ವವಿದೆ

ಮಕ್ಕಳಿಗೆ ಮೊಟ್ಟೆ ನೀಡುವ ವಿಷಯದಲ್ಲಿ ಮಠಾಧೀಶರ ಹಸ್ತಕ್ಷೇಪ ಸಲ್ಲದು. ಮೊಟ್ಟೆಗೆ ವ್ಯಕ್ತವಾಗುತ್ತಿರುವ ವಿರೋಧ ಆರೋಗ್ಯಕ್ಕೆ ಸಂಬಂಧಿಸಿದ್ದಾದರೆ, ಆ ಬಗ್ಗೆ ವೈದ್ಯರು ಹಾಗೂ ಪೌಷ್ಟಿಕಾಂಶ ತಜ್ಞರು ಮಾತನಾಡಬೇಕೇ ವಿನಾ ಧರ್ಮಗುರುಗಳಲ್ಲ. ಮೊಟ್ಟೆಯ ವಿಷಯದಲ್ಲಿ ವ್ಯಕ್ತವಾಗುತ್ತಿರುವ ವಿರೋಧವು ಸಮಾಜದ ಕೆಲವು ವರ್ಗಗಳಲ್ಲಿನ ಆಹಾರ ಶ್ರೇಷ್ಠತೆಯ ಮನೋಭಾವದ ವ್ಯಕ್ತರೂಪದಂತಿದೆ. ಯಾವ ಆಹಾರವೂ ಮೇಲಲ್ಲ, ಯಾವುದೂ ಕೀಳಲ್ಲ ಎನ್ನುವುದು ಸಾಮಾನ್ಯಜ್ಞಾನ. ಧರ್ಮದ ಹೆಸರಿನಲ್ಲಿ ಮೊಟ್ಟೆ ವಿತರಣೆಗೆ ವಿರೋಧ ವ್ಯಕ್ತಪಡಿಸುವುದರಿಂದ ಮಕ್ಕಳ ಆಹಾರದ ಹಕ್ಕನ್ನು ಕಸಿದುಕೊಂಡಂತೆ ಆಗುತ್ತದೆ. ಮಕ್ಕಳಿಗೆ ಮೊಟ್ಟೆಯನ್ನು ನೀಡುವ ಕ್ರಮ ಸಾಮಾಜಿಕ ವೈವಿಧ್ಯದ ಪ್ರಾತ್ಯಕ್ಷಿಕೆಯೂ ಹೌದು. ಆಹಾರ, ಅಭಿರುಚಿ, ಜೀವನಶೈಲಿ, ಸಾಮಾಜಿಕ ಸ್ವಭಾವಗಳಲ್ಲಿ ಭಿನ್ನತೆ ಹೊಂದಿದ್ದೂ ಭಾರತದ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಗುರುತಿಸಿಕೊಳ್ಳುವುದನ್ನು ಮಕ್ಕಳಿಗೆ ಮನದಟ್ಟು ಮಾಡಿಸಲು ಶಾಲೆಗಳಿಗಿಂತಲೂ ಮಿಗಿಲಾದ ಪ್ರಯೋಗಶಾಲೆ ಮತ್ತೊಂದಿಲ್ಲ. ಭಾರತೀಯ ಸಮಾಜದಲ್ಲಿ ಸಂಪೂರ್ಣ ಸಸ್ಯಾಹಾರಿಗಳು ಅಲ್ಪಸಂಖ್ಯಾತರು. ಬಹುಜನರೊಂದಿಗೆ ಅವರು ಆಹಾರದ ವೇದಿಕೆಯನ್ನು ಹಂಚಿಕೊಳ್ಳುವ ಮೂಲಕ ಮುಖ್ಯವಾಹಿನಿಯೊಂದಿಗೆ ಬೆರೆಯುವುದಕ್ಕೆ ಶಾಲೆಗಳಲ್ಲಿ ಮೊಟ್ಟೆ ನೀಡುವ ಪ್ರಯೋಗ ಅವಕಾಶ ಕಲ್ಪಿಸುತ್ತದೆ. ವ್ಯಕ್ತಿಗತ, ಕೌಟುಂಬಿಕ ಹಾಗೂ ಸಾಮುದಾಯಿಕ ಆಚರಣೆಗಳಿಂದ ಹೊರಬಂದು ಸಮಾಜದ ವೈವಿಧ್ಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಶಾಲೆ ಅಂಗಳ ಅತ್ಯುತ್ತಮ ವೇದಿಕೆ. ಬಹುತ್ವದ ಕಲಿಕೆಯ ಸಾಧ್ಯತೆಯನ್ನು ಬದಿಗಿಟ್ಟು, ಒಂದೇ ಬಗೆಯ ಆಹಾರ ವಿಚಾರಗಳಿಗೆ ಶಾಲೆಗಳನ್ನು ಸೀಮಿತಗೊಳಿಸುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅಡಚಣೆ ಮಾಡಿದಂತಾಗುತ್ತದೆ. ಕಲಿಕೆಯ ವೇದಿಕೆಗಳನ್ನು ವ್ಯಕ್ತಿಗತ ಹಾಗೂ ಧಾರ್ಮಿಕ ಸಂಗತಿಗಳ ನೆಪದಲ್ಲಿ ಸಂಕುಚಿತಗೊಳಿಸುವುದು ಸಲ್ಲದು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳೊಂದಿಗೆ ವಿಜಯಪುರ ಜಿಲ್ಲೆಯ ಶಾಲಾ ಮಕ್ಕಳಿಗೆ ಡಿಸೆಂಬರ್ 1ರಿಂದ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ಮತ್ತು ಬಾಳೆಹಣ್ಣು ನೀಡಲಾಗುತ್ತಿದೆ. ಆಹಾರದಲ್ಲಿ ವೈವಿಧ್ಯ ಕಾಣಿಸಿಕೊಂಡ ನಂತರ ಶಾಲಾ ಮಕ್ಕಳ ಹಾಜರಾತಿ ಪ್ರಮಾಣ ಹೆಚ್ಚಾಗಿದೆ ಎಂದು ವರದಿಯಾಗಿದೆ. ಅಪೌಷ್ಟಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆ ಕಲ್ಯಾಣ ಕರ್ನಾಟಕದಲ್ಲಿ ಹೆಚ್ಚು. ಹಾಗಾಗಿ ಅಲ್ಲಿನ ಶಾಲಾ ಮಕ್ಕಳಿಗೆ ಮೊಟ್ಟೆ ಮತ್ತು ಬಾಳೆಹಣ್ಣು ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಲಬುರಗಿ ವಲಯದ ಹೆಚ್ಚುವರಿ ಆಯುಕ್ತರು ಸಲ್ಲಿಸಿದ ಪ್ರಸ್ತಾವದ ಮೇರೆಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿನ ಶಾಲಾ ಮಕ್ಕಳಿಗೆ ವಾರದಲ್ಲಿ ಮೂರು ದಿನ ಮೊಟ್ಟೆ-ಬಾಳೆಹಣ್ಣು ವಿತರಿಸಲಾಗುತ್ತಿದೆ. ಇದರ ಉಪಯೋಗವನ್ನು 1ರಿಂದ 8ನೇ ತರಗತಿಯ 14.44 ಲಕ್ಷ ಮಕ್ಕಳು ಪಡೆಯುತ್ತಿದ್ದು, ಕಲ್ಯಾಣ ಕರ್ನಾಟಕದ ಶೇ 80ರಷ್ಟು ವಿದ್ಯಾರ್ಥಿಗಳು ಮಧ್ಯಾಹ್ನದ ಊಟದಲ್ಲಿ ಮೊಟ್ಟೆ ಬೇಕೆಂದು ಅಭಿಪ್ರಾಯಪಟ್ಟಿದ್ದಾರೆ ಎಂದು ಸಮೀಕ್ಷೆಯೊಂದು ಹೇಳಿದೆ. ಈ ಯಶಸ್ಸು ರಾಜ್ಯದ ಎಲ್ಲ ಜಿಲ್ಲೆಗಳ ಶಾಲಾ ಮಕ್ಕಳಿಗೂ ಮೊಟ್ಟೆ ನೀಡುವ ಪ್ರಯೋಗ ಆದಷ್ಟು ಬೇಗ ವಿಸ್ತರಣೆಗೊಳ್ಳಲು ಪ್ರೇರಣೆಯಾಗಬೇಕು. ಮೂರು ದಿನದ ಬದಲು, ವಾರದ ಎಲ್ಲ ದಿನಗಳಲ್ಲೂ ಊಟದೊಂದಿಗೆ ಮೊಟ್ಟೆ-ಬಾಳೆಹಣ್ಣು ದೊರೆಯುವಂತಾಗಬೇಕು. ಮಕ್ಕಳ ಆಹಾರದ ವಿಷಯದಲ್ಲಿ ಚೌಕಾಸಿ ಸಲ್ಲದು. ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಗೆ ಮೊಟ್ಟೆ ಅಗತ್ಯ ಎನ್ನುವುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಿಕೊಳ್ಳಲಾಗಿದೆ ಹಾಗೂ ಮೊಟ್ಟೆಯನ್ನು 'ಪರಿಪೂರ್ಣ ಆಹಾರ' ಎಂದು ಗುರುತಿಸಲಾಗಿದೆ. ಹಾಗಾಗಿ ಮಕ್ಕಳಿಗೆ ಬಿಸಿಯೂಟದೊಂದಿಗೆ ಮೊಟ್ಟೆ ಮತ್ತು ಬಾಳೆಹಣ್ಣು ನೀಡುವ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬಾರದು.

ದಿನದ ಟ್ವೀಟ್

ಉನ್ನತ ಮಟ್ಟದ ತನಿಖೆಯಾಗಲಿ



ಹೆಲಿಕಾಪ್ಟರ್ ದುರಂತದಲ್ಲಿ ಜನರಲ್ ಬಿಪಿನ್ ರಾವತ್ ಮತ್ತು ಇತರ ಅಧಿಕಾರಿಗಳು ಸಾವಿಗೀಡಾಗಿರುವುದು ದೇಶಕ್ಕೆ ಆಗಿರುವ ದೊಡ್ಡ ನಷ್ಟ. ರಷ್ಯಾ ನಿರ್ಮಿತ ಎಂಐ-17ವಿ5, ಸೇನೆಯಲ್ಲಿರುವ ಅತ್ಯಾಧುನಿಕ ಹೆಲಿಕಾಪ್ಟರ್‌ಗಳಲ್ಲಿ ಒಂದಾಗಿದೆ. ಇದನ್ನು ಪ್ರಧಾನಿ ಸೇರಿದಂತೆ ಪ್ರತಿಷ್ಠಿತ ವ್ಯಕ್ತಿಗಳು ಬಳಸುತ್ತಾರೆ. ಉನ್ನತ ಮಟ್ಟದ ತನಿಖೆಯ ಅಗತ್ಯವಿದೆ.

ಅನ್ಶುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ



ಕುಟುಂಬ ರಾಜಕಾರಣ ಯಾರು ಮಾಡುತ್ತಾರೆ ಎಂಬುದು ಇಡೀ ರಾಜ್ಯ ಹಾಗೂ ದೇಶಕ್ಕೆ ಗೊತ್ತು. ಅದನ್ನು ನಾನು ಹೇಳುವ ಅಗತ್ಯ ಇಲ್ಲ. ವೈಯಕ್ತಿಕವಾಗಿ ನಾನು ಯಾರ ಮೇಲೂ ಟೀಕೆ ಮಾಡಲ್ಲ. ಜೆಡಿಎಸ್‌ನವರು ಜಾತ್ಯತೀತ ಎಂದು ಹೇಳುತ್ತಾರೆ. ಆದರೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಕುಟುಂಬ ರಾಜಕಾರಣ ಮಾಡುತ್ತಾರೆ. ಆ ಬಗ್ಗೆ ನಾನು ಮಾತನಾಡಿದರೆ, ಅವರ ಮೇಲೆ ದ್ವೇಷ ಸಾಧಿಸುತ್ತಿದ್ದೇನೆ ಎನ್ನುತ್ತಾರೆ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 9-12-1996

• ಜಯಾ ನಿವಾಸದಲ್ಲಿ ಮುಂದುವರೆದ ದಾಳಿ

ಚೆನ್ನೈ, ಡಿ. 8 (ಯುಎನ್‌ಐ, ಪಿಟಿಐ)– ರೂ 8.5 ಕೋಟಿ ರುಷುವತ್ತು ಪಡೆದ ಆರೋಪದ ಮೇಲೆ, ಬಣ್ಣದ ಟಿ.ವಿ ಹಗರಣ ಸಂಬಂಧ ನಿನ್ನೆ ಬಂಧಿಸಲಾದ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಮನೆ ಮೇಲೆ ನಿನ್ನೆ ಇಡೀ ರಾತ್ರಿ ನಡೆದ ದಾಳಿ ಇಂದೂ ಮುಂದುವರೆದಿದೆ.

ದಾಳಿಯಲ್ಲಿ ತಮಿಳುನಾಡು ಜಾಗೃತ ಮತ್ತು ಭ್ರಷ್ಟಾಚಾರ ವಿರೋಧ ದಳ ಹಾಗೂ ಸಿಐಡಿಯ ನಾಲ್ಕು ತಂಡಗಳು ಭಾಗವಹಿಸಿದ್ದು ಜಯಾ ಅಕ್ರಮವಾಗಿ ಸಂಪಾದಿಸಿದ್ದಾರೆ ಎಂದು ಹೇಳಲಾದ ಸಂಪತ್ತಿನ ಕುರಿತಾದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ನಿನ್ನೆ ರಾತ್ರಿ ಆಭರಣ ವ್ಯಾಪಾರಿಯೊಬ್ಬರನ್ನು ಕರೆತಂದು, ವಶಪಡಿಸಿಕೊಂಡ ಆಭರಣಗಳನ್ನು ತೂಕ ಮಾಡಲಾಯಿತು.

• ಆರು ಸಚಿವರ ರಾಜೀನಾಮೆ: ನೇಪಾಳ ಸರ್ಕಾರ ಬಿಕ್ಕಟ್ಟಿನಲ್ಲಿ

ಕಠ್ಮಂಡು, ಡಿ. 8 (ಪಿಟಿಐ)– ನೇಪಾಳದ ಮೂರು ಪಕ್ಷಗಳ ಸಮ್ಮಿಶ್ರ ಸರ್ಕಾರದ ಅಂಗಪಕ್ಷವೊಂದರ ಆರು ಮಂದಿ ಸಚಿವರು ರಾಜೀನಾಮೆ ನೀಡುವುದರೊಂದಿಗೆ ಪ್ರಧಾನಿ ಶೇರ್ ಬಹಾದುರ್ ದ್ಯೂಬಾ ಅವರ ಸರ್ಕಾರ ಇಂದು ಹೊಸ ಬಿಕ್ಕಟ್ಟಿಗೆ ಸಿಲುಕಿತು.

ವರ್ಷಗಳ ಹಿಂದೆ

ಗುರುವಾರ, 9-12-1971

• ಕೊಮಿಲ್ಲಾ, ಬ್ರಾಹ್ಮಣಬಾರಿಯಾ ವಿಮೋಚನೆ

ನವದೆಹಲಿ, ಡಿ. 8– ಬಾಂಗ್ಲಾದೇಶದಲ್ಲಿ ಶತ್ರು ವಿಮಾನ ಬಲದ ನಿರ್ನಾಮ, ಕೊಮಿಲ್ಲಾ, ಬ್ರಾಹ್ಮಣಬಾರಿಯಾಗಳ ವಿಮೋಚನೆ, ಢಾಕಾದತ್ತ ಮುನ್ನಡೆ ಇವಿಷ್ಟೂ ಇಂದು ಪೂರ್ವ ವಲಯ ರಣರಂಗದಲ್ಲಿ ಭಾರತೀಯ ಸೇನೆಯ ಮಹತ್ತರ ಪ್ರಗತಿ.

ಪಶ್ಚಿಮ ವಲಯ ರಣರಂಗದಲ್ಲಿ ಅಟಕ್ ಬಳಿ ತೈಲ ಶುದ್ಧೀಕರಣ ಕೇಂದ್ರದ ಮೇಲೆ ದಾಳಿ, ವಿಮಾನ ಯುದ್ಧದಲ್ಲಿ ಮೇಲುಗೈ, ಅನೇಕ ಠಾಣ್ಯಗಳ ವಶ, ಶತ್ರು ಸೇನೆಗೆ ಅಪಾರ ಸಾವು ನೋವು, ಛಂಬ್ ಬಳಿ ಉಗ್ರ ಕಾಳಗ, ಸಿಂಧ್ ಬವಾಲ್ಪುರ ವಿಭಾಗದಲ್ಲಿ 5,000 ಚ.ಕಿ.ಮೀ ಪ್ರದೇಶ ವಶದ ಅದ್ಭುತ ಶೌರ್ಯ ಪರಾಕ್ರಮವನ್ನು ಪ್ರಕಟಿಸಿದೆ. ಕೊಮಿಲ್ಲಾ ವಿಮಾನ ನಿಲ್ದಾಣ ವಶವಾದ ನಂತರ ಕೊಮಿಲ್ಲಾ ಪಟ್ಟಣ ಪತನಗೊಂಡು ದಂಡು ಪ್ರದೇಶ ಮೈನಾಮಟಯಲ್ಲಿನ ಇಡೀ ಪಾಕ್‌ನ ಗ್ಯಾರಿಸನ್ ಸೈನಿಕರು ಶರಣಾಗತರಾದರು.

ಭಾರತವೇ ಜಲಜನಕದ ಮಹಾನ್ ಶಕ್ತಿಕೇಂದ್ರ ಆಗುತ್ತದಂತೆ. ಅದು ಶಕ್ತರ ಮುಷ್ಟಿಯಲ್ಲಿನ ಶಕ್ತಿ ಆಗಬೇಕೆ?

ಗಡ್ಕರಿ ಏರಿದ ಹೈಡ್ರೋಜನ್ ಕಾರು



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಕ್ರಿಸ್‌ಮಸ್/ ಹೊಸವರ್ಷ ಹತ್ತಿರ ಬಂದಂತೆಲ್ಲ ಗೋವಾ ಎಲ್ಲರನ್ನೂ ತನ್ನೆಡೆ ಕರೆಯುತ್ತದೆ. ಈ ಬಾರಿ ವಿಜ್ಞಾನಿಗಳನ್ನೂ ಅದು ಕರೆದಿದೆ. ನಾಳೆಯಿಂದ ನಾಲ್ಕು ದಿನಗಳ ಕಾಲ ಅಲ್ಲಿ 'ಇಂಡಿಯಾ ಇಂಟರ್‌ನ್ಯಾಶನಲ್ ಸೈನ್ಸ್ ಫೆಸ್ಟಿವಲ್' ನಡೆಯಬೇಕು. ಸೈನ್ಸ್ ಚಿತ್ರೋತ್ಸವ, ಪ್ರಯೋಗ ಪ್ರದರ್ಶನ, ಸ್ವದೇಶೀ ಸೈನ್ಸ್, ಗ್ರಾಮೀಣ ವಿಜ್ಞಾನ ಇತ್ಯಾದಿಗಳ ಆ ಮೇಳವನ್ನು ಕೇಂದ್ರ ಸರ್ಕಾರವೇ ವ್ಯವಸ್ಥೆ ಮಾಡಿದೆ. ಆದರೆ ವಿಜ್ಞಾನವೇ ಅದಕ್ಕೆ ಅಡ್ಡಗಾಲು ಹಾಕಿದೆ. ಏಕೆಂದರೆ ದೇಶದ ನಾನಾ ಭಾಗಗಳಿಂದ ಬರುವ ವಿಜ್ಞಾನಿಗಳ ಜೊತೆ ಓಮೈಕ್ರಾನ್ ಕೂಡ ಪಣಜಿಗೆ ವಕ್ಕರಿಸಿದರೆ?

ದೊಡ್ಡ ದೊಡ್ಡ ಕನಸುಗಳನ್ನು ಬಿತ್ತುತ್ತ ಓಡಾಡುವ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿಯವರು ಇದೀಗ ತಮ್ಮ ಓಡಾಟಕ್ಕೆಂದು ಜಲಜನಕದ ಎಂಜಿನ್ ಇರುವ ಹೊಸ ಕಾರನ್ನು ಖರೀದಿಸಿದ್ದಾರೆ. 'ದಿಲ್ಲಿಯ ಎಲ್ಲ ಕಡೆ ಅದರಲ್ಲೇ ಓಡಾಡುತ್ತೇನೆ; ಪೆಟ್ರೋಲ್ ಬದಲು ನೀರಿನಿಂದಲೇ ಕಾರನ್ನು ಓಡಿಸಲು ಸಾಧ್ಯವೆಂದು ಜನರಿಗೆ ಗೊತ್ತಾಗಲಿ' ಎಂದು ಅವರು ಹೇಳಿದ್ದಾರೆ. ಭಾರೀ ಮಳೆಯಿಂದ ಲಕ್ಷಾಂತರ ಕಾರುಗಳು ದಿಲ್ಲಿಯಲ್ಲೂ ನೀರಲ್ಲೇ ಚಲಿಸಬೇಕಾಗಿ ಬಂದಿತ್ತಲ್ಲ? ಆ ನೀರಲ್ಲ, ಗಡ್ಕರಿಯವರು ಹೇಳಿದ್ದು. ಮಳೆಯಿಲ್ಲದ ದಿನಗಳಲ್ಲಿ ಚರಂಡಿ ನೀರಿನ ಶಕ್ತಿಯಿಂದಲೂ ಹೈಡ್ರೋಜನ್ ಪಡೆದು ಅದರಿಂದ ವಾಹನಗಳನ್ನು ಓಡಿಸುವ ಸಾಧ್ಯತೆಯ ಬಗ್ಗೆ ಹೇಳಿದ್ದಾರೆ. ಭಾರತದಲ್ಲಿ ಜಲಜನಕ ಉತ್ಪಾದನೆಗೆ ಬೇಕಾದ ಎಲ್ಲ ಕಚ್ಚಾಮಾಲುಗಳೂ- ಅಂದರೆ ಕೊಳಕು ಚರಂಡಿ, ಗೋತ್ಯಾಜ್ಯ, ಕಸಕಡ್ಡಿ ಹೇರಳ ಇವೆ ಎಂದಿದ್ದಾರೆ. ನಾಗಪುರದ ನಗರಪಾಲಿಕೆಯು ಚರಂಡಿ ನೀರನ್ನು 'ಸರ್ಕಾರಿ ವಿದ್ಯುತ್ ಉತ್ಪಾದನಾ ಘಟಕಕ್ಕೆ ಮಾರಿ ಪ್ರತಿವರ್ಷ 325 ಕೋಟಿ ರೂಪಾಯಿಗಳನ್ನು ಗಳಿಸುತ್ತಿದೆ' ಎಂದಿದ್ದಾರೆ. ಶಾಭಾಸ್!

ನೀರಿನ ಶಕ್ತಿಯಿಂದಲೇ ವಾಹನಗಳನ್ನು ಓಡಿಸುವ ವಿಚಾರವನ್ನು ಈಗಲ್ಲ, 1875ರಲ್ಲೇ ವಿಜ್ಞಾನ ಕತೆಗಾರ ಜೂಲ್ಸ್ ವರ್ನ್ ತನ್ನ 'ದ ಮಿಸ್ಟೀರಿಯಸ್ ಐಲ್ಯಾಂಡ್' (ರಹಸ್ಯ ದ್ವೀಪ) ಹೆಸರಿನ ಕಾದಂಬರಿಯಲ್ಲಿ ಬರೆದಿದ್ದ. ಆಗಿನ್ನೂ ಪೆಟ್ರೋಲ್ ಕಾರೂ ಬಂದಿರಲಿಲ್ಲ; ಕಲ್ಲಿದ್ದಲನ್ನು ಉರಿಸಿದಾಗ ಸಿಗುವ ಉಗಿಶಕ್ತಿಯ ಬಗೆಗಷ್ಟೇ ಗೊತ್ತಿತ್ತು. 'ನೀರನ್ನು ವಿಭಜಿಸಿದರೆ ಶಾಖಕ್ಕೂ ಬೆಳಕಿಗೂ ಬೇಕಾದ ಶಕ್ತಿಯನ್ನು ನಿರಂತರ ಪಡೆಯಬಹುದು' ಎಂದು ಪಾತ್ರವೊಂದರ ಮೂಲಕ ಹೇಳಿಸಿದ್ದ. ನೀರನ್ನು ವಿಭಜಿಸಿ ವಿದ್ಯುತ್ ಉತ್ಪಾದಿಸುವ ದುಬಾರಿ 'ಫ್ಯುಯೆಲ್ ಸೆಲ್' ತಂತ್ರ 1932ರಲ್ಲೇ ಗೊತ್ತಾಗಿತ್ತು. ಅದನ್ನು ಈಗಲೂ ನಾಸಾದವರು ಉಪಗ್ರಹಗಳಲ್ಲಿ ಬಳಸುತ್ತಿದ್ದಾರೆ. 1970ರಲ್ಲಿ ಇಡೀ ಜಗತ್ತು ತೈಲಸಂಕಟಕ್ಕೆ ತುತ್ತಾದಾಗ ಜಲಜನಕವನ್ನು ಅಗ್ಗದಲ್ಲಿ ಉತ್ಪಾದಿಸುವ ಚರ್ಚೆ ಆರಂಭವಾಗಿತ್ತು. ಮತ್ತೆ ಯಾಕೊ ಹಿಂದಕ್ಕೆ ಸರಿಯಿತು. ಆಮೇಲೆ ಇಡೀ ಜಗತ್ತು ಶಾಖಸಂಕಟಕ್ಕೆ ಸಿಲುಕಿದಾಗ 'ಮುಂದಿನ ಪೀಳಿಗೆಯ ಉಳಿವಿಗೆ ಜಲಜನಕ ಶಕ್ತಿಯೇ ಏಕೈಕ ಪರಿಹಾರ' ಎಂದು 2003ರಲ್ಲಿ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಹೇಳಿದ್ದೂ ಉಂಟು. ಆದರೂ ಆ ತಂತ್ರಜ್ಞಾನಕ್ಕೆ ಅಗತ್ಯ ಚಾಲನಶಕ್ತಿಯೇ ಸಿಕ್ಕಿರಲಿಲ್ಲ. ಈಗ ಸಿಗುತ್ತಿದೆ.

ಜಗತ್ತಿನ ಎಲ್ಲೆಲ್ಲೂ ಇರುವ ಜಲಜನಕವನ್ನು ಬಳಕೆಗೆ ಸಿಗುವಂತೆ ಮಾಡಲು ಮೂರು ವಿಧಾನಗಳಿವೆ: ಪೆಟ್ರೋಲ್ ಅಥವಾ ನೈಸರ್ಗಿಕ ಅನಿಲದ ಜೊತೆ ಉಗಿಯನ್ನು ಹಾಯಿಸಿ ಜಲಜನಕವನ್ನು ಪ್ರತ್ಯೇಕಿಸಬಹುದು. ಜಾತ್ರೆಯಲ್ಲಿ ಬಲೂನಿನಲ್ಲಿ ತುಂಬುವ ಹೈಡ್ರೋಜನ್ ಅನಿಲವನ್ನು ಈ ವಿಧಾನದಲ್ಲೇ ಉತ್ಪಾದಿಸುತ್ತಾರೆ. ಆದರೆ ಭೂತಾಪವನ್ನು ಹೆಚ್ಚಿಸುವ ಕಾರ್ಬನ್ ಡೈಆಕ್ಸೈಡ್ ಹೊಮ್ಮುವುದರಿಂದ ಇದಕ್ಕೆ ಗ್ರೇ-ಹೈಡ್ರೋಜನ್ ಎನ್ನುತ್ತಾರೆ. ಎರಡನೆಯ ವಿಧಾನದಲ್ಲಿ ಕಲ್ಲಿದ್ದಲನ್ನು ಉರಿಸಿಯೂ ಹೀಗೆ ಜಲಜನಕವನ್ನು ಪಡೆಯಬಹುದು. ಆಗ ಜಾಸ್ತಿ ಹೊಮ್ಮುವ ಕಾರ್ಬನ್ನನ್ನು ಗಟ್ಟಿಮುದ್ದೆ ಮಾಡಿ ಭೂಮಿಯ ಒಳಕ್ಕೇ ಸೇರಿಸಬೇಕು. ಹಾಗೆ ಉತ್ಪಾದಿಸುವ ಜಲಜನಕಕ್ಕೆ ಬ್ಲೂ-ಹೈಡ್ರೋಜನ್ ಎನ್ನುತ್ತಾರೆ. ಮೂರನೆಯ ಅತ್ಯಂತ ಸುರಕ್ಷಿತ ವಿಧಾನದಲ್ಲಿ ಜಲಜನಕವನ್ನು ಪಡೆಯುವುದೆಂದರೆ ಸೌರಶಕ್ತಿ, ಗಾಳಿಶಕ್ತಿ ಅಥವಾ ಗಡ್ಕರಿಯವರು ಹೇಳುವಂತೆ (ಬಿಲ್ ಗೇಟ್ಸ್ ತೋರಿಸಿದಂತೆ) ಚರಂಡಿ ನೀರಿನಿಂದಲೂ ವಿದ್ಯುತ್ ಉತ್ಪಾದಿಸಿ ಆ ವಿದ್ಯುತ್ ಶಕ್ತಿಯಿಂದ ನೀರನ್ನು ವಿಭಜಿಸಿ ಜಲಜನಕವನ್ನು ಪಡೆಯುವುದು. ಇದಕ್ಕೆ ಗ್ರೀನ್ ಹೈಡ್ರೋಜನ್ ಎನ್ನುತ್ತಾರೆ. ಅದು ಅತ್ಯುತ್ತಮ.

ಸೌರಫಲಕಗಳಿಂದ ವಿದ್ಯುತ್ ಶಕ್ತಿ ಸಿಕ್ಕರೆ ಅದನ್ನೇ ಬ್ಯಾಟರಿಯಲ್ಲಿ ತುಂಬಿ ಕಾರು, ಬೈಕ್ ಓಡಿಸಬಹುದಲ್ಲ? ಜಲಜನಕ ಯಾಕೆ ಬೇಕು? ಪ್ರಶ್ನೆ ಸಹಜ; ಆದರೆ ಬ್ಯಾಟರಿಯ ತೂಕ ಜಾಸ್ತಿ; ಲಾರಿಗೆ ಮಣಭಾರದ ಬ್ಯಾಟರಿ ಬೇಕಾಗುತ್ತದೆ. ಅದನ್ನು ಆಗಾಗ ಬದಲಿಸಬೇಕಾಗುತ್ತದೆ. ಜೊತೆಗೆ ಅದಕ್ಕೆ ಅಮೂಲ್ಯ ಲೀಥಿಯಂನಂಥ ಲೋಹ ಕೂಡ ಬೇಕು. ಇದರ ಹೋಲಿಕೆಯಲ್ಲಿ ಜಲಜನಕದ ಫ್ಯುಯೆಲ್ ಸೆಲ್ ಚಿಕ್ಕದು; ಪದೇಪದೇ ಬದಲಿಸಬೇಕಾಗಿಲ್ಲ (ಅದಕ್ಕೂ ವೇಗವರ್ಧಕವಾಗಿ ಪ್ಲಾಟಿನಮ್ ಬೇಕು ಅನ್ನಿ. ಆದರೆ ಈಗ ಪ್ಲಾಟಿನಮ್ ಇಲ್ಲದ ಅಗ್ಗದ್ದು ಬರುತ್ತಿವೆ). ಇದು ವಾಹನಕ್ಕೂ ಭಾರವಲ್ಲ; ಭೂಮಿಗೂ.

ಅಂತೂ ನೀರಿನಿಂದ ಕಾರು ಓಡುತ್ತದೆ; ಹೊಗೆ ಕೊಳವೆಯಿಂದ ಬರೀ ನೀರಿನ ಉಗಿ ಹೊಮ್ಮುತ್ತದೆ. ಹಾಗೆಂದು ಕಾರಿನ ಟ್ಯಾಂಕರಿನಲ್ಲಿ ನೀರು ಇರುವುದಿಲ್ಲ; ಬದಲಿಗೆ ಬೇರೆಲ್ಲೋ ಉತ್ಪಾದಿಸಿದ ಜಲಜನಕವನ್ನು ಸಿಲಿಂಡರಿಗೆ ತುಂಬಿಸಿ ಕಾರಿನಲ್ಲಿ ಇಟ್ಟಿರುತ್ತಾರೆ. ಅನಿಲ ಖಾಲಿಯಾಗುತ್ತ ಬಂದ ಹಾಗೆ ಹೈಡ್ರೋಜನ್ ಬಂಕ್‌ಗಳಲ್ಲಿ ಅದನ್ನು ಮತ್ತೆ ತುಂಬಿಸಿಕೊಳ್ಳಬಹುದು. ದಿಲ್ಲಿಯ ಹೊರವಲಯದಲ್ಲಿ ಅಂಥ ಎರಡು ಬಂಕ್‌ಗಳು ಬಂದಿವೆ. ಸಮಸ್ಯೆ ಏನೆಂದರೆ, ಅದು ಪೆಟ್ರೋಲಿಗಿಂತ ದುಬಾರಿ. ಸದ್ಯಕ್ಕಂತೂ ಪರಿಸರ ಕಾಳಜಿ ಇರುವ ಅತಿಶ್ರೀಮಂತರು ಮತ್ತು ಸಾರಿಗೆ ಸಚಿವರು ಮಾತ್ರ ಬಳಸಬಹುದು.

ಆದರೂ ಯಾಕೆ ಅಂಥ ಕಾರನ್ನು ದಿಲ್ಲಿಯಲ್ಲಿ ಸುತ್ತಾಡಿಸಿ ಗ್ರೀನ್ ಹೈಡ್ರೋಜನ್ ಅನ್ನು ಜನಪ್ರಿಯ ಮಾಡಲು ಗಡ್ಕರಿಯವರು ಹೊರಟಿದ್ದಾರೆ? ಅದಕ್ಕೊಂದು ಹಿನ್ನೆಲೆ ಇದೆ: 'ರಾಷ್ಟ್ರೀಯ ಹೈಡ್ರೋಜನ್ ಮಿಶನ್' ಆರಂಭಿಸಿ 4,000 ಮೆಗಾವಾಟ್ ಶಕ್ತಿಯನ್ನು ಜಲಜನಕದಿಂದಲೇ ಉತ್ಪಾದಿಸುತ್ತೇವೆಂದು ಪ್ರಧಾನಿ ನರೇಂದ್ರ ಮೋದಿಯವರು ಈ ವರ್ಷ ಕೆಂಪುಕೋಟೆಯ ಭಾಷಣದಲ್ಲಿ ಹೇಳಿದ್ದರು. ಅದಕ್ಕೂ ಒಂದು ಹಿನ್ನೆಲೆ ಇದೆ: ಗುಜರಾತಿನ ಜಾಮನಗರದ ಬಳಿ 'ಧೀರೂಭಾಯಿ ಅಂಬಾನಿ ಗ್ರೀನ್ ಎನರ್ಜಿ ಗಿಗಾ ಕಾಂಪ್ಲೆಕ್ಸ್' ಎಂಬ ಬೃಹತ್ ಶಕ್ತಿಸಂಕೀರ್ಣ ತಲೆ ಎತ್ತಿದೆ. ಅಲ್ಲಿ ಬಿಸಿಲಿನಿಂದ ವಿದ್ಯುತ್ ಉತ್ಪಾದಿಸಿ ಅದರಿಂದ ಜಲಜನಕ ಅನಿಲವನ್ನು ಪಡೆಯಲಾಗುತ್ತಿದೆ. 'ಇನ್ನು ಹತ್ತು ವರ್ಷಗಳಲ್ಲಿ ಜಲಜನಕ ಅನಿಲದ ಉತ್ಪಾದನಾ ವೆಚ್ಚವನ್ನು ಕಿಲೊಕ್ಕೆ 360 ರೂಪಾಯಿಯಿಂದ ಅರ್ಧಕ್ಕೆ ಇಳಿಸುತ್ತೇನೆ' ಎಂದು ಮುಕೇಶ್ ಅಂಬಾನಿ ಈಚೆಗೆ ಹೇಳಿದ್ದಾರೆ. ಅದಾನಿಯವರಂತೂ ಜಗತ್ತಿನ ಅತಿ ದೊಡ್ಡ ಸೌರವಿದ್ಯುತ್ ಉತ್ಪಾದಕರಾಗಿದ್ದು, 'ಹೈಡ್ರೋಜನ್ ಕ್ರಾಂತಿಗೆ ನಾವು ಸಜ್ಜಾಗಿದ್ದೇವೆ' ಎಂದಿದ್ದಾರೆ.

ಇವರೆಲ್ಲ ಕೈಜೋಡಿಸಿದರೆ ಶಕ್ತಿಯ ಹೊಸಧಾರೆ ನುಗ್ಗಿ ಹೊಮ್ಮೀತು ನಿಜ. ಆದರೆ ಅದು ಹಿಂದಿದ್ದವರನ್ನು ಹಿಂದೆಯೇ ಬಿಟ್ಟು ಹೋಗಬಾರದು ತಾನೆ? ಗಡ್ಕರಿ ಹೇಳಿದಂತೆ ಭಾರತದಲ್ಲಿ ಎಲ್ಲ ಕಚ್ಚಾಪದಾರ್ಥಗಳೂ ಇವೆ. ಸೆಗಣಿ, ಗಂಜಳ, ಕಸತ್ಯಾಜ್ಯ ಮತ್ತು ಚರಂಡಿಗಳಿಂದ ಹೊಮ್ಮುವ ತ್ಯಾಜ್ಯ ಅನಿಲಗಳೆಲ್ಲ ಭೂಮಿಯನ್ನು ಬಿಸಿ ಮಾಡುತ್ತಿವೆ. ಅವುಗಳನ್ನು ಬಳಸಿ ಹೈಡ್ರೋಜನ್ ಉತ್ಪಾದಿಸಿದರೆ ಗ್ರಾಮಗಳಲ್ಲಿ ಉದ್ಯೋಗವೂ ಸೃಷ್ಟಿಯಾಗುತ್ತದೆ. ಸೆಗಣಿಯಿಂದ ನೇರವಾಗಿ ಜಲಜನಕ ಅನಿಲ ಉತ್ಪಾದನೆ ಸಾಧ್ಯವೆಂದು 15 ವರ್ಷಗಳ ಹಿಂದೆ ಕೆನಡಾದಲ್ಲಿ ಭಾರತೀಯ ಮೂಲದ ಎಂಜಿನಿಯರ್ ನಿರ್ಮಲಾ ಖಂಡನ್ ತೋರಿಸಿದ್ದರು. ಅಂಥ ನೆಲಮೂಲದ ತಂತ್ರಜ್ಞಾನಕ್ಕೆ ಗೋವಾದ ಸೈನ್ಸ್ ಮೇಳದಲ್ಲಿ ಈಗಲೂ ಸ್ಥಾನ ಇಲ್ಲ. ಸೆಗಣಿಯ ಹೆಸರು ಹೇಳಿ ಬರೀ ಗೆದ್ದೆತ್ತಿನ ಬಾಲ ಹಿಡಿದು ಓಡಬಾರದಲ್ವಾ?



ಚುರುಮುರಿ



ಯಾವುದು ಸುದ್ದಿ?

• ಚಂದ್ರಕಾಂತ ವಡ್ಡು

'ನಾಯಿ ಮನುಷ್ಯನಿಗೆ ಕಡಿದರೆ ಸುದ್ದಿಯಲ್ಲ, ಮನುಷ್ಯ ನಾಯಿಗೆ ಕಡಿದರೆ ಸುದ್ದಿ' ಎಂದು ಪತ್ರಿಕಾ ತರಬೇತಿಯ ತಾಲೀಮಿನಲ್ಲಿ ಹೇಳಿಕೊಟ್ಟದ್ದ ಹಳಸಲು ಪಾಠ ಹೊಸದಾಗಿ 'ರಂಗ' ಪ್ರವೇಶಿಸಿದ ವರದಿಗಾರನಿಗೆ ಬಾಯಿಪಾಠವಾಗಿತ್ತು. ಪ್ರತಿಯೊಂದು ವರದಿ ಬರೆಯುವಾಗಲೂ ಈ ನಿಯಮ ಅನ್ವಯಿಸಿ, ಸುದ್ದಿ ಹೌದೋ ಅಲ್ಲವೋ ಅಂತ ಖಚಿತಪಡಿಸಿಕೊಳ್ಳುವುದು ಅವನಿಗೆ ಒಂಥರಾ ಸವಾಲಾಗಿತ್ತು. ಒಂದು ಪಕ್ಷದ ಜೊತೆ ಸೇರಿ ಸರ್ಕಾರ ರಚಿಸಿದಾಗ 'ಜಾತ್ಯತೀತ'ವಾಗಿ, ಮತ್ತೊಂದು ಪಕ್ಷದ ಸಖ್ಯ ಬೆಳೆಸಿದಾಗ 'ಕೋಮುವಾದಿ'ಯಾಗಿ ಕಾಣುವ ರಾಜಕೀಯ ಪಕ್ಷವೊಂದರ ನಡೆಯನ್ನು ಅರ್ಥ ಮಾಡಿಕೊಳ್ಳಲು ಹೆಣಗುವ ರಾಜ್ಯಶಾಸ್ತ್ರ ವಿದ್ಯಾರ್ಥಿಯ ಸ್ಥಿತಿ ಅವನದು!

ಆಗಾಗ ಸಂಪಾದಕರ ಮುಂದೆ ನಿಂತು, 'ಸರ...' ಎಂದು ರಾಗ ಎಳೆಯುತ್ತಿದ್ದ. ಸಹನೆ ಕಳೆದುಕೊಂಡ ಸಂಪಾದಕರು ಕೆಲವು ಪ್ರಚಲಿತ ನಿದರ್ಶನಗಳ ಟಿಪ್ಸ್ ಕೊಟ್ಟರು: ಪರೀಕ್ಷೆಯಲ್ಲಿ ರಾಜಕಾರಣಿ ಮಗ ಪಾಸಾದರೆ, ಶಿಕ್ಷಕರ ಮಗ ಫೇಲಾದರೆ ಸುದ್ದಿ. ಎಸಿಬಿ ಬಲೆಗೆ ಬಿದ್ದ ಅಧಿಕಾರಿ ಕ್ಲೀನ್‌ಚಿಟ್ ಪಡೆದರೆ ಸುದ್ದಿಯಲ್ಲ, ಶಿಕ್ಷೆಯಾದರೆ ಪ್ರಮುಖ ಸುದ್ದಿ. ಕೋವಿಡ್‌ಪೀಡಿತರ ಸಂಖ್ಯೆ, ಟೊಮೆಟೊ ಬೆಲೆ, ಷೇರು ಮಾರುಕಟ್ಟೆ ವಹಿವಾಟು ಹೆಚ್ಚಾದರೂ ಕಡಿಮೆಯಾದರೂ ಸುದ್ದಿಯೇ. ಕಳ್ಳರು ಬಂಗಾರ ಕದ್ದರೆ ಸಾಧಾರಣ ಸುದ್ದಿ, ಪುಸ್ತಕ ಕದ್ದರೆ ಪ್ರಮುಖ ಸುದ್ದಿ. ದೊಡ್ಡಗೌಡ್ರು ದೆಹಲಿಯಲ್ಲಿ ಯಾವ ಪಕ್ಷದ ಹೈಕಮಾಂಡ್ ಅನ್ನು ಭೇಟಿಯಾದರೂ ಅದು ಸದ್ದು ಮಾಡುವ ಫೋಟೊಸುದ್ದಿ.

ವರದಿಗಾರನ ಅನುಮಾನ ರೋಗ ವಾಸಿಯಾಗಲಿಲ್ಲ. ಸಹೋದ್ಯೋಗಿ ತಿಂಗಳೇಶನ ಬಳಿ ಸಂಶಯ ಮಂಡಿಸಿದ: 'ಪೊಲೀಸ್ ಅಧಿಕಾರಿ ಮನೆಯಲ್ಲಿ ಕಳವಾದರೆ ಸುದ್ದಿ ಆಗುತ್ತಾ...?'

'ಅದು ಖಂಡಿತಾ ಸುದ್ದಿ, ಸಂಶಯವೇ ಬೇಡ'.

'ಸಂಚಾರ ವಿಭಾಗದ ಪೊಲೀಸ್ ಅಧಿಕಾರಿ ಮನೆಯಲ್ಲಿ ಕಳವಾದರೆ...?'

ಕೋವಿಡ್ ಅಲೆಗಳಂತೆ ಒಂದೊಂದಾಗಿ ಹುಟ್ಟತೊಡಗಿದ ಅನುಮಾನಗಳಿಂದ ತಿಂಗಳೇಶ ನಿಗೂ ತಲೆ ಕೆಟ್ಟಿತು. 'ನೋಡಪಾ, ಸಂಚಾರ ವಿಭಾಗದ ಪೊಲೀಸರ ಮನೆಯಲ್ಲಿ ವಾಹನ ಕಳವಾದರೆ ಮೂರು ಕಾಲಂ ಸುದ್ದಿ, ಮೊಬೈಲ್ ಕಳವಾದರೆ ಮುಕ್ಕಾಲು ಕಾಲಂ ಸುದ್ದಿ' ಎಂದ!

ಸಂಗತ

ಸಾವು ಇದೆ, ತಡೆವ ಸಾಸಿವೆ ಇಲ್ಲ!

ಭಯ ಜೀವಪರವೂ ಹೌದು, ಜೀವ ವಿರೋಧಿಯೂ ಹೌದು. ಅದು ಚಾಕುವಿನಂತೆ. ಹೇಗೆ ಬಳಸುತ್ತೇವೆಯೊ ಹಾಗೆ...

• ಸದಾಶಿವ್ ಸೊರಟೂರು

'ಈಗೀಗ ಬೆಳಗ್ಗೆ ಐದಕ್ಕೆಲ್ಲಾ ಎದ್ದುಬಿಡುತ್ತೇನೆ. ಊರಿನ ಡಾಮರು ರಸ್ತೆಯಲ್ಲಿ ಕಿಲೊಮೀಟರ್‌ಗಟ್ಟಲೆ ನಡೆಯುತ್ತೇನೆ. ಜೊತೆಗೊಂದಿಷ್ಟು ವ್ಯಾಯಾಮ. ಮನೆಯೆಡೆಗೆ ನಡೆಯುವ ಹೊತ್ತಿಗೆ ಸೂರ್ಯ ಎದುರಾಗುತ್ತಾನೆ. ದೇಹ-ಮನಸ್ಸು ಹಗುರ ಹಗುರ. ಇದು ನನಗೆ ಸಿಕ್ಕಿರುವ ಕೊನೆಯ ದಿನವೇನೋ ಅನ್ನುವಂತೆ ಅಂದಿಗೊಂದು ಪ್ಲಾನ್ ಮಾಡಿಕೊಳ್ಳುತ್ತೇನೆ. ನಾಳೆ ಏನಾದರೂ ನನ್ನ ಪಾಲಿಗಿದ್ದರೆ ಅದು ಬೋನಸ್ ಅಷ್ಟೆ. ತೀವ್ರ ಮುಂಗೋಪಿಯಾಗಿದ್ದ ನಾನು ಆ ಕೋಪವನ್ನು ಬಿಟ್ಟೆ. ಜಗಳಕ್ಕಿಳಿಯುವುದು ದೂರದ ಮಾತಾಯಿತು. ತೀರಾ ಸಭ್ಯನಾಗಿಬಿಟ್ಟೆ. ಸಾವು ಬೆನ್ನ ಹಿಂದೆಯೇ ಇದೆ ಅನಿಸುತ್ತದೆ. ಪುನೀತ್ ರಾಜ್‌ಕುಮಾರ್ ಅವರ ಸಾವು ನನಗೆ ಈ ಬದಲಾವಣೆ ಕಲಿಸಿದೆ' ಅಂತ ಗೆಳೆಯನೊಬ್ಬ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದ.

ಇತ್ತೀಚಿನ ದಿನಗಳಲ್ಲಿ ತಮ್ಮ ತಮ್ಮ ಹೃದಯ ಪರೀಕ್ಷಿಸಿಕೊಳ್ಳಲು ಆಸ್ಪತ್ರೆಯಲ್ಲಿ ನಿಂತವರ ಸಾಲು, ವಾಕಿಂಗ್‌ಗೆ ಬದಲಾದ ಸ್ನೇಹಿತನ ದಿನದ ನಾಲ್ಕು ಕಿ.ಮೀ ಜಾಗಿಂಗ್, ಕೊರೊನಾ ಅಬ್ಬರದಲ್ಲಿ ಮನೆಯೊಳಗೆ ನಾವು ಬಚ್ಚಿಟ್ಟುಕೊಂಡ ರೀತಿ, ಲಸಿಕೆಗಾಗಿ ಬೆಳೆದು ನಿಲ್ಲುತ್ತಿದ್ದ ಸರದಿ, ಗೆಳೆಯರ, ಆತ್ಮೀಯರ ಅಕಾಲ-ಮೃತ್ಯುವಿನಿಂದ ಜೋರಾಗುವ ಎದೆಬಡಿತ... ಇಲ್ಲೆಲ್ಲಾ ನಮಗೆ ಕಾಣಸಿಗುವುದು ಸಾವಿನ ಭಯ.

ತೀರಾ ಹತ್ತಿರದವರ ಹಠಾತ್ ಸಾವು ನಮ್ಮನ್ನು ಕಂಗೆಡಿಸುತ್ತದೆ. ನಾಳೆಯೇ ನನ್ನ ಸರದಿ ಇರಬಹುದಾ ಎಂಬ ಆತಂಕ ತಂದೊಡ್ಡುತ್ತದೆ. ಯಾಕೆಂದರೆ ಸಾವು ಎಂಬುದು ಮತ್ತೆಂದೂ ನಾವು ವಾಪಸು ಬರಲಾಗದ ಸ್ಥಿತಿ. ಅದು ಆತ್ಮದ ಸಾವಲ್ಲ, ಬರೀ ದೇಹದ ನಾಶ. ಆತ್ಮ ಮತ್ತೆಲ್ಲೋ ಅವತರಿಸುತ್ತದೆ ಎಂಬ ನಂಬಿಕೆಯ ವಿಚಾರ ಏನೇ ಇದ್ದರೂ ಅದನ್ನು ಕಂಡವರ್‍ಯಾರು? ಸಾವು ಮತ್ತು ಅದರಾಚೆಯ ಬಗ್ಗೆ ಯಾರಿಗೆ ತಾನೆ ಗೊತ್ತು?

ಅದಕ್ಕಾಗಿಯೇ ಸಾವು ಅಂದರೆ ನಮಗೆ ಇನ್ನಿಲ್ಲದ ಭಯ. ಹಾಗಂತ ನಾವೇನು ನಿತ್ಯ ಸಾವಿನ ಭಯದಲ್ಲೇ ಇರುತ್ತೇವೆ ಎಂದಲ್ಲ. ಆತ್ಮೀಯರ ಅಕಾಲಮೃತ್ಯು ಒಂದೆರಡು ವಾರ ಕಾಡಬಹುದು, ಬಳಿಕ ಸಹಜ ಸ್ಥಿತಿಗೆ ಮರಳುತ್ತೇವೆ. ಅದೇ ಈ ಬದುಕಿನ ಸೌಂದರ್ಯ ಮತ್ತು ನಿಗೂಢತೆ.

'ದಿನದಿನವೂ ಜನ ಸಾಯುವುದನ್ನು ನೋಡಿದರೂ ತಮಗೆ ಸಾವೇ ಇಲ್ಲ ಅನ್ನುವಂತೆ ಆಡುವವರನ್ನು ನೋಡುವುದಕ್ಕಿಂತ ದೊಡ್ಡ ಆಶ್ಚರ್ಯ ಏನಿದೆ?' ಅನ್ನುತ್ತದೆ ಗೀತೆ. 'ನಮಗೆ ನಮ್ಮ ಸಾವಿನ ಬಗ್ಗೆ ನಂಬಿಕೆಯೇ ಇಲ್ಲ, ಅದು ನಮ್ಮದಲ್ಲದ್ದು ಎನ್ನುವಂತೆ ನೋಡುತ್ತೇವೆ' ಅನ್ನುತ್ತಾನೆ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್.

ಹಾಗಾದರೆ ಭಯ ಅನ್ನುವುದು ಇರಬೇಕಾ? ಅದರಲ್ಲೂ ಸಾವಿನ ಬಗ್ಗೆ? ಭಯ ಒಳ್ಳೆಯದೆ, ಆದರೆ ಅದಕ್ಕೊಂದು ಮಿತಿ ಬೇಕು. ಭಯ ಅನ್ನುವುದು ಜ್ಞಾನ. ತೀರಾ ವೇಗವಾಗಿ ಗಾಡಿ ಓಡಿಸಿದರೆ ಅಪಘಾತವಾಗಿ ನಾನು ಸತ್ತೇ ಹೋಗಬಹುದು ಅನ್ನುವ ಭಯ ಇದೆಯಲ್ಲ, ಅದು ಬೇಕು. ಭಯ ನಮ್ಮನ್ನು ಹತ್ತಾರು ಅವಘಡಗಳಿಂದ ಪಾರುಮಾಡುತ್ತದೆ. ಆದರೆ ಭಯದಲ್ಲೇ ಸತ್ತವರೂ ಇದ್ದಾರೆ. ಎಂದೋ ಬರುವ ಸಾವಿಗೆ ಹೆದರಿಕೊಂಡು ನಿತ್ಯ ನರಕ ಅನುಭವಿಸುವವರೂ ಇದ್ದಾರೆ. ಒಂದು ಸಣ್ಣ ಭಯವನ್ನು ಸಾಕಿಕೊಂಡು ನಮ್ಮ ಎಚ್ಚರದಲ್ಲಿ ನಾವಿರಬೇಕು.

ತೀರಾ ಕ್ಷಣ ಕ್ಷಣಕ್ಕೂ ಕಾಡುವ ಸಾವಿನ ಭಯವನ್ನು ವೈದ್ಯಕೀಯ ಭಾಷೆ 'ತೆನಟೊಫೋಬಿಯಾ' ಎಂದು ಕರೆಯುತ್ತದೆ. ಅತೀ ಭಯವೂ ಒಂದು ಕಾಯಿಲೆಯೆ! ಭಯ ಜೀವಪರವೂ ಹೌದು, ಜೀವ ವಿರೋಧಿಯೂ ಹೌದು. ಅದು ಚಾಕುವಿನಂತೆ. ಹೇಗೆ ಬಳಸುತ್ತೇವೆಯೊ ಹಾಗೆ!

ಸಾವು ಬಂದು ಎದುರಿಗೆ ನಿಂತಾಗ, ಕಳೆದ ಇಡೀ ಬದುಕು ಕಣ್ಣಮುಂದೆ ಬರುತ್ತದೆ. ಗಳಿಸಿಕೊಂಡ ಪ್ರೇಮ, ಕಾಡಿದ ದೌರ್ಬಲ್ಯ, ಬದುಕಿನ ಆತುರಗೇಡಿತನ, ಒಪ್ಪಿಕೊಳ್ಳಲಾಗದ ಬದಲಾವಣೆ, ಎಚ್ಚರಹೀನ ಕಾರ್ಯ, ವರ್ತಮಾನದಲ್ಲಿ ಬದುಕದೇ ಕಳೆದುಕೊಂಡ ಕ್ಷಣ, ಮಾಡಿದ ಒಳ್ಳೆಯ ಕಾರ್ಯ... ಹೀಗೆ ಹತ್ತೆಂಟು ವಿಚಾರಗಳು ನಮ್ಮನ್ನು ಬೀಳ್ಕೊಡಲು ನಿಂತಿರುತ್ತವೆ. ಸಾವೊಂದು ಅದ್ಭುತ ಪಾಠ. ಆದರೆ ನಾವ್ಯಾರೂ ಅದರಿಂದ ಕಲಿಯುವ ಗೋಜಿಗೆ ಹೋಗುವುದಿಲ್ಲ. ಆಸೆಬುರುಕ ಬದುಕು ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ.



ಅವಘಡಗಳ ಬಗ್ಗೆ ಎಚ್ಚರಿಕೆ, ಆರೋಗ್ಯದ ಬಗ್ಗೆ ಕಾಳಜಿ, ಸಕಾರಾತ್ಮಕ ಚಿಂತನೆ, ಆತಂಕಗಳ ಕುರಿತು ಚರ್ಚೆ, ಸಾಮಾಜಿಕವಾಗಿ ಪರಸ್ಪರ ಬೆರೆಯುವಿಕೆ, ಎಲ್ಲವನ್ನೂ ಇದ್ದಂತೆಯೇ ಸ್ವೀಕರಿಸುವ ಮನಃಸ್ಥಿತಿ, ಆರೋಗ್ಯಕರ ಜೀವನಶೈಲಿ ಇತ್ಯಾದಿಗಳು ಸಾವನ್ನು ಸಹಜವಾಗಿ ಸ್ವೀಕರಿಸುವಂತೆ ಮಾಡಲು ನೆರವಾಗುತ್ತವೆ.

ಸಾವು ಯಾರನ್ನು ತಾನೇ ಬಿಟ್ಟಿದೆ? ಸಾವನ್ನು ಗೆದ್ದವರಾದರೂ ಎಲ್ಲಿದ್ದಾರೆ? ಕಿಸಾಗೌತಮಿಯ ಕಥೆ ನಮಗೆಲ್ಲ ಗೊತ್ತೇ ಇದೆ. ಸತ್ತ ತನ್ನ ಮಗನನ್ನು ಉಳಿಸಿಕೊಡಿ ಎಂದು ಬುದ್ಧನಲ್ಲಿಗೆ ಬರುವ ಕಿಸಾಗೌತಮಿಗೆ ಬುದ್ಧ ಸಾವಿಲ್ಲದ ಮನೆಯಿಂದ ಸಾಸಿವೆ ತರಲು ಹೇಳುತ್ತಾನೆ. ಊರು ಸುತ್ತಿ ಬಂದರೂ ಸಾವಿಲ್ಲದ ಮನೆ ಒಂದೂ ಸಿಗುವುದಿಲ್ಲ. ಸಾವು ಜನನದಷ್ಟೇ ಸತ್ಯ. ಅನಿವಾರ್ಯ ಕೂಡ. ಆ ಮೂಲಕ ಬದುಕಿನ ದರ್ಶನ ಮಾಡಿಸುತ್ತಾನೆ ಬುದ್ಧ. ಹುಟ್ಟಿದವರಿಗೆಲ್ಲಾ ಸಾವಿದೆ, ಅದನ್ನು ತಡೆಯುವ ಸಾಸಿವೆ ಮಾತ್ರ ಇಲ್ಲ.

ವಾಚಕರ ವಾಣಿ

ಅಂಕೆಯಿಲ್ಲದ ನಿರ್ಮಾಣ ಕಾಮಗಾರಿ

ತಡರಾತ್ರಿಯವರೆಗೆ ನಡೆಯುವ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಒಂದು ಕಾನೂನು ರೂಪಿಸಬೇಕಾದ ಅಗತ್ಯವಿದೆ ಎಂಬ ಎಸ್.ರವಿ ಅವರ ಸಲಹೆ (ವಾ.ವಾ., ಡಿ. 7) ಸರಿಯಾಗಿಯೇ ಇದೆ. ಕೆಲವು ದಿನಗಳ ಹಿಂದೆ, ನಮ್ಮ ಮನೆ ಸಮೀಪದ ನಿರ್ಮಾಣ ಹಂತದ ಕಟ್ಟಡದಲ್ಲಿ ಸಂಜೆ 7 ಗಂಟೆಯ ನಂತರವೂ ಗ್ರಾನೈಟ್ ಕತ್ತರಿಸುತ್ತಿದ್ದ ಕರ್ಕಶ ಶಬ್ದ ತಾಳಲಾರದೆ ನಾನು ಪೊಲೀಸ್ ಕಂಟ್ರೋಲ್ ರೂಮ್‌ಗೆ ಫೋನ್ ಮಾಡಿ 'ಇಷ್ಟೊತ್ತಿನ ಮೇಲೂ ಕಾಮಗಾರಿಗೆ ಅನುಮತಿ ಕೊಟ್ಟವರ್‍ಯಾರು ಮೇಡಂ?' ಎಂದು ಕೇಳಿದೆ. 'ಕನ್‌ಸ್ಟ್ರಕ್ಷನ್ ಅಲ್ವ ಸರ್, ಸ್ವಲ್ಪ ನೀವೇ ಅಡ್ಜಸ್ಟ್ ಮಾಡ್ಕೊಳ್ಳಿ' ಎಂಬ ಉತ್ತರ ಅತ್ತಲಿಂದ ಬಂತು. ಆಗ ಆ ಕಟ್ಟಡದ ಬಳಿಯೇ ಹೋಗಿ ಪ್ರಶ್ನಿಸಿದಾಗ, ರವಿ ಅವರು ಹೇಳಿರುವಂತೆ ವಿಷಯ ಜಗಳಕ್ಕೆ ತಿರುಗುವುದರಲ್ಲಿತ್ತು. ಇದನ್ನು ಮನಗಂಡ ನಾನು, ಅದನ್ನು ತಪ್ಪಿಸಲು ಮೆಲ್ಲನೆ ಅಲ್ಲಿಂದ ಜಾಗ ಖಾಲಿ ಮಾಡಿದೆ.

ರವಿಕಿರಣ್ ಶೇಖರ್, ಬೆಂಗಳೂರು

ಮಾದರಿ ನಾಯಕಿಗೆ ನೀಡಬೇಕಿದೆ ನೆರವು

ಮ್ಯಾನ್ಮಾರ್‌ನ ಪ್ರಜಾನಾಯಕಿ, ನಾಗರಿಕ ಹಕ್ಕುಗಳ ಪರ ಹೋರಾಟಗಾರ್ತಿ ಆಂಗ್ ಸಾನ್ ಸೂಕಿ ಅವರಿಗೆ ಅಲ್ಲಿನ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿರುವುದು ಅಚ್ಚರಿ ತರಿಸಿದೆ. ಮಾನವ ಹಕ್ಕುಗಳನ್ನು ಪ್ರತಿಪಾದಿಸುತ್ತಾ ತಮ್ಮ ಇಡೀ ಜೀವನವನ್ನು ಹೋರಾಟ, ಗೃಹಬಂಧನ, ಜೈಲು ಶಿಕ್ಷೆಯಲ್ಲೇ ಕಳೆದವರು ಸೂಕಿ. ದೇಶದ ಕಠಿಣ ಮಿಲಿಟರಿ ಆಡಳಿತದ ಶೋಷಣೆಯಿಂದ ನಾಗರಿಕರನ್ನು ಮುಕ್ತಗೊಳಿಸಲು ತಮ್ಮ ಜೀವನವನ್ನೇ ಒತ್ತೆ ಇಟ್ಟು, ಶಾಂತಿತತ್ವದ ಮಾರ್ಗದಲ್ಲಿ ಹೋರಾಡಿ ವಿಶ್ವಕ್ಕೇ ಮಾದರಿಯಾದವರು.

ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರಾಗಿರುವ ಸೂಕಿ ಅವರಿಗೆ ಕೋವಿಡ್ ನಿಯಮ ಉಲ್ಲಂಘನೆ ಮತ್ತು ಶಾಂತಿಗೆ ಭಂಗ ಉಂಟುಮಾಡಿದ ಆರೋಪಗಳ ನೆಪವೊಡ್ಡಿ ಶಿಕ್ಷೆ ವಿಧಿಸಿರುವುದು ಯಾವ ನ್ಯಾಯ? ಅಂತರರಾಷ್ಟ್ರೀಯ ಸಮುದಾಯವು ಇಂತಹ ಮಹಾನಾಯಕಿಗೆ ಅನ್ಯಾಯವಾಗಲು ಬಿಡದೆ, ಅವರ ಮೇಲಿನ ಆರೋಪಗಳನ್ನು ಹಿಂದಕ್ಕೆ ಪಡೆಯುವಂತೆ ಮ್ಯಾನ್ಮಾರ್‌ನ ಮಿಲಿಟರಿ ಆಡಳಿತದ ಮೇಲೆ ಒತ್ತಡ ಹೇರಬೇಕಾಗಿದೆ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಕಾಡದಿರಲಿ ಕೊರೊನಾ ಕರಿನೆರಳು

ಹಲವು ತಿಂಗಳುಗಳಿಂದ ಮುಚ್ಚಿದ್ದ ಶಾಲಾ ಕೊಠಡಿಗಳಲ್ಲಿ ಈಗ ಮಕ್ಕಳ ಕಲರವ ತುಂಬಿದೆ. ಬಿಕೋ ಎನ್ನುತ್ತಿದ್ದ ರಸ್ತೆಗಳಲ್ಲಿ ಬೆಳಗ್ಗೆ ಮತ್ತು ಸಂಜೆ ಶಾಲೆಗೆ ಓಡಾಡುವ ಮಕ್ಕಳ ಗಲಾಟೆಯಿಂದ ಹಬ್ಬದ ವಾತಾವರಣ ಸೃಷ್ಟಿಯಾಗಿದೆ.

ಅದರಲ್ಲೂ ಹೊಸದಾಗಿ ಶಾಲೆಗೆ ಸೇರಿರುವ ಮಕ್ಕಳಂತೂ ಹೊಸ ಬ್ಯಾಗ್, ಸಮವಸ್ತ್ರ, ಶೂ ಧರಿಸಿ, ಶಾಲೆಗೆ ಬರುವುದಿಲ್ಲವೆಂದು ಹಟ ಮಾಡುತ್ತಾ, ಅಳುತ್ತಾ ಬರುವುದನ್ನು ನೋಡುವುದೇ ಒಂದು ಸೊಗಸು. ಆದರೆ ಈಗ ಕೊರೊನಾದ ರೂಪಾಂತರಿ ತಳಿ ಓಮೈಕ್ರಾನ್ ಹರಡುವಿಕೆಯನ್ನು ಗಮನಿಸಿ 'ಶಾಲೆ ಮುಚ್ಚಬೇಕಾದ ಸಂದರ್ಭ ಬಂದರೆ ಹಿಂದೇಟು ಹಾಕುವುದಿಲ್ಲ' ಎಂಬ ಶಿಕ್ಷಣ ಸಚಿವರ ಹೇಳಿಕೆಯಿಂದ (ಪ್ರ.ವಾ., ಡಿ. 7) ಶಿಕ್ಷಕರು ಹಾಗೂ ಪೋಷಕರಲ್ಲಿ ಸಣ್ಣ ಆತಂಕ ಶುರುವಾಗಿದೆ.

ಒಂದು ವೇಳೆ ಶಾಲೆಗಳು ಮುಚ್ಚಿದರೆ ಮಕ್ಕಳಿಗೆ ಆಗುವ ಶೈಕ್ಷಣಿಕ ಹಿನ್ನಡೆಯ ಜೊತೆಗೆ ಈಗ ತಾನೇ ಚಿಣ್ಣರ ಚಿಲಿಪಿಲಿಯಿಂದ ಜೀವಕಳೆ ಬಂದಿರುವ ಸಮಾಜಕ್ಕೆ ಮತ್ತೆ ಜಡ ಹಿಡಿಯುತ್ತದೆ. ಆದರೆ ಹಾಗಾಗದಿರಲಿ, ಕೊರೊನಾದ ಕರಿನೆರಳು ಮಕ್ಕಳನ್ನು ಕಾಡದಿರಲಿ ಎಂದು ಆಶಿಸೋಣ.

ಸುವರ್ಣ ಸಿ.ಡಿ., ತರೀಕೆರೆ

ತನ್ನನ್ನು ತಾನೇ ಕೊಂದುಕೊಳ್ಳುವ ಅಭಿವೃದ್ಧಿ ಪಥ

ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್' ನಾಟಕದಲ್ಲಿ ಮೇಳದವರು ಅಶ್ವತ್ಥಾಮನ ರಣ ಬಿಡಾರದ ಬಳಿ ಬಂದು ಅವನ ಅಜ್ಜಿಗೆ 'ಅಶ್ವತ್ಥಾಮನೆಲ್ಲಿ? ಈ ದಿನ ಬಿಡಾರದಿಂದ ಹೊರಹೋದರೆ ಅವನ ಜೀವಕ್ಕೆ ಅಪಾಯ' ಎಂದು ಹೇಳುವರು. ಆಗ ಅಜ್ಜಿ 'ಸಾಯಲೆಂದೇ ಓಡುವವರ ತಡೆಹಿಡಿಯುವವರಾರು?' ಎಂದು ತನ್ನ ಅಳಲು ತೋಡಿಕೊಳ್ಳುವಳು. ಮೇಳದವರು ಸಮುದ್ರದಂಡೆಗೆ ಧಾವಿಸಿ ಬರುವಷ್ಟರಲ್ಲಿ ಅಶ್ವತ್ಥಾಮನು ಅಭಿಮನ್ಯು ಉಡುಗೊರೆಯಾಗಿ ಕೊಟ್ಟ ಖಡ್ಗವನ್ನು ಸಾಗರದಂಡೆಯ ಮರಳಲ್ಲಿ ಹೂತು, ಅದರ ಮೇಲೆ ಹಾರಿ ಬಿದ್ದು ಅಸುನೀಗಿರುತ್ತಾನೆ.

ಡಿ.ಎಸ್.ನಾಗಭೂಷಣ ಅವರ 'ಕಸ್ತೂರಿರಂಗನ್ ವರದಿ ಮತ್ತು ಜನತಂತ್ರ ವ್ಯವಸ್ಥೆ' ಎಂಬ ಲೇಖನವನ್ನು (ಪ್ರ.ವಾ., ಡಿ. 7) ಓದಿದಾಗ ನನಗೆ ಅಶ್ವತ್ಥಾಮನ ದುರಂತ ಅಂತ್ಯ ನೆನಪಾಯಿತು. ಪ್ರಸ್ತುತ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ನಮ್ಮ ಜನತಂತ್ರವು ಅಶ್ವತ್ಥಾಮನಂತೆ ಸ್ವತಃ ದುರಂತವನ್ನು ತಂದುಕೊಳ್ಳುತ್ತಿದೆ ಎನಿಸಿತು. ಅಪೂರ್ವ ಜೈವಿಕ ಕೇಂದ್ರಗಳಲ್ಲಿ ಒಂದಾದ ಪಶ್ಚಿಮ ಘಟ್ಟದ ನಿಬಿಡಾರಣ್ಯಕ್ಕೆ ಹಾನಿ ತಟ್ಟಿದರೆ ಇಡೀ ದಕ್ಷಿಣಾಪಥ ಮರುಭೂಮಿಯಾಗುತ್ತದೆ ಎಂಬುದು ಸೂರ್ಯಸತ್ಯ. ಕಳೆದ ಎರಡು ಮೂರು ವರ್ಷಗಳಿಂದ ಕಾಡುತ್ತಿರುವ ಪ್ರಾಕೃತಿಕ ವಿಕೋಪಗಳು, ಅತಿವೃಷ್ಟಿ-ಅನಾವೃಷ್ಟಿ, ಏರುತ್ತಿರುವ ತಾಪಮಾನ, ಕಾಡುತ್ತಿರುವ ಕೊರೊನಾ ಪಿಡುಗು... ಎಲ್ಲಕ್ಕೂ ಅಭಿವೃದ್ಧಿಯ ನೆಪದಲ್ಲಿ ಪಶ್ಚಿಮ ಘಟ್ಟಕ್ಕೆ ನಾವು ಮಾಡುತ್ತಿರುವ ಹಾನಿಯೇ ಕಾರಣ.

ಈ ಕುರಿತು ಪರಿಸರ ವಿಜ್ಞಾನಿಗಳ ಎಚ್ಚರಿಕೆಯ ಕೂಗು ಅರಣ್ಯರೋದನವಾಗುತ್ತಿದೆ. ತೀವ್ರ ಮಳೆ ಸುರಿದಾಗ, ಗುಡ್ಡಗಳು ಕುಸಿದಾಗ, ಪ್ರವಾಹವು ಜನರ ಬದುಕನ್ನು ಕೊಚ್ಚಿಕೊಂಡು ಹೋದಾಗ, ಕೋವಿಡ್‌ನಿಂದ ಸಾವುಗಳು ಸಾಲುಗಟ್ಟಿದಾಗ ಮಾತ್ರ ಪಶ್ಚಿಮ ಘಟ್ಟ ಸಂರಕ್ಷಣೆಯ ಮಾತು ಕೇಳಿಬರುತ್ತದೆ. ಆಗ ಗಾಡ್ಗೀಳ್ ವರದಿ, ಕಸ್ತೂರಿ ರಂಗನ್ ವರದಿ ಎಲ್ಲವೂ ನೆನಪಾಗುತ್ತವೆ. ಉಳಿದಂತೆ ಯಥಾಪ್ರಕಾರ ಅಭಿವೃದ್ಧಿಗಾಗಿ ಅಗೆತ, ಲಂಚ, ಭ್ರಷ್ಟಾಚಾರ ಎಲ್ಲವೂ ಎಂದಿನಂತೆ ನಡೆಯುತ್ತವೆ. ಗಾಡ್ಗೀಳ್ ವರದಿಯನ್ನು ಪಕ್ಕಕ್ಕಿಟ್ಟದ್ದಲ್ಲದೆ ಈಗ ಕಸ್ತೂರಿರಂಗನ್ ವರದಿಯನ್ನೂ ತಿರಸ್ಕರಿಸಲು ಮುಂದಾಗಿರುವ ಸರ್ಕಾರದ ನಡೆಗೆ ಏನೆನ್ನಬೇಕೋ ತಿಳಿಯದು. ತನ್ನನ್ನು ತಾನೇ ಕೊಂದುಕೊಳ್ಳಲು ಹೊರಟ ಅಶ್ವತ್ಥಾಮನ ಅವಿವೇಕದ ನಡೆ ಇದಲ್ಲವೇ ಎಂದರೆ ಸರಿಹೋದೀತು.

ಪ್ರೊ. ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗಣ್ಯರು, ಅತಿಗಣ್ಯ ವ್ಯಕ್ತಿಗಳ ಸಂಚಾರಕ್ಕೆ ಸೇನಾ ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತದೆ. ಪೈಲಟ್ ಅಜಾಗರೂಕತೆ, ಪ್ರತಿಕೂಲ ಹವಾಮಾನ ಮೊದಲಾದ ಕಾರಣದಿಂದ ಕಾಪ್ಟರ್‌ಗಳು ಅಪಘಾತಕ್ಕೀಡಾಗುತ್ತವೆ. ವೈ.ಎಸ್. ರಾಜಶೇಖರ ರೆಡ್ಡಿ, ದೋರ್ಜಿ ಖಂಡು, ಸಂಜಯ್ ಗಾಂಧಿ, ಮಾಧವರಾವ್ ಸಿಂಧಿಯಾ, ಜಿಎಂಸಿ ಬಾಲಯೋಗಿ, ಒ.ಪಿ. ಜಿಂದಾಲ್, ಎಸ್. ಮೋಹನ್ ಕುಮಾರಮಂಗಳಂ, ಸುರೇಂದ್ರ ಸಿಂಗ್, ದೇರಾ ನಟುಂಗ್, ಸಿ. ಸಂಗ್ಮಾ ಮೊದಲಾದ ಗಣ್ಯರು ಹೆಲಿಕಾಪ್ಟರ್ ಅಪಘಾತಕ್ಕೆ ಬಲಿಯಾಗಿದ್ದಾರೆ. ಹಲವರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.


ಜೀವಕ್ಕೆ ಎರವಾದ ಹೆಲಿಕಾಪ್ಟರ್ ಪಯಣ

ದೋರ್ಜಿ ಖಂಡು



2011ರಲ್ಲಿ, ಅರುಣಾಚಲ ಪ್ರದೇಶದ ಅಂದಿನ ಮುಖ್ಯಮಂತ್ರಿ ದೋರ್ಜಿ ಖಂಡು ಅವರು ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿದ್ದರು. ತವಾಂಗ್‌ನಿಂದ ಹೊರಟಿದ್ದ ಅವರಿದ್ದ ಹೆಲಿಕಾಪ್ಟರ್ ನಾಪತ್ತೆಯಾಗಿತ್ತು. ನಂತರ, ಗುಡ್ಡಗಾಡು ಪ್ರದೇಶದಲ್ಲಿ, ಹವಾಮಾನ ವೈಪರೀತ್ಯದಿಂದ ಅದು ಪತನಗೊಂಡಿರುವುದು ದೃಢಪಟ್ಟಿತ್ತು. ಅವರ ಜತೆಗಿದ್ದ ಇತರ ನಾಲ್ವರೂ ಮೃತಪಟ್ಟಿದ್ದರು. ಪವನ್ ಹನ್ಸ್ ಸಂಸ್ಥೆಯ ಏಕ ಎಂಜಿನ್‌ನ ಯುರೋಕಾಪ್ಟರ್ ಬಿ8 ಹೆಲಿಕಾಪ್ಟರ್‌ನ ಅವಶೇಷಗಳು ಲೊಬೊತಾಂಗ್ ಪ್ರದೇಶದ ಕೇಲಾ ಎಂಬಲ್ಲಿ ಪತ್ತೆಯಾಗಿದ್ದವು.

ವೈಎಸ್‌ಆರ್ ರೆಡ್ಡಿ



2009ರ ಸೆಪ್ಟೆಂಬರ್‌ನಲ್ಲಿ, ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿ ಅವರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ನಲ್ಲಮಲ್ಲ ಅರಣ್ಯದಲ್ಲಿ ಪತನವಾಗಿತ್ತು. ಚಿತ್ತೂರಿಗೆ ತೆರಳುತ್ತಿದ್ದ ಅವರ ಕಾಪ್ಟರ್ ನಾಪತ್ತೆಯಾಗಿತ್ತು. ದುರ್ಗಮ ಅರಣ್ಯದಲ್ಲಿ 27 ಗಂಟೆಗಳ ಶೋಧದ ಬಳಿಕ ಅವರ ಮೃತದೇಹ ಪತ್ತೆಯಾಗಿತ್ತು. ವೈಎಸ್‌ಆರ್ ಎಂದೇ ಹೆಸರಾಗಿದ್ದ ಹಿರಿಯ ಕಾಂಗ್ರೆಸ್ ನಾಯಕ ರೆಡ್ಡಿ ಅವರ ನಿಧನಾನಂತರ ರಾಜ್ಯದಲ್ಲಿ ಪಕ್ಷ ಹಿನ್ನಡೆ ಅನುಭವಿಸಿತು. ಅವರ ಪುತ್ರ ವೈಎಸ್ ಜಗನ್‌ಮೋಹನ್ ರೆಡ್ಡಿ ಅವರು ಹೊಸ ಪಕ್ಷ ಪಟ್ಟಿದರು. ಜಗನ್ ಈಗ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದಾರೆ.

ಸಂಜಯ್ ಗಾಂಧಿ



1980ರಲ್ಲಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಮಗ ಸಂಜಯ್ ಗಾಂಧಿ ಅವರು ಪ್ರಯಾಣಿಸುತ್ತಿದ್ದ ಗ್ಲೈಡರ್ ಅಘಾತಕ್ಕೀಡಾಗಿತ್ತು. ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣದಿಂದ ಹೊರಟ ಅದು, ನಿಯಂತ್ರಣ ತಪ್ಪಿ ಪತನವಾಯಿತು. ಸಂಜಯ್ ಗಾಂಧಿ ಅವರ ತಲೆಗೆ ಬಲವಾದ ಏಟು ಬಿದ್ದಿತ್ತು. ವಿಮಾನ ಚಾಲನೆಯಲ್ಲಿ ಸಂಜಯ್ ಅವರಿಗೆ ಸಾಕಷ್ಟು ಅನುಭವ ಇರಲಿಲ್ಲ ಎಂದು ವರದಿಯಾಗಿತ್ತು.


ಮಾಧವರಾವ್ ಸಿಂಧಿಯಾ



2001ರಲ್ಲಿ, ಕಾಂಗ್ರೆಸ್‌ನ ಹಿರಿಯ ಮುಖಂಡ ಮಾಧವರಾವ್ ಸಿಂಧಿಯಾ ಅವರು ಪ್ರಯಾಣಿಸುತ್ತಿದ್ದ 10 ಸೀಟರ್‌ನ ಸೆಸ್ನಾ ಸಿ-90 ವಿಮಾನವು ಉತ್ತರ ಪ್ರದೇಶದ ಕಾನ್ಪುರಕ್ಕೆ ತೆರಳುವ ಮಾರ್ಗಮಧ್ಯೆ ದುರಂತಕ್ಕೀಡಾಯಿತು. ಸಿಂಧಿಯಾ ಅವರ ಜೊತೆಗಿದ್ದ ಇತರ ಆರು ಜನರೂ ಬಲಿಯಾದರು. ಅವರು ಚುನಾವಣಾ ಪ್ರಚಾರ ಸಭೆಗೆ ತೆರಳುತ್ತಿದ್ದರು. ದುರಂತಕ್ಕೆ ಮೇಘಸ್ಫೋಟ ಹಾಗೂ ಹವಾಮಾನ ವೈಪರೀತ್ಯ ಕಾರಣ ಇರಬಹುದು ಎನ್ನಲಾಗಿತ್ತು.

- 1963ರಲ್ಲಿ ಲೆಫ್ಟಿನೆಂಟ್ ಜನರಲ್ ಬಿಕ್ರಂ ಸಿಂಗ್ ಮತ್ತು ಏರ್ ವೈಸ್ ಮಾರ್ಷಲ್ ಎರ್ಲಿಕ್ ಪಿಂಟೊ ಅವರನ್ನು ಹೆಲಿಕಾಪ್ಟರ್ ದುರಂತ ಬಲಿ ಪಡೆದಿತ್ತು
- ಭಾರತೀಯ ಸೇನೆಯ ಪೂರ್ವ ಕಮಾಂಡ್‌ನ ಲೆ.ಜ. ಜಮೀಲ್ ಮೊಹಮ್ಮದ್ ಅವರು 1993ರಲ್ಲಿ ಭೂತಾನ್‌ನಲ್ಲಿ ನಡೆದ ಹೆಲಿಕಾಪ್ಟರ್ ಅಪಘಾತದಲ್ಲಿ ಅಸುನೀಗಿದ್ದರು. ಜತೆಗಿದ್ದ ಅವರ ಪತ್ನಿಯೂ ಮೃತಪಟ್ಟಿದ್ದರು.
- ಕಾಂಗ್ರೆಸ್ ಮುಖಂಡ ಮೋಹನ್ ಕುಮಾರಮಂಗಳಂ ಅವರು 1973ರಲ್ಲಿ ದೆಹಲಿ ಸಮೀಪ ವಿಮಾನ ಅಪಘಾತಕ್ಕೆ ಬಲಿಯಾಗಿದ್ದರು
- ಅರುಣಾಚಲ ಪ್ರದೇಶದ ಶಿಕ್ಷಣ ಸಚಿವ ನಟುಂಗ್ ಅವರಿದ್ದ ಹೆಲಿಕಾಪ್ಟರ್ 2001ರಲ್ಲಿ ಪತನವಾಯಿತು
- ಮೇಘಾಲಯ ಸರ್ಕಾರದ ಸಚಿವ ಸಂಗ್ಮಾ, ಮೂವರು ಶಾಸಕರು ಮತ್ತು ಇತರ ಆರು ಜನರು 2004ರ ಸೆಪ್ಟೆಂಬರ್‌ನಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೆ ಬಲಿಯಾದರು.
- ಪಂಜಾಬ್ ರಾಜ್ಯಪಾಲ ಸುರೇಂದ್ರನಾಥ್ ಮತ್ತು ಇತರ 9 ಜನರು ಪ್ರಯಾಣಿಸುತ್ತಿದ್ದ ಸೂಪರ್‌ಕಿಂಗ್ ಏರ್‌ಕ್ರಾಫ್ಟ್ 1994ರಲ್ಲಿ ಹಿಮಾಚಲ ಪ್ರದೇಶದಲ್ಲಿ ಪತನವಾಯಿತು. ಹವಾಮಾನ ವೈಪರೀತ್ಯದಿಂದ ದುರಂತ ಸಂಭವಿಸಿತ್ತು

ಬಾಲಯೋಗಿ



ಲೋಕಸಭೆಯ ಸ್ಪೀಕರ್ ಆಗಿದ್ದ ತೆಲುಗುದೇಶಂ ಪಕ್ಷದ ಜಿ.ಎಂ.ಸಿ. ಬಾಲಯೋಗಿ ಅವರು 2002ರ ಮಾರ್ಚ್‌ನಲ್ಲಿ ಹೆಲಿಕಾಪ್ಟರ್ ಅಪಘಾತಕ್ಕೆ ಬಲಿಯಾದರು. ಬೆಲ್ 206 ಬಿ3 ಹೆಲಿಕಾಪ್ಟರ್ ಆಂಧ್ರದಲ್ಲಿ ಪತನವಾಯಿತು. ಪಶ್ಚಿಮ ಗೋದಾವರಿಯಿಂದ ಹೊರಟಿದ್ದ ಕಾಪ್ಟರ್ ಅನ್ನು ಡೆಕ್ಕನ್ ಏವಿಯೇಷನ್‌ನ ಕೆ.ವಿ. ಮೆನನ್ ಅವರು ಚಲಾಯಿಸುತ್ತಿದ್ದರು. ಪೈಲಟ್ ಅಜಾಗರೂಕತೆಯಿಂದ ದುರಂತ ಸಂಭವಿಸಿದೆ ಎಂದು ವರದಿಯಾಗಿತ್ತು. ಪ್ರತಿಕೂಲ ಹವಾಮಾನದ ಕಾರಣ, ತಕ್ಷಣವೇ ಕಾಪ್ಟರ್ ಲ್ಯಾಂಡ್ ಮಾಡಲು ಪೈಲಟ್ ನಿರ್ಧರಿಸಿದ್ದರು. ಆದರೆ ಗಟ್ಟಿ ನೆಲದ ಮೇಲ್ಮೈ ಎಂದು ಭಾವಿಸಿ, ಕೊಳದ ಮೇಲೆ ಲ್ಯಾಂಡ್ ಮಾಡಲು ಮುಂದಾಗಿದ್ದರು. ಕೊನೆಯ ಕ್ಷಣದಲ್ಲಿ ಅವರಿಗೆ ಲ್ಯಾಂಡ್ ಮಾಡುವುದನ್ನು ತಪ್ಪಿಸಲು ಆಗಲಿಲ್ಲ ಎಂದು ವಿಮಾನಯಾನ ಸಚಿವಾಲಯಕ್ಕೆ ಸಲ್ಲಿಕೆಯಾದ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಒ.ಪಿ. ಜಿಂದಾಲ್, ಸುರೇಂದ್ರ ಸಿಂಗ್

ಹರಿಯಾಣದ ಅಂದಿನ ಇಂಧನ ಸಚಿವ ಹಾಗೂ ಪ್ರಸಿದ್ಧ ಉದ್ಯಮಿ ಒ.ಪಿ. ಜಿಂದಾಲ್ ಹಾಗೂ ಕೃಷಿ ಸಚಿವ ಸುರೇಂದ್ರ ಸಿಂಗ್ ಅವರು 2005ರ ಮಾರ್ಚ್ 31ರಂದು ಹೆಲಿಕಾಪ್ಟರ್ ಅಪಘಾತಕ್ಕೆ ಬಲಿಯಾದರು. ಉತ್ತರ ಪ್ರದೇಶದ ಸಹರನ್‌ಪುರ ಸಮೀಪ ತಾಂತ್ರಿಕ ತೊಂದರೆಯಿಂದ ಕಾಪ್ಟರ್ ಪತನವಾಯಿತು.

ಪವಾಡದಂತೆ ಪಾರಾದರು

ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು, 1977ರಲ್ಲಿ ಅಸ್ಸಾಂನಲ್ಲಿ ನಡೆದ ವಿಮಾನ ಅಪಘಾತದಲ್ಲಿ ಪವಾಡವೆಂಬಂತೆ ಬದುಕುಳಿದಿದ್ದರು. ಅವರ ಜೊತೆ ಪ್ರಯಾಣಿಸುತ್ತಿದ್ದ ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪಿ.ಕೆ. ತುಂಗನ್ ಅವರಿಗೂ ಜೀವದಾನ ಸಿಕ್ಕಿತ್ತು.

ಕಾಂಗ್ರೆಸ್ ಮುಖಂಡ ಅಹ್ಮದ್ ಪಟೇಲ್, ಪೃಥ್ವಿರಾಜ್ ಚೌಹಾಣ್, ಕುಮಾರಿ ಶೆಲ್ಜಾ ಅವರೂ ಸಹ 2004ರಲ್ಲಿ ಗುಜರಾತ್‌ನಲ್ಲಿ ನಡೆದ ಅಪಘಾತದಲ್ಲಿ ಅಚ್ಚರಿ ರೀತಿಯಲ್ಲಿ ಬದುಕುಳಿದಿದ್ದರು. ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಸಚಿವರಾದ ಪ್ರತಾಪ್ ಸಿಂಗ್ ಬಾಜ್ವಾ ಅವರು 2006ರಲ್ಲಿ ಗುರುದಾಸ್‌ಪುರದಿಂದ ಹೊರಟ ಕೆಲ ಸಮಯದಲ್ಲಿ, ಅವರಿದ್ದ ಹೆಲಿಕಾಪ್ಟರ್ ವಿದ್ಯುತ್ ಕಂಬಕ್ಕೆ ತಾಗಿತ್ತು. ಸುಖ್‌ಬೀರ್ ಸಿಂಗ್ ಬಾದಲ್, ರಾಜನಾಥ್ ಸಿಂಗ್, ಮುಕ್ತಾರ್ ಅಬ್ಬಾಸ್ ನಖ್ವಿ, ಅಶೋಕ್ ಗೆಹಲೋತ್ ಅವರೂ ದುರಂತದಿಂದ ಪಾರಾಗಿದ್ದಾರೆ.

ಹೆಚ್ಚು ಸುರಕ್ಷತಾ ಸೌಲಭ್ಯಗಳ ಚಾಪರ್

ಎಂಐ–17ವಿ5

675 ಕಿ.ಮೀ
ಮುಖ್ಯ ಇಂಧನ ಟ್ಯಾಂಕ್ ಮಾತ್ರ ಇದ್ದಾಗ, ಅದು ಖಾಲಿಯಾಗುವವರೆಗೆ ಕ್ರಮಿಸಬಹುದಾದ ಗರಿಷ್ಠ ದೂರ

1,180 ಕಿ.ಮೀ
ಮುಖ್ಯ ಇಂಧನ ಟ್ಯಾಂಕ್ ಹೊರತುಪಡಿಸಿ ಎರಡು ಹೆಚ್ಚುವರಿ ಬಾಹ್ಯ ಇಂಧನ ಟ್ಯಾಂಕ್‌ಗಳು ಇದ್ದಾಗ, ಇಂಧನ ಖಾಲಿಯಾಗುವವರೆಗೆ ಕ್ರಮಿಸಬಹುದಾದ ಗರಿಷ್ಠ ದೂರ

6,000 ಮೀಟರ್
ಗರಿಷ್ಠ ಹಾರಾಟದ ಎತ್ತರ

4 ಹೆಚ್ಚುವರಿ ಆಂತರಿಕ ಇಂಧನ ಟ್ಯಾಂಕ್‌ಗಳ ಅಳವಡಿಕೆಗೆ ಅವಕಾಶವಿದೆ

2012 ರಿಂದ
ಎಂಐ–17ವಿ5 ಹೆಲಿಕಾಪ್ಟರ್ ಭಾರತೀಯ ವಾಯುಪಡೆಯ ಸೇವೆಯಲ್ಲಿದೆ



ಎಂಐ–17ವಿ5 ಹೆಲಿಕಾಪ್ಟರ್‌ನ ಮೂಲ ಮಾದರಿ
ಚಿತ್ರ ಕೃಪೆ: ರಷ್ಯನ್ ಹೆಲಿಕಾಪ್ಟರ್ಸ್

ತಾಂತ್ರಿಕ ವಿವರ

- ಈ ಹೆಲಿಕಾಪ್ಟರ್ ಗಂಟೆಗೆ ಗರಿಷ್ಠ 250 ಕಿ.ಮೀ. ವೇಗದಲ್ಲಿ ಹಾರಾಟ ನಡೆಸುತ್ತದೆ. ಇದರಲ್ಲಿ ಅತ್ಯಾಧುನಿಕ ಟಿವಿ3-117ವಿಎಂ ಅವಳಿ ಎಂಜಿನ್ ಅಳವಡಿಸಲಾಗಿದೆ
- 13,000 ಕೆ.ಜಿ. ನಿವ್ವಳ ತೂಕವನ್ನು ಹೊತ್ತು ಸಂಚರಿಸಬಲ್ಲ ಸಾಮರ್ಥ್ಯದ್ದಾಗಿದೆ
- ಶಸ್ತ್ರಸಜ್ಜಿತರಾದ 36 ಯೋಧರನ್ನು ಅಥವಾ 4,000 ಕೆ.ಜಿ.ಯಷ್ಟು ಭಾರವನ್ನು ಹೆಲಿಕಾಪ್ಟರ್ ಹೊತ್ತು ಒಯ್ಯುತ್ತದೆ
- ಪಿಕೆವಿ-8 ಆಟೊಪೈಲಟ್ ವ್ಯವಸ್ಥೆ, ಮಾರ್ಗಸೂಚಿ ವ್ಯವಸ್ಥೆ ಮತ್ತು ಎಲೆಕ್ಟ್ರಾನಿಕ್ ಡಿಸ್‌ಪ್ಲೇಗಾಗಿ ಕೆಎನ್‌ಇಐ-8 ಏವಿಯಾನಿಕ್ಸ್ ಸ್ಯೂಟ್ ಅಳವಡಿಸಲಾಗಿದೆ
- ಹೆಲಿಕಾಪ್ಟರ್‌ನ ಕ್ಯಾಬಿನ್ ಒಳಗೆ ಮತ್ತು ಕೆಳಗೆ ತೂಗಾಡುವ ರೀತಿಯಲ್ಲಿ ಸರಕು–ಸಾಮಗ್ರಿಗಳನ್ನು ಹೊತ್ತೊಯ್ಯುತ್ತದೆ. ಇದು, ಜಗತ್ತಿನ ಅತ್ಯಾಧುನಿಕ ಸರಕು ಸಾಗಣೆಯ ಹೆಲಿಕಾಪ್ಟರ್ ಆಗಿದೆ
- ಸೇನಾ ಪಡೆಗಳ ಸಿಬ್ಬಂದಿ ರವಾನೆಗೆ, ಶಸ್ತ್ರಾಸ್ತ್ರಗಳನ್ನು ಸಾಗಿಸಲು, ಅಗ್ನಿ ಅವಘಡಗಳ ತುರ್ತು ಸಂದರ್ಭಗಳಲ್ಲಿ ರಕ್ಷಣೆಗಾಗಿ, ಭದ್ರತೆ ಮತ್ತು ಗಸ್ತು ತಿರುಗಲು ಹಾಗೂ ರಕ್ಷಣೆ ಮತ್ತು ಶೋಧ ಕಾರ್ಯಾಚರಣೆಗಳಿಗಾಗಿ ಈ ಹೆಲಿಕಾಪ್ಟರ್ ಬಳಕೆ ಮಾಡಬಹುದಾಗಿದೆ

ಭಾರತೀಯ ವಾಯುಪಡೆಯಲ್ಲಿ (ಐಎಎಫ್) ಅತ್ಯಾಧುನಿಕ ಎಂಐ–17ವಿ5 ಹೆಲಿಕಾಪ್ಟರ್‌ಗಳನ್ನು 2012ರಿಂದ ಬಳಸಲಾಗುತ್ತಿದೆ. ರಾತ್ರಿ ಸಂಚಾರಕ್ಕೆ ಸಹಕಾರಿಯಾಗಬಹುದಾದ 'ನೈಟ್ ವಿಷನ್' ವ್ಯವಸ್ಥೆ ಹಾಗೂ ವಾತಾವರಣದ ಕುರಿತು ಮಾಹಿತಿ ಪಡೆಯುವ ವೆದರ್ ರೇಡಾರ್ ಅನ್ನು ಈ ಹೆಲಿಕಾಪ್ಟರ್ ಒಳಗೊಂಡಿದೆ. ಈ ಹೆಲಿಕಾಪ್ಟರ್ ತನ್ನ ವರ್ಗದಲ್ಲೇ ಅತ್ಯಾಧುನಿಕವಾದ ಸುರಕ್ಷತಾ ಸವಲತ್ತುಗಳನ್ನು ಹೊಂದಿದೆ.

ರಷ್ಯನ್ ಹೆಲಿಕಾಪ್ಟರ್ ಕಂಪನಿಯ ಸಹಕಂಪನಿ ಕಜಾನ್ ಹೆಲಿಕಾಪ್ಟರ್ ಎಂಐ–17ವಿ5 ಹೆಲಿಕಾಪ್ಟರ್ ಅನ್ನು ಅಭಿವೃದ್ಧಿಪಡಿಸಿ, ತಯಾರಿಸುತ್ತಿದೆ. ಎಂಐ–17ವಿ5 ಹೆಲಿಕಾಪ್ಟರ್, 1970ರಲ್ಲಿ ಮಾರುಕಟ್ಟೆಗೆ ಬಂದ ಎಂಐ-/17 ಹೆಲಿಕಾಪ್ಟರ್‌ನ ಸುಧಾರಿತ ರೂಪ. ಈ ಸರಣಿಯ ಅತ್ಯಾಧುನಿಕ ಎಂಐ–17ವಿ5 ಹೆಲಿಕಾಪ್ಟರ್ ಅನ್ನು ಖರೀದಿಸಲು ಭಾರತವು 2008ರಲ್ಲಿ ರಷ್ಯಾ ಜತೆಗೆ ಒಪ್ಪಂದ ಮಾಡಿಕೊಂಡಿತ್ತು. ಆರಂಭದಲ್ಲಿ 80 ಹೆಲಿಕಾಪ್ಟರ್‌ಗಳನ್ನಷ್ಟೇ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ನಂತರದ ದಿನಗಳಲ್ಲಿ ಅವುಗಳ ಸಂಖ್ಯೆಯನ್ನು 151ಕ್ಕೆ ಏರಿಸಲಾಗಿತ್ತು. 2011ರ ಸೆಪ್ಟೆಂಬರ್‌ನಲ್ಲಿ ಮೊದಲ ಬ್ಯಾಚ್‌ನ ಹೆಲಿಕಾಪ್ಟರ್‌ಗಳು ದೇಶಕ್ಕೆ ಬಂದಿಳಿದವು. 2012ರಲ್ಲಿ ಇವನ್ನು ವಾಯುಪಡೆಯ ಬಳಕೆಗೆ ನಿಯೋಜನೆ ಮಾಡಲಾಯಿತು.

ಕಜಾನ್ ತಯಾರಿಕೆಯ ಎಂಐ–17ವಿ5 ಹೆಲಿಕಾಪ್ಟರ್‌ನಲ್ಲಿ ಇರುವ ಎಲ್ಲಾ ಸವಲತ್ತು ಮತ್ತು ಸಲಕರಣೆಗಳನ್ನು ಭಾರತಕ್ಕೆ ಪೂರೈಕೆಯಾದ ಹೆಲಿಕಾಪ್ಟರ್‌ಗಳಲ್ಲೂ ಉಳಿಸಿಕೊಳ್ಳಲಾಗಿತ್ತು. ಇವನ್ನು ಸಿಬ್ಬಂದಿ, ಸರಕು ಮತ್ತು ಸಾಮಗ್ರಿಗಳನ್ನು ರವಾನಿಸಲು ಉಪಯೋಗಿಸಲಾಗುತ್ತಿದೆ. ಇದರೊಂದಿಗೆ ನೆಲದ ಮೇಲಿನ ಗುರಿಯನ್ನು ಧ್ವಂಸ ಮಾಡಲು, ಗಾಯಾಳುಗಳನ್ನು ಸಾಗಿಸಲು, ಆಕಾಶ ಮಾರ್ಗದಿಂದಲೇ ಸೇನಾ ಸಿಬ್ಬಂದಿಯನ್ನು ಕೆಳಗಿಳಿಸಲು ಸೇರಿದಂತೆ ವಿಶೇಷ ಕಾರ್ಯಾಚರಣೆಗಳಲ್ಲಿ ಈ ಹೆಲಿಕಾಪ್ಟರ್‌ಗಳನ್ನು ಬಳಸಬಹುದಾಗಿದೆ.

ಆಧಾರ: ಪಿಟಿಐ, ರಷ್ಯನ್ ಹೆಲಿಕಾಪ್ಟರ್ಸ್, ಕಜಾನ್ ಹೆಲಿಕಾಪ್ಟರ್ಸ್

ರಕ್ಷಣಾ ವ್ಯವಸ್ಥೆ

- ಹೆಲಿಕಾಪ್ಟರ್‌ನ ಕಾಕ್‌ಪಿಟ್ ಮತ್ತು ಪ್ರಮುಖ ಸಾಧನಗಳಿಗೆ ಶಸ್ತ್ರಾಸ್ತ್ರಗಳಿಂದ ರಕ್ಷಣೆಗೆ ಕವಚದ ಸುರಕ್ಷತೆ ಇದೆ. ಹೆಲಿಕಾಪ್ಟರ್‌ಗೆ ಮೆಷಿನ್ ಗನ್ ಅಳವಡಿಸಲೂ ಅವಕಾಶವಿದೆ
- ಸ್ಫೋಟದಿಂದ ರಕ್ಷಣೆ ಪಡೆಯಲು, ಇಂಧನ ಟ್ಯಾಂಕ್‌ಗಳಿಗೆ ಪಾಲಿಯುರೇಥಿನ್ ಫೋಮ್‌ನಿಂದ ಸೀಲ್ ಮಾಡಲಾಗಿದೆ
- ಹೆಲಿಕಾಪ್ಟರ್‌ನಲ್ಲಿ ಸ್ಟೋಮ್- ವಿ ಕ್ಷಿಪಣಿಗಳು, ಎಸ್–8 ರಾಕೆಟ್‌ಗಳು, ಒಂದು 23ಎಂಎಂ ಮೆಷಿನ್ ಗನ್, ಪಿಕೆಟಿ ಮೆಷಿನ್ ಗನ್‌ಗಳು, ಎಕೆಎಂ ಸಬ್–ಮೆಷಿನ್ ಗನ್‌ಗಳನ್ನು ಅಳವಡಿಸಬಹುದು. ಗನ್‌ಗಳನ್ನು ಗುರಿಯಿಡಲು ಎಂಟು ಕಡೆ ವ್ಯವಸ್ಥೆ ಇದೆ

ಹಲವು ಅಪಘಾತಗಳು

- 2012ರ ಆಗಸ್ಟ್ 30ರಂದು ಗುಜರಾತ್‌ನ ಜಾಮ್‌ನಗರ ವಾಯುನೆಲೆಯ ಸಮೀಪ ಎರಡು ಎಂಐ–17ವಿ5 ಹೆಲಿಕಾಪ್ಟರ್‌ಗಳು ಮುಖಾಮುಖಿಯಾಗಿ ಡಿಕ್ಕಿಯಾದ ಕಾರಣ 9 ಸೈನಿಕರು ಮೃತಪಟ್ಟಿದ್ದರು
- 2013ರ ಜೂನ್ 15ರಂದು ಉತ್ತರಾಖಂಡದ ಕೇದಾರನಾಥ ಪ್ರದೇಶದಲ್ಲಿ ಪ್ರವಾಹದ ನೀರಿನಲ್ಲಿ ಸಿಲುಕಿದ್ದವರನ್ನು ಏರ್‌ಲಿಫ್ಟ್ ಮಾಡುತ್ತಿದ್ದಾಗ ಎಂಐ–17ವಿ5 ಹೆಲಿಕಾಪ್ಟರ್ ಪತನವಾಗಿತ್ತು. 8 ಜನರು ಮೃತಪಟ್ಟಿದ್ದರು
- 2017ರ ಅಕ್ಟೋಬರ್ 7ರಂದು ಅರುಣಾಚಲ ಪ್ರದೇಶದ ತವಾಂಗ್ ಬಳಿ ಇದೇ ಮಾದರಿಯ ಹೆಲಿಕಾಪ್ಟರ್ ಪತನವಾಗಿತ್ತು. ಏಳು ಸೈನಿಕರು ಮೃತಪಟ್ಟಿದ್ದರು
- 2018ರ ಏಪ್ರಿಲ್ 3ರಂದು ಉತ್ತರಾಖಂಡದ ಕೇದಾರನಾಥದ ಬಳಿ ಇದೇ ಮಾದರಿಯ ಹೆಲಿಕಾಪ್ಟರ್ ಪತನವಾಗಿತ್ತು. ಆದರೆ ಅದರಲ್ಲಿದ್ದ ಆರೂ ಜನರಿಗೆ ಯಾವುದೇ ಗಾಯಗಳಾಗದೆ ಬಚಾವಾಗಿದ್ದರು
- 2021ರ ನವೆಂಬರ್ 8ರಂದು ಅರುಣಾಚಲ ಪ್ರದೇಶದಲ್ಲಿ ಎಂಐ–17ವಿ5 ಹೆಲಿಕಾಪ್ಟರ್ ಪತನವಾಗಿತ್ತು. ಅದರಲ್ಲಿದ್ದ ಐದು ಮಂದಿಗೆ ಸಣ್ಣ ಪ್ರಮಾಣದ ಗಾಯಗಳಾಗಿದ್ದವು

ಬೆರಗಿನ ಬೆಳಕು

ಗುರುರಾಜ ಕರಜಗಿ

ಸತ್ಯದ ಸ್ವರೂಪ

ಎನ್ನ ಬೇಡಿಕೆ ನಷ್ಟವಹುದೆಂತು ದೇವನಿರೆ?|
ಅನ್ಯಾಯ ಜಗವೆಲ್ಲ; ದೇವನಿರನೆನುತ ||
ತನ್ನ ತನ್ನನುಭವದ ನಂಬಲೋರೊರ್ವನುಂ |
ಭಿನ್ನವಾಗದೆ ಸತ್ಯ ? – ಮಂಕುತಿಮ್ಮ || 519 ||

ಪದ-ಅರ್ಥ: ನಷ್ಟವಹುದೆಂತು = ನಷ್ಟವಹುದು- + ಎಂತು, ದೇವನಿರೆ = ದೇವನು + ಇರೆ(ಇದ್ದರೆ), ದೇವನಿರನೆನುತ = ದೇವನು + ಇರನು + ಎನುತ, ನಂಬಲೋರೊರ್ವನುಂ = ನಂಬಲು + ಓರೊರ್ವ-ನುಂ(ಪ್ರತಿಯೊಬ್ಬನೂ)


ವಾಚ್ಯಾರ್ಥ: ದೇವನೊಬ್ಬನಿದ್ದರೆ ನನ್ನ ಬೇಡಿಕೆಗಳೆಲ್ಲ ಏಕೆ ಈಡೇರುವುದಿಲ್ಲ? ಈ ಜಗತ್ತೆಲ್ಲ ಬರೀ ಅನ್ಯಾಯವೇ. ದೇವರಿಲ್ಲ ಎಂದು ಪ್ರತಿಯೊಬ್ಬನೂ ತನ್ನ ಅನುಭವಗಳನ್ನು ನಂಬುತ್ತಿದ್ದರೆ ಸತ್ಯವೇ ಬೇರೆ-ಬೇರೆಯಾಯಿತಲ್ಲ?

ವಿವರಣೆ: ಕ್ಷೌರಿಕ ಗಿರಾಕಿಯೊಬ್ಬನ ತಲೆಗೂದಲನ್ನು ಕತ್ತರಿಸುತ್ತಿದ್ದ. ಅವನಿಗೆ ಮಾತನಾಡದೆ ಇರುವುದೇ ಸಾಧ್ಯವಿಲ್ಲ. ಒಂದೇ ಸಮನೆ ತನಗೆ ತಿಳಿದ, ತಿಳಿಯದ ವಿಷಯಗಳ ಬಗ್ಗೆ ಮಾತನಾಡುತ್ತಿದ್ದ. ‘ಸ್ವಾಮಿ, ನೀವು ಏನೇ ಹೇಳಿ, ಜಗತ್ತಿನಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ನೋಡುತ್ತಿದ್ದರೆ, ದೇವರಿಲ್ಲ. ಅವನೊಬ್ಬನಿದ್ದರೆ ಪ್ರಪಂಚ ಹೀಗೇಕೆ ಆಗುತ್ತಿತ್ತು? ನನಗೆ ಈಗ ಖಚಿತವಾಗಿದೆ. ದೇವರಿಲ್ಲ’. ಗಿರಾಕಿ ತನ್ನ ತಲೆಯನ್ನು ಅವನಿಗೆ ಒಪ್ಪಿಸಿದ್ದರಿಂದ ಮಾತನಾಡದೆ ಕೇಳಿಸಿಕೊಳ್ಳುತ್ತಿದ್ದ. ಕ್ಷೌರ ಮುಗಿಯಿತು. ಗಿರಾಕಿ ದುಡ್ಡು ಕೊಟ್ಟು ಹೊರಗೆ ನಡೆದ. ಸ್ವಲ್ಪ ಮುಂದೆ ನಡೆದಾಗ ಅಲ್ಲೊಬ್ಬ ಭಿಕ್ಷುಕ ಕಂಡ. ಅವನ ತಲೆಯಲ್ಲಿ ಕಾಡಿನಂತೆ ಹರಡಿದ್ದ ಕೂದಲು ರಾಶಿ. ಗಡ್ಡ, ಮೀಸೆಗಳು ವಿಪರೀತ ಬೆಳೆದು ಮುಖವೇ ಕಾಣುತ್ತಿರಲಿಲ್ಲ. ಗಿರಾಕಿ ಅವನನ್ನು ಕರೆದುಕೊಂಡು ಮತ್ತೆ ಕ್ಷೌರಿಕನ ಅಂಗಡಿಗೆ ಬಂದ. ಕ್ಷೌರಿಕನಿಗೆ ಹೇಳಿದ, ‘ನೀವು ಏನೇ ಹೇಳಿ, ಪ್ರಪಂಚದಲ್ಲಿ ಕ್ಷೌರಿಕರೇ ಇಲ್ಲ’. ಕ್ಷೌರಿಕ ಆಶ್ಚರ್ಯದಿಂದ, ‘ಅಲ್ಲ ಸ್ವಾಮಿ, ನಾನೇ ಇದ್ದೀನಲ್ಲ. ಈಗ ತಾನೇ ನಿಮಗೇ ಕ್ಷೌರ ಮಾಡಿ ಕಳುಹಿಸಿದೆ. ಕ್ಷೌರಿಕರೇ ಇಲ್ಲವೆಂದರೆ ಹೇಗೆ?’ ಎಂದು ಕೇಳಿದ. ಆಗ ಗಿರಾಕಿ, ಭಿಕ್ಷುಕನನ್ನು ಮುಂದೆ ತಂದು, ‘ನೋಡಿ, ಇವನ ತಲೆಗೂದಲು, ಗಡ್ಡ, ಮೀಸೆಗಳನ್ನು, ಇವನ ಅವಸ್ಥೆ ಹೀಗಿದ್ದರೆ, ಜಗತ್ತಿನಲ್ಲಿ ಕ್ಷೌರಿಕರೇ ಇಲ್ಲ ಎಂದು ತೋರುವುದಿಲ್ಲವೆ?’ ಎಂದು ಕೇಳಿದ. ಕ್ಷೌರಿಕ ‘ನಿಮ್ಮದು ತಪ್ಪು ಮಾತು. ಅವನು ಇಲ್ಲಿಗೆ ಬಂದರೆ ತಾನೇ ನಾನು ಕ್ಷೌರ ಮಾಡುವುದು? ನನ್ನ ಬಳಿಗೆ ಬರದೇ ಹೋದರೆ ನಾನೇನು ಮಾಡುವುದಕ್ಕಾಗುತ್ತದೆ?’ ಎಂದ. ಗಿರಾಕಿ ಹೇಳಿದ, ‘ಹಾಗೆಯೇ ದೇವರ ಬಳಿ ಹೋಗಿ ಶರಣಾದರೆ ತಾನೇ, ಅವರ ಕಷ್ಟಗಳನ್ನು ದೇವರು ಕೇಳುವುದು? ಅವನು ಇರುವುದನ್ನೇ ಮರೆತು, ಮಲೆತು ತಿರುಗಾಡುವವರನ್ನು ಅವನು ಏನು ಮಾಡಿಯಾನು?’.

ಇವು ಎರಡು ದೃಷ್ಟಿಗಳು. ಇವುಗಳನ್ನು ಸ್ಥೂಲವಾಗಿ ಆಸ್ತಿಕ ಮತ್ತು ನಾಸ್ತಿಕ ದೃಷ್ಟಿಗಳು ಎಂದು ಹೇಳುತ್ತಾರೆ. ಆಸ್ತಿಕರು (ಅಸ್ತಿ = ಅಸ್ತಿತ್ವದಲ್ಲಿದೆ), ಈಶ್ವರನ, ಆತ್ಮದ ಅಸ್ತಿತ್ವವನ್ನು ನಂಬುವವರು. ಅವರು ವೇದಗಳ ಪ್ರಮಾಣವನ್ನು ಒಪ್ಪಿಕೊಳ್ಳುವವರು. ಅದಕ್ಕೆ ವಿರುದ್ಧವಾಗಿ ನಾಸ್ತಿಕರು (ನಾ-ಅಸ್ತಿಕ = ನಾನು ಆಸ್ತಿಕನಲ್ಲ) ಈಶ್ವರನ, ಆತ್ಮದ ಇರುವಿಕೆಯನ್ನು, ವೇದ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ಆಸ್ತಿಕರಲ್ಲಿ ಆರು ಶಾಲೆಗಳು-ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ ಮತ್ತು ವೇದಾಂತ. ವೇದಗಳನ್ನು ತಿರಸ್ಕರಿಸುವ ತತ್ವಶಾಸ್ತ್ರದ ಮುಖ್ಯ ಶಾಲೆಗಳು - ಬೌದ್ಧ, ಜೈನ, ಚಾರ್ವಾಕ, ಜೀವಿಕಾ ಮತ್ತು ಅಜ್ಞಾನ.

ಹೀಗೆಂದರೆ ನಂಬುವವರಲ್ಲಿ ನಂಬದವರಲ್ಲಿ ಅನೇಕ ಪ್ರಕಾರಗಳು. ಅದನ್ನೇ ಕಗ್ಗ ತಿಳಿಸುತ್ತದೆ. ಹೀಗೆ ಪ್ರತಿಯೊಬ್ಬನೂ ತನ್ನ ತನ್ನ ಅನುಭವವೇ ಸತ್ಯ ಎನ್ನುವುದಾದರೆ, ನಿಜವಾದ ಸತ್ಯವಾವುದು? ಸತ್ಯದ ಸ್ವರೂಪವೇ ಅನಿಶ್ಚಿತವಾಗುವುದಿಲ್ಲವೆ ಎಂದು ಚಿಂತನೆಗೆ ಹಚ್ಚುತ್ತದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಡಿಸೆಂಬರ್ 9, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ಷಷ್ಠಿ ಗಂ. 47-10 (ರಾ. 1-28) ಗುರುವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 52-39 (ರಾ. 3-40) ವ್ಯಾಘಾ ನಾಮ ಯೋಗ ಗಂ. 24-46 ಕೌಲವ ಕರಣ ಗಂ. 18-59 ವಿಷ ಗಂ. 4-19 ಅಮೃತ ಗಂ 27-40 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-33 ಸೂರ್ಯಾಸ್ತ: 5-49 ಅದೃಷ್ಟ ಸಂಖ್ಯೆ 3, 7

ಮೇಷ: ರೈತಾಪಿ ವರ್ಗದವರು ಕೆಲಸ ಮಾಡುವಾಗ ನೀರಿನ ವಿಚಾರದಲ್ಲಿ ಜಾಗ್ರತೆ ವಹಿಸುವುದು ಒಳ್ಳೆಯದು. ಮಕ್ಕಳಿಂದ ನೆಮ್ಮದಿ ಹೊಂದುವಿರಿ. ಸಂಗಾತಿಯಿಂದ ಉತ್ತಮ ಸಹಕಾರದಿಂದಾಗಿ ಸಂತೃಪ್ತಿ.

ವೃಷಭ: ಸಹೋದ್ಯೋಗಿಗಳೊಂದಿಗೆ ಸಾಮರಸ್ಯದಿಂದ ಕೆಲಸ ನಿರ್ವಹಣೆಯಿಂದ ನಾಯಕತ್ವ ಪ್ರಾಪ್ತಿ. ಮಹಿಳೆಯರಿಗೆ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವ ಯೋಗ. ಅನಪೇಕ್ಷಿತ ವಿಷಯಗಳಿಂದ ದೂರವಿರುವುದು ಒಳ್ಳೆಯದು.

ಮಿಥುನ: ಸಮುದ್ರದ ದಡದಲ್ಲಿ ಕೆಲಸ ಮಾಡುವವರು ಎಚ್ಚರಿಕೆಯಿಂದಿರುವುದು ಸೂಕ್ತ. ಧಾರ್ಮಿಕ ಸಮಾರಂಭಗಳಲ್ಲಿ ಆಸಕ್ತಿ ವಹಿಸುವಿರಿ. ನೌಕರಸ್ಥರು ಮೇಲಧಿಕಾರಿಗಳಿಂದ ಪ್ರಶಂಸೆಗೆ ಒಳಗಾಗುವರು.

ಕರ್ಕಾಟಕ: ನಿಮ್ಮ ವೈಯಕ್ತಿಕ ವಿಚಾರಗಳನ್ನು ಆತ್ಮೀಯ ಅತಿಥಿಗಳಲ್ಲಿ ಹಂಚಿಕೊಳ್ಳುವುದರಿಂದ ಆಂತರಿಕ ಸಮಸ್ಯೆಗಳಿಗೆ ಪರಿಹಾರ. ಮಹಿಳೆಯರು ರಾಜಕೀಯದಿಂದ ದೂರವಿರುವುದು ಒಳ್ಳೆಯದು.

ಸಿಂಹ: ವಿವೇಚನೆಯಿಂದ ಉದ್ಯೋಗದಲ್ಲಿನ ಸಮಸ್ಯೆಗಳಿಗೆ ಪರಿಹಾರ. ಗೃಹ ನಿರ್ಮಾಣ/ ರಿಪೇರಿ ಕೆಲಸಗಳು ಸುಗಮವಾಗುವವು. ಗೃಹ ಅಲಂಕಾರ ವಸ್ತುಗಳನ್ನು ಖರೀದಿಸುವ ಸಾಧ್ಯತೆ. ಹಿರಿಯರಿಂದ ಬಂದ ಸಲಹೆ ಗೌರವಿಸಿ.

ಕನ್ಯಾ: ದೈನಂದಿನ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಮೂಡುವುದು. ಸರ್ಕಾರದಿಂದ ಆಗಬೇಕಾದ ಕೆಲಸ ಕಾರ್ಯಗಳು ಸುಗಮವಾಗಲಿವೆ. ಸುಖ ಸಾಂಸಾರಿಕ ಜೀವನ ನಿಮ್ಮದಾಗುವುದು. ಸಂಪನ್ಮೂಲಗಳ ಅಭಿವೃದ್ಧಿ. ದೂರ ಪ್ರಯಾಣ ಸಾಧ್ಯತೆ.

ತುಲಾ: ನೆರೆಹೊರೆಯವರೊಡನೆ ಅನಾವಶ್ಯಕ ಮಾತುಗಳನ್ನಾಡದೇ ಇರುವುದು ಉತ್ತಮ. ಮಹಿಳೆಯರ ಇಷ್ಟಾರ್ಥ ಸಿದ್ಧಿಯಾಗುವುದು. ಇಷ್ಟದೇವತಾ ದರ್ಶನ ಭಾಗ್ಯ.

ವೃಶ್ಚಿಕ: ಶತ್ರುಬಾಧೆಯಿಂದ ಮುಕ್ತರಾಗಿ ಮನಸ್ಸು ನಿರಾಳ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ಗುರುದೇವತಾ ದರ್ಶನ ಭಾಗ್ಯ. ನಷ್ಟವಾದ ವಸ್ತುಗಳು ಪುನಃ ದೊರಕುವ ಸಾಧ್ಯತೆ. ತಾಯಿಯ ಆರೋಗ್ಯದ ಬಗ್ಗೆ ಗಮನವಿರಲಿ.

ಧನು: ಬಹುದಿನಗಳ ಸಮಸ್ಯೆಗಳಿಗೆ ಪರಿಹಾರ ಮಾರ್ಗ ಗೋಚರವಾಗುವುದು. ಕೃಷಿ ವಸ್ತುಗಳ ವ್ಯಾಪಾರದಲ್ಲಿ ಪ್ರಗತಿ. ಆತ್ಮೀಯರು ಮಕ್ಕಳಿಂದ ನೆಮ್ಮದಿಯ ಮನೆಯಲ್ಲಿ ವಾತಾವರಣ. ಸಂಗಾತಿಯ ಸಹಕಾರ. ಜೀವನದಲ್ಲಿ ಸಂತೃಪ್ತಿ.

ಮಕರ: ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ. ಮಕ್ಕಳಿಂದ ನೆಮ್ಮದಿ ದೊರಕುವುದು. ನಿಯೋಜಿತ ಕಾರ್ಯಗಳಲ್ಲಿ ಯಶಸ್ಸು. ಕುಟುಂಬ ಸಮೇತ ದೂರ ಪ್ರಯಾಣದ ಸಾಧ್ಯತೆ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ತೊಂದರೆ ಕಾಣಿಸಿಕೊಳ್ಳಬಹುದು.

ಕುಂಭ: ಮಾತೃವರ್ಗದವರಿಂದ ಸಹಕಾರ. ಗೃಹ ನಿರ್ಮಾಣ ವಸ್ತುಗಳ ಖರೀದಿ ಸಾಧ್ಯತೆ. ಮಹಿಳೆಯರಿಗೆ ಚಿನ್ನಾಭರಣ ಖರೀದಿ ವಿದ್ಯಾರ್ಥಿಗಳಿಗೆ ಓದಿನಲ್ಲಿ ಯಶಸ್ಸು. ಹಿರಿಯ ನಾಗರಿಕರಿಗೆ ಆರೋಗ್ಯದ ಬಗ್ಗೆ ಗಮನ ಅಗತ್ಯ.

ಮೀನ: ವಾಹನ ಚಾಲನೆಯಲ್ಲಿ ಎಚ್ಚರಿಕೆ ವಹಿಸಿ. ಉದ್ಯೋಗದಲ್ಲಿರುವವರಿಗೆ ವೈಯಕ್ತಿಕವಾಗಿ ಗೌರವಾದರಗಳು ಅಧಿಕಗೊಳ್ಳುವವು. ಆತ್ಮೀಯರ ಆಗಮನ ಸಾಧ್ಯತೆ. ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಮನೆಯಲ್ಲಿ ಸಂತೃಪ್ತಿ.

ನಿಮ್ಮ ಜನ್ಮದಿನ 9-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಉನ್ನತ ವಿಚಾರ ಚಿಂತನೆಗಳಿಂದಾಗಿ ಸಾಮಾಜಿಕ ಗೌರವಗಳು ಪ್ರಾಪ್ತವಾಗುವವು. ಕಬ್ಬಿಣ, ಉಕ್ಕು ಮುಂತಾದ ವ್ಯಾಪಾರಗಳಲ್ಲಿ ತೊಡಗಿದವರಿಗೆ ವ್ಯಾಪಾರ ವೃದ್ಧಿಯಾಗಿ ಆರ್ಥಿಕ ಸಂಕಷ್ಟಗಳು ನಿವಾರಣೆಯಾಗಲಿವೆ. ಸಂಗಾತಿಯ ಸಹಕಾರದಿಂದಾಗಿ ದಾಂಪತ್ಯ ಜೀವನದಲ್ಲಿ ಸಂತೃಪ್ತಿ.

ಪದಬಂಧ 4802


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಕಷ್ಟವಲ್ಲ ಬಿಡಿ! (3)
3.ಸುಗಂಧಲೇಪನ ದ್ರವ್ಯ (4)
5.ಗುರುವಿಗೆ ತಕ್ಕ ವಿದ್ಯಾರ್ಥಿ! (2)
6.ಯಾಮಾರಿದ್ದಕ್ಕೇ ಉಗ್ರವಾದ ಹೊಡೆದಾಟ (4)
7.ರತ್ನಗಳನ್ನು ಕುಂದಣಿಸಿದ ಆಸನ (7)
10.ನೆರೆಮನೆಯವ ಸೇರಿದ ಜೈಲು (4)
11.ಹಾವುಗೆಯೊಳಗಿರುವ ಉರಗ (2)
12.ಒಳ್ಳೆಯದನ್ನು ಮೆಚ್ಚತಕ್ಕವನು (4)
13.ಗೆಳೆಯನ ಹತ್ತಿರವಿರುವ ಸ್ನೇಹಿತೆ (3)

ಮೇಲಿಂದ ಕೆಳಕ್ಕೆ

2.ಮುಂದೆ ಬರುವ ಕಾಲ (3)
4.ದೊಡ್ಡ ಹಾರೆಯಿದು (3)
5.ಶಿರವೆತ್ತಿದಾಗ ಕಂಡದ್ದು ಬೆಟ್ಟದ ತುದಿ (3)
6.ಮಾರುತ್ತಿದ್ದಾಗ ಬೀಸಿದ ಗಾಳಿ (3)
8.ಬೊಕ್ಕಸ ಇಲ್ಲಿದೆ (3)
9.ರಾವು ಬಡಿದಾಗ ಹೊರಬಿದ್ದ ತೀರ್ಪು! (3)
10.ಸೀರೆಯ ಹೊದೆಯುವ ಭಾಗ (3)
11.ಮಲಗಲು ಬೇಕಾದ ಗಾದಿ (3)



4801ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಏರುಪೇರು 3.ಅಭಾಗಿನಿ 5.ಕಗ್ಗೊಲೆ 6.ಕರ 8.ಉರ 9.ಸರ್ವನಾಶ 10.ಸಸ್ಯಹಾರ 11.ನಾಳ 12.ಐಬಾ 14.ಮನವಿ 15.ಕಲಗಚ್ಚು 16.ಕರ್ನಾಟಕ

ಮೇಲಿಂದ ಕೆಳಕ್ಕೆ: 1.ಏಕೈಕ 2.ರುಕ 3.ಅಲೆ 4.ನಿರ್ಭರ 7.ರಸಕವಳ 8.ಉಪಕರಣ 10.ನಾವಿಕ 12.ಬಾಲಕ 13.ಮಚ್ಚು 14.ವಿಕ

ಸುಡೊಕು 5188

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5187 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಕೋವಿಶೀಲ್ಡ್ ಅಭಿವೃದ್ಧಿಯಲ್ಲಿ ಪ್ರಮುಖರಾದ ಡಾ. ಜಾಧವ್ ನಿಧನ



ಮುಂಬೈ: ಕೋವಿಡ್–19 ಲಸಿಕೆ ಕೋವಿಶೀಲ್ಡ್ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಸುರೇಶ್ ಜಾಧವ್ (72) ದೀರ್ಘಕಾಲ ಅನಾರೋಗ್ಯದಿಂದ ಬುಧವಾರ ಪುಣೆಯಲ್ಲಿ ನಿಧನರಾದರು.

ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದ, ಜಾಧವ್ ಅವರು ಸಹ್ಯಾದ್ರಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದಾರೆ.

ಸೀರಮ್ ಇನ್‌ಸ್ಟಿಟ್ಯೂಟ್‌ನ ವಿವಿಧ ಲಸಿಕೆಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯ ಮಾನ್ಯತೆ ಪಡೆಯುವಲ್ಲಿ ಡಾ. ಜಾಧವ್ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಸಂಸ್ಥೆಯು ವಿಶ್ವದ ಅತಿದೊಡ್ಡ ಲಸಿಕೆ ತಯಾರಕರಲ್ಲಿ ಒಂದಾಗಿದೆ ಮತ್ತು 140 ಕ್ಕೂ ಹೆಚ್ಚು ದೇಶಗಳಿಗೆ ಸೇವೆ ಸಲ್ಲಿಸುತ್ತಿದೆ.

ಡಾ. ಜಾಧವ್ ಅವರು ಎಂ.ಫಾರಂ ನಂತರ ನಾಗಪುರ ವಿಶ್ವವಿದ್ಯಾಲಯದಲ್ಲಿ ಪಿ.ಎಚ್.ಡಿ ಪದವಿ ಪಡೆದಿದ್ದಾರೆ. 1970 ರಲ್ಲಿ ಸಿಎಸ್‌ಐಆರ್‌ನ ಸಂಶೋಧನಾ ಫೆಲೋಶಿಪ್‌ನೊಂದಿಗೆ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ಜಾಧವ್ ಅವರು 1979ರಲ್ಲಿ ಪುಣೆಯ ಸೀರಮ್ ಸಂಸ್ಥೆ ಸೇರಿದರು. 1992ರಿಂದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು. 2004 ರಿಂದ 2008 ರ ವರೆಗೆ 5 ವರ್ಷಗಳ ಕಾಲ ಅಭಿವೃದ್ಧಿಶೀಲ ರಾಷ್ಟ್ರಗಳ ಲಸಿಕೆ ತಯಾರಕರ ನೆಟ್‌ವರ್ಕ್‌ನ (ಡಿಸಿವಿಎಂಎನ್) ಅಧ್ಯಕ್ಷರಾಗಿದ್ದರು.

ಓಮೈಕ್ರಾನ್: ವಿದೇಶದಿಂದ ಬಂದ ನಾಲ್ವರು ದೆಹಲಿಯಲ್ಲಿ ಆಸ್ಪತ್ರೆಗೆ ದಾಖಲು

ನವದೆಹಲಿ: ವಿದೇಶಗಳಿಂದ ಬಂದ ನಾಲ್ವರು ಪ್ರಯಾಣಿಕರನ್ನು ದೆಹಲಿಯ ಲೋಕ ನಾಯಕ್ ಜಯಪ್ರಕಾಶ್ ನಾರಾಯಣ್ (ಎಲ್‌ಎನ್‌ಜೆಪಿ) ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರಿಗೆ ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ತಗುಲಿರುವ ಶಂಕೆ ವ್ಯಕ್ತವಾಗಿದೆ.

ಪ್ರಯಾಣಿಕರನ್ನು ಓಮೈಕ್ರಾನ್ ಸೋಂಕಿತರಿಗೆ ಚಿಕಿತ್ಸೆ ನೀಡುವ ವಿಶೇಷ ಐಸೋಲೇಷನ್ ವಾರ್ಡ್‌ಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸದ್ಯ ವಿಶೇಷ ವಾರ್ಡ್‌ನಲ್ಲಿ ಒಟ್ಟು 30 ಮಂದಿ ಇದ್ದು, 25 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದೆ. ಐವರಲ್ಲಿ ಸೋಂಕಿನ ಶಂಕೆ ಇದೆ. ಇವತ್ತು ದಾಖಲಾಗಿರುವ ನಾಲ್ವರೂ ಭಾರತೀಯರು’ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಸುರೇಶ್ ಕುಮಾರ್ ತಿಳಿಸಿದ್ದಾರೆ.

ದೆಹಲಿಯಲ್ಲಿ ಭಾನುವಾರ ಮೊದಲ ಓಮೈಕ್ರಾನ್ ಪ್ರಕರಣ ದೃಢಪಟ್ಟಿತ್ತು. ಸೋಂಕಿತ ವ್ಯಕ್ತಿ ಪೂರ್ತಿಯಾಗಿ ಲಸಿಕೆ ಪಡೆದಿದ್ದು, ತಾಂಜಾನಿಯಾದಿಂದ ಬಂದಿದ್ದರು. ಇವರು ರಾಂಚಿಯವರಾಗಿದ್ದು, ತಾಂಜಾನಿಯಾದಿಂದ ದೋಹಾಗೆ ಪ್ರಯಾಣಿಸಿ ಬಳಿಕ ದೆಹಲಿಗೆ ಬಂದಿದ್ದರು. ಈ ಮಧ್ಯೆ ಅವರು ದಕ್ಷಿಣ ಆಫ್ರಿಕಾದ ಜೊಹಾನ್ಸ್‌ಬರ್ಗ್‌ನಲ್ಲಿ ಒಂದು ವಾರ ತಂಗಿದ್ದರು. ಅವರಲ್ಲಿ ಸೌಮ್ಯವಾದ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದವು.

ಓಮೈಕ್ರಾನ್: ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ

ನಿಯೋಜಿತ ಆಸ್ಪತ್ರೆಗಳಲ್ಲಷ್ಟೇ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಕೆಲವೆಡೆ ಓಮೈಕ್ರಾನ್ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ, ನಿಯೋಜಿತ ಕೋವಿಡ್ ಆಸ್ಪತ್ರೆಗಳಲ್ಲಿ ಮತ್ತು ಪ್ರತ್ಯೇಕ ಐಸೋಲೇಷನ್ ಪ್ರದೇಶಗಳಲ್ಲಿ ಮಾತ್ರ ರೋಗಿಗಳಿಗೆ ಚಿಕಿತ್ಸೆ ನೀಡಬೇಕು ಎಂಬ ಸೂಚನೆ ಸಹಿತ 10 ಅಂಶಗಳ ಮಾರ್ಗಸೂಚಿಯನ್ನು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರವಾನಿಸಿದೆ.

ಇತರ ರೋಗಿಗಳಿಗೆ ಓಮೈಕ್ರಾನ್ ಹರಡಬಾರದು ಎಂಬ ಕಾರಣಕ್ಕೆ ಈ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಇಲಾಖೆಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಬುಧವಾರ ರವಾನಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.



ಅಂತರರಾಷ್ಟ್ರೀಯ ಪ್ರಯಾಣಿಕರು ಓಮೈಕ್ರಾನ್ ಸೋಂಕಿಗೆ ಒಳಗಾದರೆ, ಅವರ ಸಂಪರ್ಕಿತರು ಮತ್ತು ಹಾಟ್‌ಸ್ಪಾಟ್‌ಗಳಿಂದ ಮಾದರಿಗಳು ಜಿನೋಮ್ ಸೀಕ್ವೆನ್ಸಿಂಗ್‌ಗಾಗಿ ಐಎನ್‌ಎಸ್‌ಎಸಿಒಜಿ ಪ್ರಯೋಗಾಲಯಗಳಿಗೆ ರವಾನೆಯಾಗುತ್ತಿರುವುದನ್ನು ನಿರಂತರ ಪರಿಶೀಲಿಸಬೇಕು. ಪ್ರಾಥಮಿಕ ಮತ್ತು ದ್ವಿತೀಯ ಹಂತದ ಸಂಪರ್ಕಿತರನ್ನು ತಕ್ಷಣ ಪತ್ತೆಹಚ್ಚಬೇಕು ಹಾಗೂ ಅವರೆಲ್ಲರಿಗೂ ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳುವ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಲಾಗಿದೆ.

ವಿಳಂಬ ಇಲ್ಲದೆ ಕ್ವಾರಂಟೈನ್: ಓಮೈಕ್ರಾನ್ ಸೋಂಕಿತರು ಮತ್ತು ಅವರ ಸಂಪರ್ಕಿತರನ್ನು ವಿಳಂಬ ಇಲ್ಲದೆ ಕ್ವಾರಂಟೈನ್‌ಗೆ ಒಳಪಡಿಸಬೇಕು, ಸಮುದಾಯದ ಮೇಲೆ ನಿಗಾ ವಹಿಸುವುದಕ್ಕೆ ಆದ್ಯತೆ ನೀಡಬೇಕು ಎನ್ನಲಾಗಿದೆ.

ವಾರಕ್ಕೆ ಶೇ 5ಕ್ಕಿಂತ ಅಧಿಕ ಪಾಸಿಟಿವಿಟಿ ದರ ಇರುವ ಜಿಲ್ಲೆಗಳಲ್ಲಿ ಸೂಕ್ತ ಪರೀಕ್ಷಾ ಸೌಲಭ್ಯವನ್ನು ಕಲ್ಪಿಸಬೇಕು, ಈ ವ್ಯವಸ್ಥೆ ಇಲ್ಲದಿದ್ದರೆ ಸೋಂಕು ಹರಡುವ ಮಟ್ಟವನ್ನು ಅಂದಾಜಿಸುವುದು ಕಷ್ಟವಾಗುತ್ತದೆ ಎಂದು ತಿಳಿಸಲಾಗಿದೆ.

ದೇಶದಲ್ಲಿ ಚಳಗಾಲ ಕಾಲಿಟ್ಟಿದ್ದು, ವಿಷಮ ಶೀತ ಮಾದರಿಯ ಜ್ವರ, ತೀವ್ರ ಉಸಿರಾಟದ ತೊಂದರೆಗಳಂತಹ ಸಮಸ್ಯೆಗಳೂ ಕಾಡುತ್ತವೆ. ಈ ಬಗ್ಗೆಯೂ ಸೂಕ್ಷ್ಮವಾಗಿ ಮೇಲ್ವಿಚಾರಣೆ ನಡೆಸಬೇಕು ಎಂದು ತಿಳಿಸಲಾಗಿದೆ.

ಓಮೈಕ್ರಾನ್ ನಿಯಂತ್ರಣ ಸಲುವಾಗಿ ಕೇಂದ್ರವು ನವೆಂಬರ್ 25, 27 ಮತ್ತು 29ರಂದು ಸಹ ಇಂತಹದೇ ಮಾರ್ಗಸೂಚಿ ರವಾನಿಸಿತ್ತು.

ರಾಜ್ಯದ ಕೋವಿಡ್ ಅಂಕಿ–ಅಂಶ

29,99,098	ಒಟ್ಟು ಪ್ರಕರಣಗಳು (29,98,699 ನಿನ್ನೆಯ ವಿವರ)
7,255	ಸಕ್ರಿಯ ಪ್ರಕರಣಗಳು
29,53,565	ಗುಣಮುಖರಾದವರು
38,249	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	399
ಗುಣಮುಖ	238
ಸಾವು	06

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅಣೆಕಟ್ಟು ಸುರಕ್ಷತಾ ಮಸೂದೆಗೆ ಸಂಸತ್ ಒಪ್ಪಿಗೆ

ನವದೆಹಲಿ: ದೇಶದ ನಿಗದಿತ ಅಣೆಕಟ್ಟುಗಳ ಸುರಕ್ಷತೆಗಾಗಿ ಸಾಂಸ್ಥಿಕ ಕಾರ್ಯವಿಧಾನ ಸ್ಥಾಪಿಸುವ ಮಸೂದೆಯನ್ನು ಸಂಸತ್ತು ಬುಧವಾರ ಅಂಗೀಕರಿಸಿದೆ.

ರಾಜ್ಯಸಭೆಯು ಕೆಲವೊಂದು ಸಣ್ಣ ಬದಲಾವಣೆಗಳೊಂದಿಗೆ ಡಿಸೆಂಬರ್ 2ರಂದು ಅಣೆಕಟ್ಟು ಸುರಕ್ಷತಾ ಮಸೂದೆಗೆ ಅನುಮೋದನೆ ನೀಡಿತ್ತು. ಇದೇ ವೇಳೆ ಮಸೂದೆಯ ವರ್ಷವನ್ನು 2019–2021 ಎಂದು ಬದಲಾವಣೆ ಮಾಡಲಾಗಿತ್ತು.

ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಲೋಕಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿದರು. ಇದನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಅಣೆಕಟ್ಟು ವೈಫಲ್ಯ ಸಂಬಂಧಿತ ವಿಪತ್ತುಗಳಿಂದ ಸಂರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಈ ಮಸೂದೆಗೆ ಅಂಗೀಕಾರ ನೀಡಲಾಗಿದ್ದು, ಈ ಮಸೂದೆಯಡಿ ನಿಗದಿತ ಅಣೆಕಟ್ಟು ಕಣ್ಗಾವಲು, ಪರಿಶೀಲನೆ, ಕಾರ್ಯಾಚರಣೆ ನಡೆಸಲಾಗುತ್ತದೆ. ಅಣೆಕಟ್ಟುಗಳ ಸುರಕ್ಷತೆಗಾಗಿ ರಾಷ್ಟ್ರೀಯ ಸಮಿತಿಯನ್ನು (ಎನ್‌ಸಿಡಿಎಸ್) ರೂಪಿಸುವಂತೆಯೂ ಈ ಮಸೂದೆಯಲ್ಲಿ ಹೇಳಲಾಗಿದೆ.

ಈ ಹಿಂದೆ 2019, ಆಗಸ್ಟ್‌ನಲ್ಲಿ ಲೋಕಸಭೆಯು ಈ ಮಸೂದೆಯನ್ನು ಅಂಗೀಕರಿಸಿತ್ತು.

ರಸ್ತೆಯಲ್ಲೇ ಲಸಿಕೆ ಕೊಡಿಸಿದ ಜಿಲ್ಲಾಧಿಕಾರಿ

ದಾವಣಗೆರೆ: ಮಂಡಕ್ಕಿ ಭಟ್ಟಿ ಪ್ರದೇಶದಲ್ಲಿ ರಸ್ತೆಯಲ್ಲಿ ಹೋಗುತ್ತಿರುವವರನ್ನೆಲ್ಲ ನಿಲ್ಲಿಸಿ ಕೋವಿಡ್ ಲಸಿಕೆ ತೆಗೆದುಕೊಂಡಿದ್ದಾರೋ ಇಲ್ಲವೋ ಎಂಬುದನ್ನು ತಿಳಿದುಕೊಂಡು, ಪಡೆಯದವರಿಗೆ ರಸ್ತೆಯಲ್ಲೇ ಲಸಿಕೆ ನೀಡಲಾಯಿತು. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪಂಚಾಯಿತಿ ಸಿಇಒ ಡಾ. ವಿಜಯ ಮಹಾಂತೇಶ್ ದಾನಮ್ಮನವರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ನೇತೃತ್ವದಲ್ಲಿ ಬುಧವಾರ ಈ ಅಭಿಯಾನ ನಡೆಸಲಾಗಿದೆ.

ಮಂಡಕ್ಕಿ ಭಟ್ಟಿಯ ಒಳಗೆ ಹೋಗಿ ತಪ್ಪಿಸಿಕೊಳ್ಳಲು ಯತ್ನಿಸಿದವರಿಗೂ ಲಸಿಕೆ ನೀಡಲಾಯಿತು. ಅಧಿಕಾರಿಗಳು ಮಂಡಕ್ಕಿ ಭಟ್ಟಿಯೊಳಗೆ ಹೊಕ್ಕಿ ಅಲ್ಲಿದ್ದ ಎಲ್ಲರಿಗೂ ಲಸಿಕೆ ನೀಡಿದರು. ಲಸಿಕೆ ಉಸ್ತುವಾರಿ ಹೊತ್ತಿರುವ ಡಾ. ಕೆ.ಎಸ್. ಮೀನಾಕ್ಷಿ ಅವರೇ ಸೂಜಿ ಚುಚ್ಚಿದರು.



ದಾವಣಗೆರೆ ಮಂಡಕ್ಕಿ ಭಟ್ಟಿ ಪ್ರದೇಶದಲ್ಲಿ ರಸ್ತೆಯಲ್ಲೇ ಕೋವಿಡ್ ಲಸಿಕೆ ಹಾಕಲಾಯಿತು

ಇದೇ ತಂಡವು ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳನ್ನು ನಿಲ್ಲಿಸಿ ಅದರಲ್ಲಿದ್ದ ಪ್ರಯಾಣಿಕರಿಗೆ ಮಾಸ್ಕ್ ಬಗ್ಗೆ ಜಾಗೃತಿ ಮೂಡಿಸಿತು. ಮಾಸ್ಕ್ ಹಾಕದೇ ಇದ್ದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದರು. ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಪಾಲಿಕೆ ಸದಸ್ಯ ಎ.ಬಿ.ರಹೀಂ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಗಂಗಾಧರ, ಆಜಾದ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು, ದಾದಿಯರು, ಆಶಾ ಕಾರ್ಯಕರ್ತೆಯರು ಸಾಥ್ ನೀಡಿದರು.

30 ಲಕ್ಷದತ್ತ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 399 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30 ಲಕ್ಷದ ಗಡಿ (29.99 ಲಕ್ಷ) ಸಮೀಪಿಸಿದೆ.

ಒಂದು ದಿನದ ಅವಧಿಯಲ್ಲಿ 1.16 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 21 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢ ಪ್ರಮಾಣ ಶೇ 0.34 ರಷ್ಟು ದೃಢಪಟ್ಟಿದೆ. ಆರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, 244 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಮೈಸೂರಿನಲ್ಲಿ 38, ಕೊಡಗಿನಲ್ಲಿ 30, ದಕ್ಷಿಣ ಕನ್ನಡದಲ್ಲಿ 15, ಚಿಕ್ಕಮಗಳೂರಿನಲ್ಲಿ 14, ತುಮಕೂರು ಹಾಗೂ ಧಾರವಾಡದಲ್ಲಿ ತಲಾ 10 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆಯಿದೆ.

ಸಕ್ರಿಯ ಪ್ರಕರಣ ಏರಿಕೆ: ಸೋಂಕಿತರಲ್ಲಿ 238 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.53 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,255ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 5,435 ಸೋಂಕಿತರಿದ್ದಾರೆ. ವಿಜಯಪುರ, ರಾಮನಗರ ಸೇರಿದಂತೆ 8 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಮೂವರು, ಕೊಡಗು, ಕೊಪ್ಪಳ, ತುಮಕೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.50 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,249ಕ್ಕೆ ಏರಿಕೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	5,536	6,333
ಹಾರಂಗಿ	2,859	2,855.40	20	1,050
ಕಬಿನಿ	2,284	2,283.73	1,450	700
ಹೇಮಾವತಿ	2,922	2,913.74	1,839	2,630
ಲಿಂಗನಮಕ್ಕಿ	1,819	1,811.55	-	-
ಸೂಪಾ (ಮೀ)	564	554.45	270	1,983
ಮಾಣಿ	594.36	586.34	-	-
ತುಂಗಭದ್ರಾ	1,633	1,632.99	7,414	7,114
ಮಲಪ್ರಭಾ	2,079.50	2,166.16	469	469
ಘಟಪ್ರಭಾ	2,175	2,110.41	376	376
ಭದ್ರಾ	186	186	1,507	1,207
ಆಲಮಟ್ಟಿ (ಮೀ)	519.60	519.22	8,274	636
ನಾರಾಯಣಪುರ (ಮೀ)	492.25	492.17	900	7,000

*ನೆಲಮಟ್ಟದಿಂದ

ವಿಮಾನ ನಿಲ್ದಾಣದಿಂದ ತಪ್ಪಿಸಿಕೊಂಡಿದ್ದ ಸೋಂಕಿತ ಪತ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬುಧವಾರ ತಪ್ಪಿಸಿಕೊಂಡಿದ್ದ ಕೋವಿಡ್ ಸೋಂಕಿತ ವ್ಯಕ್ತಿಯನ್ನು ಪೊಲೀಸರು ಬೆಂಗಳೂರಿನ ರಾಜಾಜಿನಗರದಲ್ಲಿ ಪತ್ತೆ ಹಚ್ಚಿದ್ದು, ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಓಮೈಕ್ರಾನ್ ಭೀತಿಯ ನಡುವೆಯೇ ಜರ್ಮನಿಯ ಫ್ರಾಂಕ್‌ಫರ್ಟ್‌ನಿಂದ 351 ಪ್ರಯಾಣಿಕರಿದ್ದ ವಿಮಾನವು ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿತ್ತು. ಎಲ್ಲಾ ಪ್ರಯಾಣಿಕರನ್ನು ಆರ್‌ಟಿ ಪಿಸಿಆರ್ ಪರೀಕ್ಷೆಗೆ ಒಳಪಡಿಸಿದ್ದು, ಇಬ್ಬರಲ್ಲಿ ಸೋಂಕು ದೃಢಪಟ್ಟಿತ್ತು. ಒಬ್ಬ ಸೋಂಕಿತನನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮತ್ತೊಬ್ಬ ಸೋಂಕಿತ ತಪ್ಪಿಸಿಕೊಂಡಿದ್ದು, ಆತಂಕಕ್ಕೆ ಕಾರಣವಾಗಿತ್ತು. ಕೂಡಲೇ ನಿಲ್ದಾಣದ ಆರೋಗ್ಯ ವಿಭಾಗದ ಅಧಿಕಾರಿಗಳು ಪೊಲೀಸರಿಗೆ ಈ ಬಗ್ಗೆ ಮಾಹಿತಿ ನೀಡಿದ್ದರು. ಸೋಂಕಿತ ನೀಡಿದ್ದ ವಿಳಾಸ ಮತ್ತು ಮೊಬೈಲ್ ನಂಬರ್ ಆಧರಿಸಿ ಸ್ಥಳೀಯ ಅಧಿಕಾರಿಗಳ ಸಹಕಾರ ಪಡೆದುಕೊಂಡು ಪೊಲೀಸರು ಶೋಧ ನಡೆಸಿ, ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

‘ಎಲ್ಲಾ ಪ್ರಯಾಣಿಕರಿಗೂ ಆರ್‌ಟಿ ಪಿಸಿಆರ್ ಪರೀಕ್ಷೆ ನಡೆಸಿ ನಿಲ್ದಾಣದಲ್ಲಿಯೇ ಪರೀಕ್ಷಾ ವರದಿ ಬರುವವರೆಗೂ ಕಾಯುವಂತೆ ಸೂಚಿಸಲಾಗಿತ್ತು. ಹೆಚ್ಚಿನ ಭದ್ರತೆಯಿದ್ದರೂ ಸೋಂಕಿತ ಹೇಗೆ ತಪ್ಪಿಸಿಕೊಂಡು ಹೋದರು ಎಂಬುದು ಯಕ್ಷಪ್ರಶ್ನೆಯಾಗಿದೆ. ಆತನೊಂದಿಗೆ ವಿಮಾನದಲ್ಲಿ ಪ್ರಯಾಣ ಮಾಡಿದ್ದ ಎಲ್ಲರ ವರದಿಗಳು ನೆಗೆಟಿವ್ ಬಂದಿವೆ. ಮುಂಜಾಗ್ರತೆಯಾಗಿ ಎಲ್ಲಾ ಪ್ರಯಾಣಿಕರನ್ನು ಹೋಮ್ ಕ್ವಾರಂಟೈನ್ ಮಾಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಇಬ್ಬರು ಸೋಂಕಿತರ ಮೇಲೆ ನಿಗಾವಹಿಸಲಾಗಿತ್ತು. ಸೋಂಕಿತ ತಪ್ಪಿಸಿಕೊಂಡಿದ್ದು ಹೇಗೆ ಎಂಬ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ತಿಪ್ಪೇಸ್ವಾಮಿ ತಿಳಿಸಿದರು.

ಮಳೆ: ಕಾಳುಮೆಣಸಿಗೆ ಬೇರು ಕೊಳೆರೋಗ

• ಎನ್.ವಿ. ರಮೇಶ್

ಬಸವಾಪಟ್ಟಣ: ಈ ಬಾರಿ ಸುರಿದ ಭಾರಿ ಮಳೆಗೆ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ವ್ಯಾಪ್ತಿಯಲ್ಲಿ ಕಾಳುಮೆಣಸಿನ ಬಳ್ಳಿ ಬೇರು ಕೊಳೆರೋಗಕ್ಕೆ ತುತ್ತಾಗಿದ್ದು, ಇಳುವರಿ ತೀವ್ರವಾಗಿ ಕುಸಿದಿದೆ.

ಮಲೆನಾಡು, ಕರಾವಳಿ ಜಿಲ್ಲೆಗಳಿಗೆ ಸೀಮಿತವಾಗಿದ್ದ ಕಾಳುಮೆಣಸನ್ನು ಚನ್ನಗಿರಿ ತಾಲ್ಲೂಕಿನ ರೈತರು ಅಡಿಕೆಯೊಂದಿಗೆ ಬೆಳೆದು ಬದುಕು ಕಟ್ಟಿಕೊಂಡಿದ್ದರು. ಆದರೆ, ವಾಡಿಕೆಗಿಂತ ಹೆಚ್ಚು ಸುರಿದ ಮಳೆಯಿಂದ ಬೆಳೆ ಹಾನಿಯಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಬಸವಾಪಟ್ಟಣ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ 200 ಎಕರೆ ಪ್ರದೇಶದಲ್ಲಿ ರೈತರು ಕಾಳುಮೆಣಸು ಬೆಳೆದಿದ್ದರು. ಅಧಿಕ ಮಳೆಗೆ ಮೆಣಸಿನ ಬಳ್ಳಿಗಳ ಬೇರು ಕೊಳೆತು, ಬಳ್ಳಿಗಳು ಒಣಗಿವೆ.

‘ನಾಲ್ಕು ಎಕರೆ ಅಡಿಕೆ ತೋಟದಲ್ಲಿ ಕಾಳುಮೆಣಸು ಬೆಳೆದಿದ್ದೆ. ಎಕರೆಗೆ ಎರಡರಿಂದ ಎರಡೂವರೆ ಕ್ವಿಂಟಲ್ ಇಳುವರಿ ಬರುತ್ತಿತ್ತು. ಈ ವರ್ಷ ಮಳೆಯಿಂದ ಬೆಳೆ ಹಾಳಾಗಿದೆ. ಮಲೆನಾಡಿನಲ್ಲಿ ಮಳೆ ನೀರು ಮೆಣಸಿನ ಬಳ್ಳಿ ಮೇಲೆ ಬಿದ್ದು, ನಿಲ್ಲದೆ ಹರಿದು ಹೋಗುತ್ತದೆ. ಆದರೆ, ನಮ್ಮಲ್ಲಿ ನೀರು ಇಂಗದೇ ಕೆಸರಾಗಿ ಬಳ್ಳಿಗಳು ಕೊಳೆಯುತ್ತಿವೆ. ಮಲೆನಾಡಿನಂತೆ ನಾವೂ ಕಾಳುಮೆಣಸು ಬೆಳೆಯಬಹುದು ಎಂಬ ಭರವಸೆ ಈಗ ಇಲ್ಲವಾಗುತ್ತಿದೆ’ ಎಂದು ದಾಗಿನಕಟ್ಟೆಯ ರೈತ ಒ.ಜಿ. ಕಿರಣ್ ಬೇಸರಿಸಿದರು.

> **ಮಳೆಯಿಂದಾಗಿ ಕೆಲವು ತೋಟಗಳಲ್ಲಿ ಮೆಣಸಿನ ಬಳ್ಳಿಯ ಸುಳಿವೇ ಇಲ್ಲದಂತಾಗಿದೆ. ಕೆಲವರು ಇದರ ಸಹವಾಸ ಬೇಡ ಎಂದು ಕಿತ್ತು ಎಸೆದಿದ್ದಾರೆ.**
> **ಚಂದ್ರಪ್ಪಗೌಡ,** ರೈತ, ದಾಗಿನಕಟ್ಟೆ

‘ಮಲೆನಾಡಿನ ರೈತರು ಎಕರೆಗೆ 12 ಕ್ವಿಂಟಲ್‌ವರೆಗೆ ಕಾಳುಮೆಣಸು ಬೆಳೆಯುತ್ತಾರೆ. ನಮ್ಮಲ್ಲಿ ಎಕರೆಗೆ ಎರಡರಿಂದ ಎರಡೂವರೆ ಕ್ವಿಂಟಲ್ ಇಳುವರಿ ಬಂದರೂ ನಷ್ಟ ಇರಲಿಲ್ಲ. ಆದರೆ, ಈ ವರ್ಷ ಬಳ್ಳಿಗಳು ಹಾಳಾಗಿ ಇಳುವರಿ ಕುಸಿದಿದೆ’ ಎನ್ನುತ್ತಾರೆ ರೈತರಾದ ಪಿ.ರುದ್ರೇಶ್ ಮತ್ತು ಎಂ. ಭದ್ರಪ್ಪ.



ಬಸವಾಪಟ್ಟಣ ಸಮೀಪದ ದಾಗಿನಕಟ್ಟೆಯ ರೈತ ಒ.ಜಿ. ಚನ್ನವೀರಪ್ಪ ಅವರ ತೋಟದಲ್ಲಿ ಕಾಳುಮೆಣಸಿನ ಬಳ್ಳಿಗಳು ಮಳೆಗೆ ಕೊಳೆತಿರುವುದು

‘ಇಲ್ಲಿ ಕಾಳುಮೆಣಸು ಬೆಳೆ ಇನ್ನೂ ಪ್ರಯೋಗದ ಹಂತದಲ್ಲಿದೆ. ಇಲ್ಲಿ ಬೇರು ಕೊಳೆರೋಗದಿಂದ ಬೆಳೆ ಉಳಿಸಿಕೊಳ್ಳಲು ಒಂದೂವರೆ ಅಡಿಯಷ್ಟು ಎತ್ತರದ ಹಿಪ್ಪಿ ಗಿಡಗಳಿಗೆ ಮೆಣಸಿನ ಬಳ್ಳಿಯನ್ನು ಕಸಿ ಮಾಡಬೇಕು. ಬಸಿಗಾಲುವೆ ಮಾಡುವುದರಿಂದ ಕೊಳೆರೋಗ ಹರಡುವುದನ್ನು ತಡೆಯಬಹುದು’ ಎಂದು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ರೋಹಿತ್ ಸಲಹೆ ನೀಡಿದರು.

ಪ್ರಧಾನ ಮಂತ್ರಿ ಅವಾಸ್ ಯೋಜನೆ ವಿಸ್ತರಣೆಗೆ ಅಸ್ತು

ನವದೆಹಲಿ: ಪ್ರಧಾನ ಮಂತ್ರಿ ಅವಾಸ್ ಯೋಜನೆಯನ್ನು (ಗ್ರಾಮೀಣ) ಇನ್ನೂ ಮೂರು ವರ್ಷಗಳವರೆಗೆ ವಿಸ್ತರಿಸುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದರು. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ ಈ ಯೋಜನೆಯನ್ನು ಮಾರ್ಚ್ 2021 ರಿಂದ 2024ರ ಮಾರ್ಚ್ ತನಕ ವಿಸ್ತರಿಸಲಾಗಿದೆ. ಈ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ವಸತಿಯನ್ನು ನಿರ್ಮಿಸಲಾಗುವುದು’ ಎಂದರು.

‘ಈ ವಿಸ್ತರಣೆಯು 155.75 ಲಕ್ಷ ಮನೆಗಳನ್ನು ನಿರ್ಮಿಸಲು ಸಹಾಯವಾಗಲಿದೆ’ ಎಂದು ಸರ್ಕಾರಿ ವಕ್ತಾರರು ಟ್ವೀಟ್ ಮಾಡಿದ್ದಾರೆ.

ಜರ್ಮನಿ: ಒಲಾಫ್ ಶೂಲ್ಟ್ಸ್ ನೂತನ ಛಾನ್ಸಲರ್

ಬರ್ಲಿನ್ (ಎಪಿ): ಜರ್ಮನಿಯ ಸಂಸತ್ ಬುಧವಾರ ಒಲಾಫ್ ಶೂಲ್ಟ್ಸ್ ಅವರನ್ನು ದೇಶದ ಒಂಬತ್ತನೇ ಛಾನ್ಸಲರ್ ಆಗಿ ಆಯ್ಕೆ ಮಾಡಿತು. 16 ವರ್ಷ ಅಧಿಕಾರ ನಡೆಸಿದ ಅಂಗೆಲಾ ಮರ್ಕೆಲ್ ಅವರಿಂದ ತೆರವಾದ ಸ್ಥಾನವನ್ನು ಶೂಲ್ಟ್ಸ್ ತುಂಬಲಿದ್ದಾರೆ.

395–303 ಮತಗಳ ಅಂತರದೊಂದಿಗೆ ಶೂಲ್ಟ್ಸ್ ಅವರು ಛಾನ್ಸಲರ್ ಆಗಿ ಆಯ್ಕೆಯಾದರು. 736 ಸದಸ್ಯರಿರುವ ಸಂಸತ್‌ನ ಕೆಳಮನೆಯಲ್ಲಿ ಶೂಲ್ಟ್ಸ್ ನೇತೃತ್ವದ ಮೂರು ಪಕ್ಷಗಳ ಸಮ್ಮಿಶ್ರ ಒಕ್ಕೂಟ 416 ಸ್ಥಾನಗಳನ್ನು ಹೊಂದಿದೆ.

ಮರ್ಕೆಲ್ ಅವರು ಈಗ ಸಂಸತ್ ಸದಸ್ಯರಲ್ಲ. ಹೀಗಾಗಿ ವೀಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಅವರು ಮತದಾನವನ್ನು ವೀಕ್ಷಿಸಿದರು. ಕಲಾಪ ಆರಂಭವಾಗುತ್ತಿದ್ದಂತೆಯೇ ಸದಸ್ಯರು ಎದ್ದುನಿಂತು ಮರ್ಕೆಲ್ ಅವರ ಸೇವೆಗೆ ಕೃತಜ್ಞತೆ ಸಲ್ಲಿಸಿದರು.



ಒಲಾಫ್ ಶೂಲ್ಟ್ಸ್

ಜರ್ಮನಿಯನ್ನು ಆಧುನಿಕ ಪಥದಲ್ಲಿ ಕೊಂಡೊಯ್ಯುವ ಮತ್ತು ಹವಾಮಾನ ಬದಲಾವಣೆಗೆ ದೇಶವನ್ನು ಸಜ್ಜುಗೊಳಿಸುವ ಬಹಳ ದೊಡ್ಡ ಹೊಣೆಗಾರಿಕೆ ಶೂಲ್ಟ್ಸ್ (63) ಅವರ ಮೇಲಿದ್ದು, 2018ರಿಂದೀಚೆಗೆ ಅವರು ವೈಸ್ ಛಾನ್ಸಲರ್ ಆಗಿದ್ದುದು ಮತ್ತು ಹಣಕಾಸು ಸಚಿವರಾಗಿದ್ದುದು ಅವರ ಆಡಳಿತ ನಿರ್ವಹಣೆಗೆ ನೆರವಾಗುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಏಕದಿನ ತಂಡದಿಂದ ವಿರಾಟ್ ಕೊಹ್ಲಿಗೆ; ಟೆಸ್ಟ್ ತಂಡದ ಉಪನಾಯಕತ್ವದಿಂದ ಅಜಿಂಕ್ಯ ರಹಾನೆಗೆ ಕೊಕ್

ಏಕದಿನ ಕ್ರಿಕೆಟ್ ತಂಡಕ್ಕೂ ರೋಹಿತ್ ನಾಯಕ

ನವದೆಹಲಿ (ಪಿಟಿಐ): ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಅವರನ್ನು ಭಾರತ ಏಕದಿನ ಕ್ರಿಕೆಟ್ ತಂಡಕ್ಕೂ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಇದರೊಂದಿಗೆ ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್ ತಂಡಕ್ಕೆ ಮಾತ್ರ ನಾಯಕರಾಗಿ ಮುಂದುವರಿಯುವರು. ಅಜಿಂಕ್ಯ ರಹಾನೆ ಅವರನ್ನು ಉಪನಾಯಕತ್ವದಿಂದ ಕೆಳಗಿಳಿಸಲಾಗಿದ್ದು ರೋಹಿತ್ ಆ ಸ್ಥಾನ ನಿಭಾಯಿಸುವರು.

ಬುಧವಾರ ಈ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಟ್ವೀಟ್ ಕೂಡ ಮಾಡಿದೆ. ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಲಿರುವ 18 ಆಟಗಾರರ ಟೆಸ್ಟ್ ತಂಡವನ್ನೂ ಮಂಡಳಿಯು ಪ್ರಕಟಿಸಿದೆ. ಈ ತಂಡದಲ್ಲಿ ರವೀಂದ್ರ ಜಡೇಜ, ಅಕ್ಷರ್ ಪಟೇಲ್ ಮತ್ತು ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರನ್ನು ಆಯ್ಕೆ ಪರಿಗಣಿಸಲಾಗಿಲ್ಲ. ಅವರು ಗಾಯಗೊಂಡಿದ್ದು ಆರೈಕೆ ಶಿಬಿರಕ್ಕೆ ತೆರಳಿದ್ದಾರೆ.


ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ

ಮಧ್ಯಮ ಕ್ರಮಾಂಕದ ಬ್ಯಾಟರ್ ಹನುಮವಿಹಾರಿ ತಂಡಕ್ಕೆ ಮರಳಿದ್ದಾರೆ. ಅನುಭವಿ ವೇಗಿ ಇಶಾಂತ್ ಶರ್ಮಾ ಕೂಡ ಅವಕಾಶ ಗಿಟ್ಟಿಸಿದ್ದಾರೆ.

'ರಾಷ್ಟ್ರೀಯ ಆಯ್ಕೆ ಸಮಿತಿಯು ರೋಹಿತ್ ಶರ್ಮಾ ಅವರನ್ನು ಟಿ20 ಮತ್ತು ಏಕದಿನ ತಂಡಗಳಿಗೆ ನಾಯಕರನ್ನಾಗಿ ನೇಮಕ ಮಾಡಲು ನಿರ್ಧರಿಸಿದೆ' ಎಂದು ಮಂಡಳಿ ಹೇಳಿದೆ.

ವಿರಾಟ್ ಕೊಹ್ಲಿ ನಾಯಕತ್ವ (ಏಕದಿನ)

ಪಂದ್ಯ	ಗೆಲುವು	ಸೋಲು	ಟೈ
95	65	27	1

ಫಲಿತಾಂಶವಿಲ್ಲ	ಅವಧಿ
2	2013-2021

ಮುಖ್ಯಾಂಶಗಳು

- ಏಕದಿನ ತಂಡಕ್ಕೆ 2017ರಲ್ಲಿ ಪೂರ್ಣಾವಧಿ ನಾಯಕರಾಗಿದ್ದ ಕೊಹ್ಲಿ
- ಟಿ20 ವಿಶ್ವಕಪ್ ನಂತರ ಚುಟುಕು ಕ್ರಿಕೆಟ್ ತಂಡದ ನಾಯಕತ್ವ ಬಿಟ್ಟಿದ್ದ ಕೊಹ್ಲಿ

ಈಚೆಗೆ ಯುಎಇಯಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಂತರ ವಿರಾಟ್ ಕೊಹ್ಲಿ ಅವರು ಭಾರತ ಟಿ20 ತಂಡದ ನಾಯಕತ್ವ ಬಿಟ್ಟುಕೊಟ್ಟಿದ್ದರು.

ಭಾರತ ತಂಡವು ಇದೇ ವಾರ ದಕ್ಷಿಣ ಆಫ್ರಿಕಾಗೆ ತೆರಳಲಿದೆ. ಅಲ್ಲಿ ಮೂರು ಏಕದಿನ ಮತ್ತು ಮೂರು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಏಕದಿನ ಸರಣಿಯಲ್ಲಿ ರೋಹಿತ್ ತಂಡವನ್ನು ಮುನ್ನಡೆಸುವರು ಎಂದು ತಿಳಿದುಬಂದಿದೆ.

ಶ್ವೇತವರ್ಣದ ಚೆಂಡಿನ ಕ್ರಿಕೆಟ್‌ಗೆ ಮತ್ತು ಕೆಂಪು ಚೆಂಡಿನ ಕ್ರಿಕೆಟ್ ಮಾದರಿಗೆ (ಟೆಸ್ಟ್) ಪ್ರತ್ಯೇಕ ನಾಯಕರನ್ನು ನೇಮಕ ಮಾಡುವ ಬಗ್ಗೆ ಮಂಡಳಿಯಲ್ಲಿ ಕೆಲವು ದಿನಗಳಿಂದ ಚರ್ಚೆಗಳು ನಡೆಯುತ್ತಿದ್ದವು.

ವಿರಾಟ್ 2013–14ರಲ್ಲಿ ಟೆಸ್ಟ್ ತಂಡದ ನಾಯಕರಾಗಿ ನೇಮಕವಾಗಿದ್ದರು. 2017ರಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವ ಬಿಟ್ಟಿದ್ದರಿಂದ ಕೊಹ್ಲಿ ಅಧಿಕಾರ ವಹಿಸಿಕೊಂಡಿದ್ದರು. ಕೊಹ್ಲಿ ಒಟ್ಟು 254 ಪಂದ್ಯಗಳನ್ನು ಆಡಿದ್ದಾರೆ. 12169 ರನ್ ಗಳಿಸಿದ್ದಾರೆ. 43 ಶತಕ ಗಳಿಸಿದ್ದಾರೆ. ರೋಹಿತ್ 227 ಪಂದ್ಯಗಳಿಂದ 9205 ರನ್ ಗಳಿಸಿದ್ದಾರೆ. ಅದರಲ್ಲಿ 29 ಶತಕಗಳು ಸೇರಿವೆ.

ಟೆಸ್ಟ್ ತಂಡ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ಶ್ರೇಯಸ್ ಅಯ್ಯರ್, ಹನುಮವಿಹಾರಿ, ರಿಷಭ್ ಪಂತ್, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್‌ಗಳು), ಆರ್. ಅಶ್ವಿನ್, ಜಯಂತ್ ಯಾದವ್, ಇಶಾಂತ್ ಶರ್ಮಾ, ಮೊಹಮ್ಮದ್ ಶಮಿ, ಉಮೇಶ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್

ಕಾಯ್ದಿಟ್ಟ ಆಟಗಾರರು: ನವದೀಪ್ ಸೈನಿ, ಸೌರಭ್ ಕುಮಾರ್, ದೀಪಕ್ ಚಾಹರ್, ನಾಗವಾಸವಾಲಾ.

ಪೆಲೆ ಆಸ್ಪತ್ರೆಗೆ ದಾಖಿಲು

ಸಾವೊಪಾಲೊ (ಎಪಿ): ಫುಟ್‌ಬಾಲ್ ದಿಗ್ಗಜ ಪೆಲೆ ಬುಧವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ.

ದೊಡ್ಡಕರುಳಿನಲ್ಲಿ ಬೆಳೆದಿರುವ ಗಡ್ಡೆಯ ಶಮನ ಚಿಕಿತ್ಸೆಗಾಗಿ ಅವರು ದಾಖಲಾಗಿದ್ದಾರೆ. 81 ವರ್ಷದ ಪೆಲೆ ಆರೋಗ್ಯವು ಸ್ಥಿರವಾಗಿದ್ದು ಕೆಲವು ದಿನಗಳ ನಂತರ ಮನೆಗೆ ಮರಳಲಿದ್ದಾರೆಂದು ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಳಿಗಾಲದ ಒಲಿಂಪಿಕ್ಸ್ ಬಹಿಷ್ಕಾರಕ್ಕೆ ಕೈಜೋಡಿಸಿದ ಬ್ರಿಟನ್, ಆಸ್ಟ್ರೇಲಿಯಾ

ಲಂಡನ್ (ಪಿಟಿಐ): ಚೀನಾದಲ್ಲಿ ಮುಂದಿನ ವರ್ಷ ನಡೆಯಲಿರುವ ಚಳಿಗಾಲದ ಒಲಿಂಪಿಕ್ಸ್‌ಗೆ ರಾಜತಾಂತ್ರಿಕ ಬಹಿಷ್ಕಾರ ಹಾಕುವ ದೇಶಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ.

ಎರಡು ದಿನಗಳ ಹಿಂದೆ ಅಮೆರಿಕ ರಾಜತಾಂತ್ರಿಕ ಬಹಿಷ್ಕಾರ ಹಾಕಿತ್ತು. ಇದೀಗ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಕೂಡ ಅಮೆರಿಕದ ಬೆಂಬಲಕ್ಕೆ ನಿಂತಿವೆ. ತಮ್ಮ ದೇಶಗಳ ಸರ್ಕಾರಿ ಅಧಿಕಾರಿಗಳು ಮತ್ತು ಸಚಿವರನ್ನು ಕೂಟದಲ್ಲಿ ಭಾಗವಹಿಸುವ ತಂಡದೊಂದಿಗೆ ಕಳುಹಿಸದಿರಲು ನಿರ್ಧರಿಸಿವೆ.

'ಚಳಿಗಾಲದ ಒಲಿಂಪಿಕ್ಸ್‌ಗೆ ರಾಜಕೀಯ ಬಹಿಷ್ಕಾರವನ್ನು ಹಾಕುವುದಾಗಿ' ಬ್ರಿಟನ್ ಪ್ರಧಾನಿ ಬೊರಿಸ್ ಜಾನ್ಸನ್ ಹೇಳಿದ್ದಾರೆ.

ಚೀನಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆಯುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ಕೃತ್ಯಗಳು ನಡೆಯುತ್ತಿವೆ ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿರೋಧ ವ್ಯಕ್ತವಾಗಿದೆ.

ಈಚೆಗೆ ಚೀನಾದ ಟೆನಿಸ್ ತಾರೆ ಪೆಂಗ್ ಶುಯಿ ನಾಪತ್ತೆ ಪ್ರಕರಣವೂ ಸದ್ದು ಮಾಡಿತ್ತು. ಅದರಿಂದಾಗಿ ಅಂತರರಾಷ್ಟ್ರೀಯ ಟೆನಿಸ್ ತಾರೆಯರು ಚೀನಾದ ವಿರುದ್ಧ ದೊಡ್ಡ ಅಭಿಯಾನವನ್ನು ಆರಂಭಿಸಿದ್ದರು. ಆದರೆ, ಕೆಲವು ದಿನಗಳ ಹಿಂದೆ ಪೆಂಗ್ ಒಂದು ಟೆನಿಸ್ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದರು. ಸಾಮಾಜಿಕ ಜಾಲತಾಣದಲ್ಲಿ ಅವರ ಚಿತ್ರಗಳನ್ನು ಪ್ರಕಟಿಸಲಾಗಿತ್ತು.

ಅಭಿಜಿತ್ ಅಜೇಯ ಶತಕ

ರಾಂಚಿ (ಪಿಟಿಐ): ಆರಂಭಿಕ ಬ್ಯಾಟರ್ ಅಭಿಜೀತ್ ತೋಮರ್ ಅವರ ಚೊಚ್ಚಲ ಶತಕದ (ಔಟಾಗದೆ 104, 118ಎಸೆತ, 10 ಬೌಂಡರಿ, 1 ಸಿಕ್ಸರ್) ನೆರವಿನಿಂದ ರಾಜಸ್ಥಾನ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಸೋಲಿಸಿತು.

ಜೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ರಾಜಸ್ಥಾನ ಆರು ವಿಕೆಟ್‌ಗಳಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಪಂಜಾಬ್: 49.4 ಓವರ್‌ಗಳಲ್ಲಿ 219 (ಗುರುಕೀರತ್ ಮಾನ್ 67; ಖಲೀಲ್ ಅಹಮದ್ 36ಕ್ಕೆ 4, ಅನಿಕೇತ್ ಚೌಧರಿ 38ಕ್ಕೆ 4, ಕಮಲೇಶ್ ನಾಗರಕೋಟಿ 50ಕ್ಕೆ 2). ರಾಜಸ್ಥಾನ: 49 ಓವರ್‌ಗಳಲ್ಲಿ 4ಕ್ಕೆ 223 (ಅಭಿಜೀತ್ ತೋಮರ್ ಔಟಾಗದೆ 104). ಫಲಿತಾಂಶ: ರಾಜಸ್ಥಾನ ತಂಡಕ್ಕೆ ಆರು ವಿಕೆಟ್‌ಗಳ ಜಯ

ತಮಿಳುನಾಡು: 50 ಓವರ್‌ಗಳಲ್ಲಿ 8ಕ್ಕೆ 290 (ಎಂ.ಶಾರೂಖ್ ಖಾನ್ 66, ಬಿ. ಇಂದ್ರಜೀತ್ 45, ವಾಷಿಂಗ್ಟನ್ ಸುಂದರ್ 34; ಧವಳ್ ಕುಲಕರ್ಣಿ 45ಕ್ಕೆ 3, ಮೋಹಿತ್ ಅವಸ್ಥಿ 69ಕ್ಕೆ 2). ಮುಂಬೈ: 46.4 ಓವರ್‌ಗಳಲ್ಲಿ 236 (ಶಮ್ಸ್ ಮುಲಾನಿ 75, ಸಾಯಿರಾಜ್ ಪಟೇಲ್ 42; ಎಂ. ಸಿದ್ಧಾರ್ಥ್ 43ಕ್ಕೆ 3, ವಾಷಿಂಗ್ಟನ್ ಸುಂದರ್ 60ಕ್ಕೆ 3, ಸಾಯಿ ಕಿಶೋರ್ 35ಕ್ಕೆ 2). ಫಲಿತಾಂಶ: ತಮಿಳುನಾಡಿಗೆ 54 ರನ್‌ಗಳ ಜಯ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ: ಮನೀಷ್, ಸಿದ್ಧಾರ್ಥ್ ಅರ್ಧಶತಕ

ಸಮರ್ಥ್, ಕೌಶಿಕ್ ಆಟಕ್ಕೆ ಒಲಿದ ಜಯ

ತಿರುವನಂತಪುರ: ಮಧ್ಯಮವೇಗಿ ವಾಸುಕಿ ಕೌಶಿಕ್ ಮತ್ತು ಸ್ಪಿನ್ನರ್ ಜಗದೀಶ್ ಸುಚಿತ್ ಅವರ ಅಮೋಘ ಬೌಲಿಂಗ್ ಮುಂದೆ ಪುದುಚೇರಿ ತಂಡದ ವಿಕೆಟ್‌ಗಳು ತರಗೆಲೆಯಂತೆ ಉದುರಿದವು.

ಮಂಗಳಪುರಂ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡವು ಪುದುಚೇರಿ ಎದುರು 236 ರನ್‌ಗಳ ದೊಡ್ಡ ಅಂತರದ ಜಯ ಸಾಧಿಸಿತು. ಎಡಗೈ ಸ್ಪಿನ್ನರ್ ಸುಚಿತ್ (3–1–3–4) ಮತ್ತು ಬಲಗೈ ಮಧ್ಯಮವೇಗಿ ಕೌಶಿಕ್ (6–1–19–3) ಅವರ ಬೌಲಿಂಗ್ ಮುಂದೆ ಪುದುಚೇರಿಯ ಅನುಭವವಿಲ್ಲದ ಬ್ಯಾಟರ್‌ಗಳು ಹೆಚ್ಚು ಹೊತ್ತು ನಿಲ್ಲಲಿಲ್ಲ.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಪುದುಚೇರಿಯ ಬೌಲರ್ ಸುಬೋಧ್ ಭಾಟಿ ಮೊದಲ ಓವರ್‌ನಲ್ಲಿಯೇ ರೋಹನ್ ಕದಂ ವಿಕೆಟ್ ಗಳಿಸಿದರು. ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಮಿಂಚಿದ್ದ ರೋಹನ್ ಇಲ್ಲಿ ಖಾತೆ ತೆರೆಯಲಿಲ್ಲ.ಆದರೆ, ಎರಡನೇ ವಿಕೆಟ್ ಜೊತೆಯಾಟದಲ್ಲಿ ಆರ್. ಸಮರ್ಥ್ (95; 107ಎಸೆತ, 10ಬೌಂಡರಿ)


ಆರ್. ಸಮರ್ಥ್

ಮತ್ತು ಕೆ.ವಿ. ಸಿದ್ಧಾರ್ಥ್ (61; 93ಎ, 5ಬೌಂಡರಿ) 154 ರನ್‌ಗಳನ್ನು ಸೇರಿಸಿ ಆತಂಕ ನಿವಾರಿಸಿದರು. ಫಾಬಿದ್ ಅಹಮದ್ 33ನೇ ಓವರ್‌ನಲ್ಲಿ ಸಿದ್ಧಾರ್ಥ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಶತಕದತ್ತ ದಾಪುಗಾಲಿಟ್ಟಿದ್ದ ಸಮರ್ಥ್ ಆಟಕ್ಕೆ ಸಾಗರ್ ತ್ರಿವೇದಿ ತಡೆಯೊಡ್ಡಿದರು. ಕಾರ್ತಿಕೆಯನ್ ಜಯಸುಂದರಂ ಪಡೆದ ಉತ್ತಮ ಕ್ಯಾಚ್‌ಗೆ ಸಮರ್ಥ್ ಶತಕದಾಸೆ ಕಮರಿತು. ಈ ಹಂತದಲ್ಲಿ ಜೊತೆಗೂಡಿದ ನಾಯಕ ಮನೀಷ್ ಪಾಂಡೆ (ಔಟಾಗದೆ 64) ಮತ್ತು ವಿಕೆಟ್‌ಕೀಪರ್–ಬ್ಯಾಟರ್ ಶರತ್ ಶ್ರೀನಿವಾಸ್ (55; 42ಎ) ತಂಡಕ್ಕೆ ಆಸರೆಯಾದರು.

ಈ ದೊಡ್ಡ ಮೊತ್ತವನ್ನು ಬೆನ್ನಟ್ಟಿದ ದಾಮೋದರನ್ ರೋಹಿತ್ ಬಳಗಕ್ಕೆ ನಾಲ್ಕನೇ ಓವರ್‌ನಲ್ಲಿ ಕರ್ನಾಟಕದ ವಿದ್ಯಾಧರ್ ಪಾಟೀಲ ಮೊದಲ ಹೊಡೆತ ಕೊಟ್ಟರು. ಎಸ್. ಕಾರ್ತಿಕ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ನಂತರದ ಬೇಟೆಯ ಕೆಲಸವನ್ನು ವಿ. ಕೌಶಿಕ್ ನಿಭಾಯಿಸಿದರು. ಗೋವಿಂದರಾಜನ್, ರೋಹಿತ್ ಮತ್ತು ಕಾರ್ತಿಕೆಯನ್ ಜಯಸುಂದರಂ ವಿಕೆಟ್ ಗಳಿಸಿದರು.

ಪುದುಚೇರಿ ತಂಡದಲ್ಲಿರುವ ಕನ್ನಡಿಗ ಪವನ್ ದೇಶಪಾಂಡೆ (16; 25ಎ, 3ಬೌಂಡರಿ) ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡುವಾಗಲೇ, ರೋಹನ್ ಕದಂ ಚುರುಕಿನ ಫೀಲ್ಡಿಂಗ್ ಮತ್ತು ನಿಖರ ಥ್ರೋನಿಂದಾಗಿ ರನ್‌ಔಟ್ ಆದರು.ನಂತರದ ಆಟದಲ್ಲಿ ಸುಚಿತ್ ನಾಲ್ಕು ಮತ್ತು ಕೆ.ಎಂ. ಕಾರ್ಯಪ್ಪ (6ಕ್ಕೆ1) ವಿಕೆಟ್‌ಗಳನ್ನು ಹಂಚಿಕೊಂಡು ಇನಿಂಗ್ಸ್‌ಗೆ ತೆರೆ ಎಳೆದರು.

ಈ ಪಂದ್ಯದಲ್ಲಿ ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರಿಗೆ ಕಣಕ್ಕಿಳಿಯುವ ಅವಕಾಶ ಲಭಿಸಲಿಲ್ಲ.

ಸ್ಕೋರ್ ಕಾರ್ಡ್

ಕರ್ನಾಟಕ 6ಕ್ಕೆ 289 (50 ಓವರ್)
ಸಮರ್ಥ್ ಸಿ ಕಾರ್ತಿಕೆಯನ್ ಬಿ ತ್ರಿವೇದಿ 95 (107ಎ, 4X10), ರೋಹನ್ ಬಿ ಭಾಟಿ 0 (4ಎ), ಸಿದ್ಧಾರ್ಥ್ ಬಿ ಫಬಿದ್ 61 (93ಎ, 4X5), ಪಾಂಡೆ ಔಟಾಗದೆ 64 (48ಎ, 4X2, 6X4), ಕರುಣ್ ಸಿ ಕಾರ್ತಿಕ್ ಬಿ ತ್ರಿವೇದಿ 6 (7ಎ, 4X1), ಶರತ್ ಸಿ ಫಬಿದ್ ಬಿ ಭಾಟಿ 55 (42ಎ, 4X7, 6X2), ಸುಚಿತ್ ರನೌಟ್ ಡೋಗ್ರಾ 0 (0ಎ)
ಇತರೆ (ಬೈ 3, ಲೆಗ್‌ಬೈ 1, ನೋಬಾಲ್ 1, ವೈಡ್ 3) 8
ವಿಕೆಟ್ ಪತನ: 1-1 (ರೋಹನ್ ಕದಂ, 0.5), 2-154 (ಕೃಷ್ಣಮೂರ್ತಿ ಸಿದ್ಧಾರ್ಥ್, 32.3), 3-172 (ರವಿಕುಮಾರ್ ಸಮರ್ಥ್, 36.2), 4-187 (ಕರುಣ್ ನಾಯರ್, 38.5), 5-282 (ಶ್ರೀನಿವಾಸ್ ಶರತ್, 49.3), 6-289 (ಜಗದೀಶ್ ಸುಚಿತ್, 49.6)
ಬೌಲಿಂಗ್: ಸುಬೋಧ್ ಭಾಟಿ 10–0–62–2, ಆಶಿತ್ ರಾಜೀವ್ 10–0–61–0, ಸಾಗರ್ ತ್ರಿವೇದಿ 10–0–72–2, ಸಾಗರ್ ಉದೇಶಿ 10–0–39–0, ಫಾಬಿದ್ ಅಹಮದ್ 10–0–51–1

ಪುದುಚೇರಿ 53 (17.3 ಓವರ್)
ಕಾರ್ತಿಕ್ ಎಲ್‌ಬಿಡಬ್ಲ್ಯು ವಿದ್ಯಾಧರ್ 7 (9ಎ, 4X1), ಗೋವಿಂದರಾಜನ್ ಸಿ ನಾಯರ್ ಬಿ ಕೌಶಿಕ್ 3 (14ಎ), ದಾಮೋದರನ್ ಸಿ ರೋಹನ್ ಬಿ ಕೌಶಿಕ್ 11 (15ಎ, 4X2), ಪವನ್ ರನೌಟ್ (ರೋಹನ್) 16 (25ಎ, 4X3), ಜಯಸುಂದರಂ ಎಲ್‌ಬಿಡಬ್ಲ್ಯು ಕೌಶಿಕ್ 0 (4ಎ), ಡೋಗ್ರಾ ಎಲ್‌ಬಿಡಬ್ಲ್ಯು ಬಿ ಕಾರ್ಯಪ್ಪ 12 (16ಎ, 4X2), ಫಬಿದ್ ಎಲ್‌ಬಿಡಬ್ಲ್ಯು ಸುಚಿತ್ 0 (1ಎ), ತ್ರಿವೇದಿ ಎಲ್‌ಬಿಡಬ್ಲ್ಯು ಸುಚಿತ್ 1 (12ಎ), ಆಶಿತ್ ಎಲ್‌ಬಿಡಬ್ಲ್ಯು ಸುಚಿತ್ 1 (4ಎ), ಸುಬೋಧ್ ಎಲ್‌ಬಿಡಬ್ಲ್ಯು ಸುಚಿತ್ 0 (1ಎ), ಉದೇಶಿ ಔಟಾಗದೆ 0 (4ಎ)
ಇತರೆ (ಬೈ 1, ವೈಡ್ 1) 2
ವಿಕೆಟ್ ಪತನ: 1-11 (ಎಸ್. ಕಾರ್ತಿಕ್, 3.2), 2-12 (ಎ.ಎಸ್. ಗೋವಿಂದರಾಜನ್, 4.3), 3-33 (ದಾಮೋದರನ್ ರೋಹಿತ್, 8.6), 4-37 (ಜಯಸುಂದರಂ ಕಾರ್ತಿಕೆಯನ್, 10.4), 5-45 (ಪವನ್ ದೇಶಪಾಂಡೆ, 12.2), 6-45 (ಫಾಬಿದ್ ಅಹಮದ್, 12.3), 7-47 (ಸಾಗರ್ ತ್ರಿವೇದಿ, 14.4), 8-49 (ಆಶಿತ್ ರಾಜೀವ್, 16.1), 9-49 (ಸುಬೋಧ್ ಭಾಟಿ, 16.2), 10-53 (ಪಾರಸ್ ಡೋಗ್ರಾ, 17.3)
ಬೌಲಿಂಗ್: ವಾಸುಕಿ ಕೌಶಿಕ್ 6–1–19–3, ವಿದ್ಯಾಧರ್ ಪಾಟೀಲ್ 5–0–22–1, ಎಂ. ವೆಂಕಟೇಶ್ 2–1–2–0, ಜಗದೀಶ್ ಸುಚಿತ್ 3–1–3–4, ಕೆ.ಸಿ.ಕಾರ್ಯಪ್ಪ 1.3–0–6–1

ಫಲಿತಾಂಶ: ಕರ್ನಾಟಕ ತಂಡಕ್ಕೆ 236 ರನ್‌ಗಳ ಜಯ
ಇಂದಿನ ಪಂದ್ಯ: ಕರ್ನಾಟಕ–ತಮಿಳುನಾಡು
ಆರಂಭ: ಬೆಳಿಗ್ಗೆ 9

ದಕ್ಷಿಣ ಆಫ್ರಿಕಾ 'ಎ' ತಿರುಗೇಟು


ಬ್ಲೂಂಫೌಂಟೇನ್ (ಎಎಫ್‌ಪಿ): ಸರೆಲ್ ಎರ್ವಿ (85; 181ಎಸೆತ, 9 ಬೌಂಡರಿ, 1 ಸಿಕ್ಸರ್) ಮತ್ತು ಜುಬೇರ್ ಹಂಝ (78; 117 ಎ, 11 ಬೌಂ) ಅವರ ಅಮೋಘ ಆಟದ ಬಲದಿಂದ ದಕ್ಷಿಣ ಆಫ್ರಿಕಾ 'ಎ' ತಂಡ ಭಾರತ 'ಎ' ಎದುರಿನ ಟೆಸ್ಟ್ ಪಂದ್ಯದಲ್ಲಿ ತಿರುಗೇಟು ನೀಡಿದೆ.

ಮೊದಲ ಇನಿಂಗ್ಸ್‌ನಲ್ಲಿ ಭಾರತ 'ಎ' ಎಂಟು ರನ್ ಮುನ್ನಡೆ ಸಾಧಿಸಿತ್ತು.

ಎರಡನೇ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾ 'ಎ' 58 ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 196 ರನ್ ಗಳಿಸಿದೆ. ಮೂರನೇ ದಿನದಾಟದ ಮುಕ್ತಾಯಕ್ಕೆ ಒಟ್ಟಾರೆ 188 ರನ್‌ಗಳ ಮುನ್ನಡೆ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 'ಎ': 268; ಭಾರತ 'ಎ': 276; ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ 'ಎ': 58 ಓವರ್‌ಗಳಲ್ಲಿ 1ಕ್ಕೆ 196 (ಸರೆಲ್ ಎರ್ವಿ ಬ್ಯಾಟಿಂಗ್ 85, ಪೀಟರ್ ಮಲಾನ್ 27, ಜುಬೇರ್ ಹಂಝ ಬ್ಯಾಟಿಂಗ್ 78).

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,176
ಇಂದಿನ ಅಂತ್ಯ	17,469
▲	293
ದಿನದ ಗರಿಷ್ಠ	17,484

ವಿನಿಮಯ ದರ

$ ಡಾಲರ್	75.5
£ ಪೌಂಡ್	100.04
€ ಯುರೊ	85.23
¥ ಯೆನ್ (100ಕ್ಕೆ)	66.23

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1225(1235)
ಸೂರ್ಯಕಾಂತಿ (ರಿಫೈನ್ಡ್)	₹1270 (1280)
ಪಾಮೋಲಿನ್	₹1185 (1196)

ಸ್ಮಾರ್ಟ್‌ಫೋನ್‌ಗೆ ಸಬ್ಸಿಡಿ: ಅಂಬಾನಿ ಸಲಹೆ

ನವದೆಹಲಿ (ಪಿಟಿಐ): ಸ್ಮಾರ್ಟ್‌ಫೋನ್‌ಗಳನ್ನು ಸಬ್ಸಿಡಿ ದರದಲ್ಲಿ ನೀಡಲು ಯುಎಸ್‌ಒ ನಿಧಿಯನ್ನು ಬಳಕೆ ಮಾಡಬೇಕು ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ. ದೇಶದಲ್ಲಿ 5ಜಿ ತಂತ್ರಜ್ಞಾನಕ್ಕೆ ಚಾಲನೆ ನೀಡುವ ಕೆಲಸವನ್ನು ಆದ್ಯತೆಯ ಮೇಲೆ ಮಾಡಬೇಕು ಎಂದೂ ಅವರು ಒತ್ತಾಯಿಸಿದ್ದಾರೆ.

ದೂರಸಂಪರ್ಕ ಸೇವಾ ವಲಯದ ಕಂಪನಿಗಳು ಪಾವತಿಸುವ ಪರವಾನಗಿ ಶುಲ್ಕದಲ್ಲಿ ಶೇಕಡ 5ರಷ್ಟು ಮೊತ್ತವು ಯುಎಸ್‌ಒ ನಿಧಿಗೆ ಜಮಾ ಆಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ದೂರವಾಣಿ ಸಂಪರ್ಕ ಕಲ್ಪಿಸಲು ಮತ್ತು ಅಲ್ಲಿ ಮೊಬೈಲ್ ಸಂಪರ್ಕಕ್ಕೆ ಅಗತ್ಯವಿರುವ ಮೂಲಸೌಕರ್ಯ ನಿರ್ಮಾಣಕ್ಕೆ ಈ ನಿಧಿಯನ್ನು ಬಳಸಿಕೊಳ್ಳಬೇಕು.

ಆದರೆ, ಮಹಾಲೇಖಪಾಲರ ವರದಿಯ ಅನ್ವಯ ಈ ನಿಧಿಯಲ್ಲಿ ಇರುವ ಮೊತ್ತವು ಪೂರ್ತಿಯಾಗಿ ಬಳಕೆ ಆಗುತ್ತಿಲ್ಲ. ಶೇಕಡ 50ಕ್ಕಿಂತಲೂ ಕಡಿಮೆ ಮೊತ್ತವು ಬಳಕೆ ಆಗಿದೆ ಎಂದು ಸಿಎಜಿ ವರದಿ ಹೇಳಿದೆ. ದೇಶದ ಅಂದಾಜು 28 ಕೋಟಿ ಜನ ಈಗಲೂ 2ಜಿ ಫೀಚರ್ ಫೋನ್ ಬಳಸುತ್ತಿದ್ದಾರೆ ಎಂಬ ಅಂದಾಜು ಇದೆ. 'ಯುಎಸ್‌ಒ ನಿಧಿಯಲ್ಲಿನ ಹಣವನ್ನು ಬಳಸಿ, ನಿರ್ದಿಷ್ಟ ವರ್ಗಗಳ ಜನರಿಗೆ ಸಬ್ಸಿಡಿ ದರದಲ್ಲಿ ಸ್ಮಾರ್ಟ್‌ಫೋನ್ ಸಿಗುವಂತೆ ಮಾಡಬಹುದು' ಎಂದು ಅಂಬಾನಿ ಸಲಹೆ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500- 550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	535
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-43500
ಹಳತು	46000-52500
ಹೊನ್ನಾಳಿ	
ರಾಶಿ	46399-46399
ಕಾರ್ಕಳ	
ಹೊಸತು	40000-43500
ಹಳತು	48000-52500
ಕುಮಟಾ	
ಚಿಪ್ಪು	24869-40199
ಕೋಕ	21019-35019
ಫ್ಯಾಕ್ಟರಿ	13019-18079
ಹಳೆಚಾಲಿ	48019-50439
ಹೊಸಚಾಲಿ	38509-41909
ಕುಂದಾಪುರ	
ಹಳೆಚಾಲಿ	48500-52500
ಹೊಸಚಾಲಿ	38200-43500
ಮಂಗಳೂರು	
ಕೋಕ	10000-32000
ಪುತ್ತೂರು	
ಕೋಕ	11000-26000
ಹೊಸತು	27500-43500
ಶಿವಮೊಗ್ಗ	
ಬೆಟ್ಟೆ	47650-54009
ಗೊರಬಲು	17058-38700
ರಾಶಿ	44589-47559
ಸರಕು	55000-74014
ಶಿರಸಿ	
ಬೆಟ್ಟೆ	26819-45399
ಬಿಳಿಗೋಟು	19299-44599
ಚಾಲಿ	45809-50939
ರಾಶಿ	45899-49989
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	330-665
ದ್ವಿತಳಿ (ಬಿ.ವಿ)	405-783

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,200	15,200	15,250	243.30ಸೆಂಟ್ಸ್
ಎಸಿ	6,750	6,500	6,400	
ಆರ್‌ಪಿ	6,200	-	-	ಲಂಡನ್
ಆರ್‌ಸಿ	3,770	145/kg on O.T	-	2387ಡಾಲರ್ಸ್

ಆರ್‌ಬಿಐ ಕ್ರಮ ಸ್ವಾಗತಿಸಿದ ಷೇರುಪೇಟೆ, ಸೆನ್ಸೆಕ್ಸ್ ಜಿಗಿತ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು ಹೊಂದಾಣಿಕೆಯ ಹಣಕಾಸು ನೀತಿಯನ್ನು ಮುಂದುವರಿಸುವ ತೀರ್ಮಾನ ಕೈಗೊಂಡಿದ್ದು ಹಾಗೂ ಕೊರೊನಾದ ಓಮೈಕ್ರಾನ್ ರೂಪಾಂತರಿ ತಳಿ ಕುರಿತ ಆತಂಕ ತಗ್ಗಿದ್ದು ದೇಶದ ಷೇರುಪೇಟೆಗಳಲ್ಲಿ ತೇಜಿ ವಹಿವಾಟಿಗೆ ಕಾರಣವಾದವು.

ಬುಧವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,016 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 293 ಅಂಶ ಏರಿಕೆ ಕಂಡವು.

ಓಮೈಕ್ರಾನ್ ತಳಿಯು ಡೆಲ್ಟಾ ತಳಿಗಿಂತ ಹೆಚ್ಚಿನ ಪರಿಣಾಮವನ್ನೇನೂ ಉಂಟುಮಾಡಲಿಕ್ಕಿಲ್ಲ ಎಂಬ ವರದಿಗಳು ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಏರುಗತಿಯ ವಹಿವಾಟಿಗೆ ಕಾರಣವಾದವು. ಇದರಿಂದಾಗಿ ದೇಶಿ ಮಾರುಕಟ್ಟೆಗಳಲ್ಲಿ ಉತ್ಸಾಹದ ವಹಿವಾಟು ನಡೆಯಿತು.

ದಿನದ ಕೊನೆಯಲ್ಲಿ ಸೆನ್ಸೆಕ್ಸ್ 58,649 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ನಿಫ್ಟಿ 17,469 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ. ಮಾರ್ಚ್ 30ರ ನಂತರ ಸೆನ್ಸೆಕ್ಸ್ ಒಂದು ದಿನದಲ್ಲಿ ಕಂಡ ಅತಿದೊಡ್ಡ ಜಿಗಿತ ಇದು.

'ಆರ್‌ಬಿಐ ಹೊಂದಾಣಿಕೆಯ ಹಣಕಾಸು ನಿಲುವನ್ನು ಮುಂದುವರಿಸಿದ್ದರಿಂದ ಬಂಡವಾಳ ಮಾರುಕಟ್ಟೆಗಳಲ್ಲಿ ಒಳ್ಳೆಯ ವಹಿವಾಟು ನಡೆಯಿತು. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 9.5ರಷ್ಟು ಇರಲಿದೆ ಎಂದು ಆರ್‌ಬಿಐ ಮತ್ತೆ ಹೇಳಿರುವುದು, ಆರ್ಥಿಕ ಪುನಶ್ಚೇತನದ ಬಗ್ಗೆ ಅದಕ್ಕೆ ಇರುವ ವಿಶ್ವಾಸವನ್ನು ತೋರಿಸುವಂತಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.60ರಷ್ಟು ಹೆಚ್ಚಾಗಿದ್ದು, ಪ್ರತಿ ಬ್ಯಾರೆಲ್‌ಗೆ 75.89 ಡಾಲರ್‌ಗೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 2 ಪೈಸೆ ತಗ್ಗಿದೆ.

ಮುಂಬೈ ಧಾರಣೆ

ಶೇಂಗಾ

8-12-2021

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10050-10100
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1175 (1185)
ಪಾಮ್ ವಾರದ ಡೆಲಿವರಿ	1183 (1194)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1210)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,750 (47,650)
ಬೆಳ್ಳಿ ಕೆ.ಜಿ
61,000 (61,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರೆಪೊ ದರ: ಯಥಾಸ್ಥಿತಿ ಮುಂದುವರಿಕೆ

ನವದೆಹಲಿ: ಕೋವಿಡ್ ಸಾಂಕ್ರಾಮಿಕದ ವಿರುದ್ಧ ಸೆಣಸಲು ಭಾರತವು ಹೆಚ್ಚು ಸನ್ನದ್ಧವಾಗಿದೆ ಎಂದು ಹೇಳಿರುವ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಕೋವಿಡ್‌ನ ಹೊಸ ರೂಪಾಂತರಿ ತಳಿ ಓಮೈಕ್ರಾನ್‌ನಿಂದಾಗಿ ಆರ್ಥಿಕ ಚೇತರಿಕೆಗೆ ಅಪಾಯ ಇದೆ ಎಂಬ ಕಾರಣಕ್ಕೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ತೀರ್ಮಾನಕ್ಕೆ ಬಂದಿದೆ.


ಶಕ್ತಿಕಾಂತ ದಾಸ್

ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು ಶೇಕಡ 4ರ ಮಟ್ಟದಲ್ಲಿಯೇ ಉಳಿಸಿಕೊಳ್ಳುವ ತೀರ್ಮಾನವನ್ನು ಒಕ್ಕೊರಲಿನಿಂದ ಕೈಗೊಂಡಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸಮಿತಿಯ ಸಭೆಯ ನಂತರ ತಿಳಿಸಿದರು.

ಈ ತೀರ್ಮಾನದಿಂದಾಗಿ ಗೃಹ ಸಾಲ, ವಾಹನ ಸಾಲ ಮತ್ತು ವೈಯಕ್ತಿಕ ಸಾಲದ ಮೇಲಿನ ಬಡ್ಡಿ ದರಗಳು ಇನ್ನೂ ಕೆಲವು ಸಮಯದವರೆಗೆ ಈಗಿರುವ ಮಟ್ಟದಲ್ಲಿಯೇ ಮುಂದುವರಿಯಲಿವೆ. ಅಲ್ಲದೆ, ಇದು ಮಾರುಕಟ್ಟೆಯಲ್ಲಿ ಸಾರ್ವಜನಿಕರ ಕಡೆಯಿಂದ ಆಗುವ ಖರೀದಿ ಚಟುವಟಿಕೆಗಳಿಗೆ ಇನ್ನಷ್ಟು ಉತ್ತೇಜನ ನೀಡುವ ನಿರೀಕ್ಷೆ ಇದೆ.

'ದೇಶದ ಅರ್ಥವ್ಯವಸ್ಥೆಯು ಅತಿದೊಡ್ಡ ಕುಸಿತದಿಂದ ಹೊರಗೆ ಬಂದಿದೆ. ನಾವು ಈಗ ಕೋವಿಡ್–19 ಎದುರಿಸುವ ವಿಚಾರದಲ್ಲಿ ಇನ್ನಷ್ಟು ಉತ್ತಮ ಸ್ಥಿತಿಯಲ್ಲಿ ಇದ್ದೇವೆ. ಆದರೆ, ಅರ್ಥ ವ್ಯವಸ್ಥೆಯಲ್ಲಿ ಚಟುವಟಿಕೆಗಳು ಇನ್ನೂ ಕೋವಿಡ್ ಪೂರ್ವದ ಮಟ್ಟಕ್ಕೆ ಬಂದಿಲ್ಲದಿರುವ ಕಾರಣ ಹಣಕಾಸು ನೀತಿಯ ಬೆಂಬಲವು ಅರ್ಥ ವ್ಯವಸ್ಥೆಗೆ ಬೇಕಿದೆ' ಎಂದು ದಾಸ್ ಅವರು ಹೇಳಿದರು.

ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇಕಡ 8.4ರಷ್ಟು ಬೆಳವಣಿಗೆ ಸಾಧಿಸಿದೆ. ಇದು ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತಿ ವೇಗದ ಬೆಳವಣಿಗೆ. ಆದರೆ, ಕೊರೊನಾದ ಓಮೈಕ್ರಾನ್ ತಳಿಯು ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿ ಉಂಟುಮಾಡಬಲ್ಲದು ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

ಓಮೈಕ್ರಾನ್‌ನಿಂದಾಗಿ ಉಂಟಾಗಬಹುದಾದ ಅಪಾಯಗಳ ಬಗ್ಗೆ ಆರ್‌ಬಿಐ ಕೂಡ ಎಚ್ಚರಿಕೆ ನೀಡಿದೆ. ಹೀಗಿದ್ದರೂ, ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇಕಡ 9.5ರಷ್ಟು ಇರಲಿದೆ ಎಂಬ ಅಂದಾಜನ್ನು ಪುನರುಚ್ಚರಿಸಿದೆ.

'ಓಮೈಕ್ರಾನ್ ತಳಿಯು ಹರಡುತ್ತಿರುವುದು ಮತ್ತು ಐದು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಳ ಆಗುತ್ತಿರುವುದು ಆರ್ಥಿಕ ಬೆಳವಣಿಗೆ ದರವನ್ನು ತಗ್ಗಿಸಬಲ್ಲ ಅಪಾಯಗಳಾಗಿ ಕಾಣುತ್ತಿವೆ' ಎಂದು ದಾಸ್ ಅವರು ಹೇಳಿದರು.

ಜಿಡಿಪಿ ಅಂದಾಜು ತಗ್ಗಿಸಿದ ಫಿಚ್

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇಕಡ 8.4ರಷ್ಟು ಬೆಳವಣಿಗೆ ಕಾಣಲಿದೆ ಎಂದು ಫಿಚ್ ರೇಟಿಂಗ್ಸ್ ಅಂದಾಜು ಮಾಡಿದೆ. ಕೋವಿಡ್‌ನ ಎರಡನೆಯ ಅಲೆಯ ನಂತರದಲ್ಲಿ ಅರ್ಥ ವ್ಯವಸ್ಥೆ ಕಂಡಿರುವ ಬೆಳವಣಿಗೆಯು ನಿರೀಕ್ಷೆಗಿಂತಲೂ ಕಡಿಮೆ ಮಟ್ಟದಲ್ಲಿ ಇದೆ ಎಂದು ಅದು ಹೇಳಿದೆ.ಭಾರತವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 8.7ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಫಿಚ್ ರೇಟಿಂಗ್ಸ್ ಈ ಹಿಂದೆ ಅಂದಾಜು ಮಾಡಿತ್ತು. ಮುಂದಿನ ಹಣಕಾಸು ವರ್ಷದಲ್ಲಿ (2022–23) ದೇಶದ ಜಿಡಿಪಿ ಶೇ 10.3ರ ಮಟ್ಟ ತಲುಪಲಿದೆ ಎಂದು ಅದು ಅಂದಾಜಿಸಿದೆ.

ಇ.ವಿ. ನೋಂದಣಿಯಲ್ಲಿ ರಾಜ್ಯಕ್ಕೆ ಮೂರನೆಯ ಸ್ಥಾನ

ನವದೆಹಲಿ (ಪಿಟಿಐ): ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ನೋಂದಣಿಯಲ್ಲಿ ಉತ್ತರ ಪ್ರದೇಶ, ದೆಹಲಿ ಮತ್ತು ಕರ್ನಾಟಕ ಮುಂಚೂಣಿ ಸ್ಥಾನಗಳಲ್ಲಿ ಇವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಗೆ ತಿಳಿಸಿದ್ದಾರೆ.

ದೇಶದಲ್ಲಿ ಇದುವರೆಗೆ ಒಟ್ಟು 8.70 ಲಕ್ಷ ಇ.ವಿ.ಗಳು ನೋಂದಣಿ ಆಗಿವೆ. ಉತ್ತರ ಪ್ರದೇಶದಲ್ಲಿ ಅತಿಹೆಚ್ಚು ಇ.ವಿ.ಗಳು (2.55 ಲಕ್ಷ) ನೋಂದಣಿ ಆಗಿವೆ ಎಂದು ಗಡ್ಕರಿ ತಿಳಿಸಿದ್ದಾರೆ. ದೆಹಲಿಯಲ್ಲಿ 1.25 ಲಕ್ಷ ಹಾಗೂ ಕರ್ನಾಟಕದಲ್ಲಿ 72 ಸಾವಿರ ಇ.ವಿ.ಗಳು ನೋಂದಣಿ ಆಗಿವೆ.

ಐ.ಟಿ. ವಲಯದಲ್ಲಿ 3.75 ಲಕ್ಷ ಉದ್ಯೋಗ

ಮುಂಬೈ (ಪಿಟಿಐ): ದೇಶದ ಹಲವು ಕಂಪನಿಗಳು ತ್ವರಿತವಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿರುವ ಕಾರಣ, ಐ.ಟಿ. ಮತ್ತು ವಾಣಿಜ್ಯ ಪ್ರಕ್ರಿಯೆ ನಿರ್ವಹಣೆ ಉದ್ಯಮವು ಪ್ರಸಕ್ತ ಹಣಕಾಸು ವರ್ಷದಲ್ಲಿ ಹೊಸದಾಗಿ 3.75 ಲಕ್ಷ ಉದ್ಯೋಗ ಸೃಷ್ಟಿಸುವ ನಿರೀಕ್ಷೆ ಇದೆ ಎಂದು ಟೀಮ್‌ಲೀಸ್ ಡಿಜಿಟಲ್ ಸಂಸ್ಥೆ ಸಿದ್ಧಪಡಿಸಿರುವ ವರದಿ ಹೇಳಿದೆ.


ಜಿಲ್ಲಿ ದಲಾಬೆಹರಾ

ವೇಟ್‌ಲಿಫ್ಟಿಂಗ್: ಜಿಲ್ಲಿಗೆ ಬೆಳ್ಳಿ ಪದಕ

ತಾಷ್ಕೆಂಟ್ (ಪಿಟಿಐ): ಭಾರತದ ಜಿಲ್ಲಿ ದಲಾಬೆಹರಾ ಅವರು ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಮಹಿಳೆಯರ 49 ಕೆಜಿ ವಿಭಾಗದಲ್ಲಿ ಅವರು 167 ಕೆಜಿ (73 ಕೆಜಿ ಸ್ನ್ಯಾಚ್ +94 ಕೆಜಿ ಕ್ಲೀನ್ ಮತ್ತು ಜರ್ಕ್) ಭಾರ ಎತ್ತುವುದರ ಮೂಲಕ ಈ ಸಾಧನೆ ಮಾಡಿದರು. ನೈಜೀರಿಯಾದ ಸ್ಟೆಲ್ಲಾ ಕಿಂಗ್‌ಸ್ಲೆ (168 ಕೆಜಿ) ಚಿನ್ನದ ಪದಕ ಗಳಿಸಿದರು.

ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್ ಹಾಗೂ ವಿಶ್ವ ಚಾಂಪಿಯನ್‌ಷಿಪ್‌ನಿಂದ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು ಹಿಂದೆ ಸರಿದಿದ್ದು, ಅವರು ಸ್ಪರ್ಧಿಸುತ್ತಿದ್ದ ತೂಕ ವಿಭಾಗದಲ್ಲಿ ಜಿಲ್ಲಿ ಸ್ಪರ್ಧಿಸಿದ್ದರು.

ಅಖಿಲ ಭಾರತ ಪೊಲೀಸ್ ಹಾಕಿ: ಜಲಂಧರ್‌ನ ಐಟಿಬಿಪಿ ಎದುರಾಳಿ

ಸೆಮಿಗೆ ಕರ್ನಾಟಕ ಪೊಲೀಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾರ್ಖಂಡ್ ಪೊಲೀಸ್ ತಂಡದ ಪ್ರಬಲ ಪೈಪೋಟಿ ಮೀರಿ ನಿಂತ ಕರ್ನಾಟಕ ಪೊಲೀಸ್ ತಂಡ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿತು.

ಬೆಂಗಳೂರು ಹಾಕಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎಂಟರ ಘಟ್ಟದ ಹಣಾಹಣಿಯಲ್ಲಿ ಕರ್ನಾಟಕ ತಂಡ ಜಾರ್ಖಂಡ್ ಪೊಲೀಸ್ ವಿರುದ್ಧ 1–0 ಅಂತರದ ಜಯ ಸಾಧಿಸಿತು. ಕೊನೆಯ ಕ್ವಾರ್ಟರ್‌ನಲ್ಲಿ (54ನೇ ನಿಮಿಷ) ಉಮೇಶ್ ಆರ್.ಮುತಗಾರ್ ಗಳಿಸಿದ ಗೋಲು ಕರ್ನಾಟಕದ ಕೈ ಬಲಪಡಿಸಿತು.

ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ತಮಿಳುನಾಡು ಪೊಲೀಸ್ 2–1ರಲ್ಲಿ ಒಡಿಶಾ ಪೊಲೀಸ್ ವಿರುದ್ಧ ಜಯ ಗಳಿಸಿ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತು. ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ತಲಾ ಒಂದೊಂದು ಗೋಲು ಗಳಿಸಿ ಮುನ್ನಡೆ ಸಾಧಿಸಿದ್ದ ತಮಿಳುನಾಡು ಕೊನೆಯ ಕ್ವಾರ್ಟರ್‌ನಲ್ಲಿ ಒಂದು ಗೋಲು ಬಿಟ್ಟುಕೊಟ್ಟಿತು.

ಕೆ.ಕಳಿರಾಜ್ 14ನೇ ನಿಮಿಷದಲ್ಲೂ ಎಂ.ವಿಜಯ್ 25ನೇ ನಿಮಿಷದಲ್ಲೂ ತಮಿಳುನಾಡು ತಂಡಕ್ಕಾಗಿ ಚೆಂಡನ್ನು ಗುರಿ ಮುಟ್ಟಿಸಿದರು. ಒಡಿಶಾ ಪರವಾಗಿ ವಿಕಾಸ್ ಲಾಕ್ರ 55ನೇ ನಿಮಿಷದಲ್ಲಿ ಗೋಲು ಗಳಿಸಿದರು. ಪಂಜಾಬ್ ಪೊಲೀಸ್ 2–0ಯಿಂದ ದೆಹಲಿಯ ಸಿಐಎಸ್‌ಎಫ್ ವಿರುದ್ಧ ಗೆಲುವು ಸಾಧಿಸಿತು. ಹರದೀಪ್ ಸಿಂಗ್ (14ನೇ ನಿಮಿಷ) ಮತ್ತು ದೂಪಿಂದರ್ ದೀಪ್ ಸಿಂಗ್ (36ನೇ ನಿ) ಗೋಲು ಗಳಿಸಿದರು.

ಮೊದಲ ಕ್ವಾರ್ಟರ್ ಫೈನಲ್‌ನಲ್ಲಿ ಜಲಂಧರ್‌ನ ಇಂಡೊ ಟಿಬೆಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) 2–1ರಲ್ಲಿ ಸಿಆರ್‌ಪಿಎಫ್ ವಿರುದ್ಧ ಜಯ ಗಳಿಸಿತು.

ಆರಂಭದಲ್ಲೇ ಆಕ್ರಮಣಕಾರಿ ಆಟವಾಡಿದ ಐಟಿಬಿಪಿ ಏಳನೇ ನಿಮಿಷದಲ್ಲಿ ಜಸ್ವಿಂದರ್ ಸಿಂಗ್ ಅವರ ಗೋಲಿನೊಂದಿಗೆ ಮುನ್ನಡೆ ಸಾಧಿಸಿತು. 12ನೇ ನಿಮಿಷದಲ್ಲಿ ರಾಹುಲ್ ಶರ್ಮಾ ಮೂಲಕ ಸಿಆರ್‌ಪಿಎಫ್ ತಿರುಗೇಟು ನೀಡಿತು. ಆದರೆ 41ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಬಿಟ್ಟುಕೊಟ್ಟು ಕೈಸುಟ್ಟುಕೊಂಡಿತು. ರವಿ ಝೆಸ್ ಚೆಂಡನ್ನು ಗುರಿ ಸೇರಿಸಿದರು.

ಶುಕ್ರವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಕರ್ನಾಟಕ ಮತ್ತು ಐಟಿಬಿಪಿ, ತಮಿಳುನಾಡು ಮತ್ತು ಪಂಜಾಬ್ ಪೊಲೀಸ್ ಮುಖಾಮುಖಿಯಾಗಲಿವೆ.


ಕರ್ನಾಟಕ ಪೊಲೀಸ್ ತಂಡದ ಉಮೇಶ್ ಆರ್.ಮುತಗಾರ್ (ಮುಂದೆ ಇರುವವರು) ಜಾರ್ಖಂಡ್ ಪೊಲೀಸ್‌ನ ಬೀರೇಂದರ್ ಬೆಂಗ್ರಾ ಅವರಿಂದ ಚೆಂಡು ಕಸಿದುಕೊಂಡು ಮುನ್ನುಗ್ಗಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ

ಚಾಂಪಿಯನ್ಸ್ ಟ್ರೋಫಿ: ಕೊರಿಯಾ ಎದುರಿನ ಪಂದ್ಯ ರದ್ದು

ಮಹಿಳಾ ಹಾಕಿ ತಂಡದಲ್ಲಿ ಕೋವಿಡ್

ಡಾಂಘೆ, ದಕ್ಷಿಣ ಕೊರಿಯಾ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದಲ್ಲಿ ಕೋವಿಡ್–19 ಕಾಣಿಸಿಕೊಂಡಿದೆ. ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡಲು ಇಲ್ಲಿಗೆ ಬಂದಿರುವ ತಂಡದ ಆಟಗಾರ್ತಿಯೊಬ್ಬರು ಸೋಂಕಿಗೆ ಒಳಗಾಗಿರುವುದು ಖಚಿತವಾಗಿದೆ.

ಆತಿಥೇಯ ದಕ್ಷಿಣ ಕೊರಿಯಾ ಎದುರಿನ ಭಾರತದ ಪಂದ್ಯವನ್ನು ಕೋವಿಡ್ ಹಿನ್ನೆಲೆಯಲ್ಲಿ ರದ್ದುಗೊಳಿಸಲಾಗಿದೆ. ಈ ವಿಷಯವನ್ನು ಏಷ್ಯನ್ ಹಾಕಿ ಫೆಡರೇಷನ್ ಟ್ವೀಟ್ ಮಾಡುವ ಮೂಲಕ ಬಹಿರಂಗ ಮಾಡಿದೆ.

ಮಲೇಷ್ಯಾ ತಂಡದ ಆಟಗಾರ್ತಿ ನೂರುಲ್ ಫಯೆಜಾ ಶಿಫೀಕಾ ಖಲೀಮ್ ಅವರಲ್ಲಿ ಸೋಂಕು ಕಾಣಿಸಿಕೊಂಡ ಕಾರಣ ಭಾರತದ ಎದುರಿನ ಪಂದ್ಯವನ್ನು ಸೋಮವಾರ ರದ್ದುಪಡಿಸಲಾಗಿತ್ತು. ಸೋಂಕಿನ ಹಿನ್ನೆಲೆಯಲ್ಲಿ ತಂಡದ ಎಲ್ಲರನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಈಗ ಭಾರತ ತಂಡವೂ ಕ್ವಾರಂಟೈನ್‌ಗೆ ಒಳಗಾಬೇಕಾಗಿದೆ.

ಭಾರತ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ವಿರುದ್ಧ 13–0ಯಿಂದ ಜಯಿಸಿತ್ತು. ಡ್ರ್ಯಾಗ್ ಫ್ಲಿಕ್ಕರ್ ಗುರ್ಜೀತ್ ಕೌರ್ ಐದು ಗೋಲು ಗಳಿಸಿದ್ದರು. ಎರಡನೇ ಪಂದ್ಯ ಮಲೇಷ್ಯಾ ವಿರುದ್ಧ ನಿಗದಿಯಾಗಿತ್ತು.

ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ ತಂಡಗಳ ಪೈಕಿ ಭಾರತ ಅಂತರರಾಷ್ಟ್ರೀಯ ರ‍್ಯಾಂಕಿಂಗ್‌ನಲ್ಲಿ ಗರಿಷ್ಠ, ಒಂಬತ್ತನೇ ಸ್ಥಾನದಲ್ಲಿದೆ. 2020ರಲ್ಲಿ ನಡೆಯಬೇಕಾಗಿದ್ದ ಮಹಿಳೆಯರ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಕೋವಿಡ್–19ರ ಕಾರಣದಿಂದ ಮುಂದೂಡಲಾಗಿತ್ತು.

ಪ್ರೊ ಕಬಡ್ಡಿಗೆ ಹೊಸ ಘೋಷವಾಕ್ಯ

ಬೆಂಗಳೂರು: ಎರಡು ವರ್ಷಗಳ ಬಳಿಕ ಪ್ರೊ ಕಬಡ್ಡಿ ಮತ್ತೆ ಆರಂಭವಾಗಲಿದೆ.

ಇದೇ 22ರಿಂದ ನಡೆಯಲಿರುವ ಟೂರ್ನಿಯ ಘೋಷವಾಕ್ಯ 'ಜೋ ಭಿಡೆಗಾ ವೊ ಬಡೇಗಾ' ಆಗಿದೆ.

ಇದರ ಪ್ರಚಾರ ಜಾಹೀರಾತಿನಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಕಾಣಿಸಿಕೊಂಡಿದ್ದಾರೆ.

ಲೀಗ್‌ನ ಪ್ರಸಾರ ಹಕ್ಕುಗಳನ್ನು ಹೊಂದಿರುವ ಸ್ಟಾರ್ ಸ್ಪೋರ್ಟ್ಸ್ ಸೋಮವಾರ ಈ ಆವೃತ್ತಿಗಾಗಿ ಪ್ರೋಮೋವನ್ನು ಬಿಡುಗಡೆ ಮಾಡಿದೆ. ಡಿಸ್ನಿ ಹಾಟ್‌ಸ್ಟಾರ್ ಕೂಡ ಪಂದ್ಯಗಳ ನೇರ ಪ್ರಸಾರ ಮಾಡಲಿದೆ.

ಪ್ರೊ ಕಬಡ್ಡಿ ಲೀಗ್‌ನ ಒಂದು ನಿಮಿಷದ ಪ್ರೋಮೋದಲ್ಲಿ ಧೋನಿ ಕಾಣಿಸಿಕೊಂಡಿದ್ದಾರೆ. ಪ್ರೋಮೋದ ಥೀಮ್ 'ಲೇ ಪಂಗಾ' ಆಗಿದ್ದರೆ, ಅದರ ಘೋಷವಾಕ್ಯ 'ಜೊ ಭಿಡೆಗಾ ವೊ ಬಡೇಗಾ' (ಹೋರಾಡುವವರು ಮುನ್ನಡೆಯುವರು) ಆಗಿದೆ.


ಮಹೇಂದ್ರ ಸಿಂಗ್ ಧೋನಿ

ರಾಜ್ಯಮಟ್ಟದ ರ‍್ಯಾಪಿಡ್ ಚೆಸ್ ಟೂರ್ನಿ 19ರಂದು

ಬೆಂಗಳೂರು: ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯು ಇದೇ 19ರಂದು ವಿವಿಧ ವಯೋಮಾನದವರಿಗಾಗಿ ರ‍್ಯಾಪಿಡ್ ಚೆಸ್ ಟೂರ್ನಿ ಆಯೋಜಿಸಲಿದೆ.

ಹೊಸಕೋಟೆ ತಾಲ್ಲೂಕಿನ ಚನ್ನಸಂದ್ರದ ತಿರುಮಲಶೆಟ್ಟಿಹಳ್ಳಿಯಲ್ಲಿರುವ ಶ್ರೀ ಸಾಯಿ ಪ್ಯಾಲೇಸ್ ಸಭಾಂಗಣದಲ್ಲಿ ಟೂರ್ನಿ ನಡೆಯಲಿದ್ದು 7,9,11,14 ವರ್ಷದೊಳಗಿನವರು ಮತ್ತು ಮುಕ್ತ ವಿಭಾಗದವರಿಗೆ ಪ್ರತ್ಯೇಕ ಸ್ಪರ್ಧೆಗಳು ಪಾಲ್ಗೊಳ್ಳಬಹುದಾಗಿದೆ.

ಮಾಹಿತಿಗೆ www.karnatakachess.com ಸಂಪರ್ಕಿಸಬಹುದಾಗಿದೆ ಎಂದು ಕಾರ್ಯದರ್ಶಿ ಎ.ಚಿದಾನಂದ (9663405589) ತಿಳಿಸಿದ್ದಾರೆ.

ಆನೆ ದಾಳಿಗೆ ಇಬ್ಬರು ಸಿಬ್ಬಂದಿ ಸಾವು

ಕೊಲಂಬೊ (ಪಿಟಿಐ): ಆನೆಯ ದಾಳಿಯಿಂದಾಗಿ ಮಹಿಂದಾ ರಾಜಪಕ್ಸೆ ಕ್ರೀಡಾಂಗಣದ ಇಬ್ಬರು ಸಿಬ್ಬಂದಿ ಮೃತಪಟ್ಟ ಘಟನೆ ನಡೆದಿದೆ.

ಮಂಗಳವಾರ ರಾತ್ರಿ ಹಂಬಂತೋಟಾದ ಸೂರಿಯವೆವಾದಲ್ಲಿರುವ ಕ್ರೀಡಾಂಗಣದ ಹೊರಗೆ ಈ ಸಿಬ್ಬಂದಿ, ಕೆಲಸ ಮುಗಿಸಿ ಮೋಟಾರ್‌ಸೈಕಲ್‌ನಲ್ಲಿ ಮನೆಗೆ ತೆರಳುತ್ತಿದ್ದಾಗ ಘಟನೆ ನಡೆದಿದೆ ಎಂದು ಶ್ರೀಲಂಕಾ ಕ್ರಿಕೆಟ್ ಅಧಿಕಾರಿಗಳು ತಿಳಿಸಿದ್ದಾರೆ.

ಆ್ಯಷಸ್ ಸರಣಿಯ ಮೊದಲ ಪಂದ್ಯ: ವೇಗದ ದಾಳಿಗೆ ಬ್ಯಾಟರ್‌ಗಳು ತತ್ತರ

ಇಂಗ್ಲೆಂಡ್ ಬ್ಯಾಟಿಂಗ್‌ಗೆ ಪ್ಯಾಟ್ ಪೆಟ್ಟು

ಬ್ರಿಸ್ಬೇನ್ (ಎಎಫ್‌ಪಿ): ನಾಯಕನಾಗಿ ಆಡಿದ ಮೊದಲ ಪಂದ್ಯದಲ್ಲೇ ಅಮೋಘ ದಾಳಿ ನಡೆಸಿದ ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಅವರು ಆ್ಯಷಸ್ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾಗೆ ಕನಸಿನ ಆರಂಭ ಒದಗಿಸಿದರು.

ಐದು ವಿಕೆಟ್ ಗಳಿಸಿದ ಕಮಿನ್ಸ್ ಸೇರಿದಂತೆ ಮೂವರು ವೇಗಿಗಳ ಪ್ರಬಲ ದಾಳಿಗೆ ನಲುಗಿದ ಇಂಗ್ಲೆಂಡ್ ತಂಡ ಸರಣಿಯ ಮೊದಲ ಪಂದ್ಯದ ಮೊದಲ ದಿನ 147 ರನ್‌ಗಳಿಗೆ ಪತನಗೊಂಡಿತು. ಮಳೆ ಕಾಡಿದ್ದರಿಂದ ಆತಿಥೇಯರಿಗೆ ಬ್ಯಾಟಿಂಗ್ ಆರಂಭಿಸಲು ಸಾಧ್ಯವಾಗಲಿಲ್ಲ.

ಗಾಬಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಪ್ರವಾಸಿ ತಂಡದ ನಾಯಕ ಜೋ ರೂಟ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಹಸಿರು ತುಂಬಿದ ಪಿಚ್‌ನಲ್ಲಿ ಪುಟಿದೇಳುತ್ತಿದ್ದ ಚೆಂಡಿನ ಗತಿಯನ್ನು ಗಮನಿಸಲು ವಿಫಲರಾದ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು. 50.1 ಓವರ್‌ಗಳಲ್ಲಿ ಇನಿಂಗ್ಸ್‌ಗೆ ತೆರೆ ಎಳೆಯಲು ಆಸ್ಟ್ರೇಲಿಯಾ ಬೌಲರ್‌ಗಳು ಯಶಸ್ವಿಯಾದರು.

ಮೊದಲ ಪಂದ್ಯದಲ್ಲೇ ರೋರಿ ಬರ್ನ್ಸ್ ಅವರನ್ನು ಬೌಲ್ಡ್ ಮಾಡಿದ ಮಿಚೆಲ್ ಸ್ಟಾರ್ಕ್ ಆಘಾತ ನೀಡಿದರು. ತಂಡದ ಮೊತ್ತ 11 ರನ್ ಆಗುವಷ್ಟರಲ್ಲಿ ಡೇವಿಡ್ ಮಲಾನ್ ಅವರನ್ನು ಜೋಶ್ ಹ್ಯಾಜಲ್‌ವುಡ್ ವಾಪಸ್ ಕಳುಹಿಸಿದರು. ಅದೇ ಮೊತ್ತಕ್ಕೆ ರೂಟ್ ಕೂಡ ಮರಳಿದರು. ಒಂಬತ್ತು ಎಸೆತ ಎದುರಿಸಿದ ಅವರಿಗೆ ಖಾತೆ ತೆರೆಯಲು ಸಾಧ್ಯವಾಗಲಿಲ್ಲ.

ಬೆನ್ ಸ್ಟೋಕ್ಸ್ ವಿಕೆಟ್ ಗಳಿಸುವ ಮೂಲಕ ಪ್ಯಾಟ್ ಕಮಿನ್ಸ್ ಈ ಪಂದ್ಯದಲ್ಲಿ ತಮ್ಮ ಮೊದಲ ಬಲಿ ಪಡೆದುಕೊಂಡರು. ಆರಂಭಿಕ ಬ್ಯಾಟರ್ ಹಸೀಬ್ ಹಮೀದ್ ಮತ್ತು ಆರನೇ ಕ್ರಮಾಂಕದ ಒಲಿ ಪೋಲ್ ಇನಿಂಗ್ಸ್‌ಗೆ ಚೇತರಿಕೆ ತುಂಬುವ ಭರವಸೆ ಮೂಡಿಸಿದರು. ಆದರೆ ಹಸೀಬ್ ವಿಕೆಟ್ ಉರುಳಿಸುವ ಮೂಲಕ 31 ರನ್‌ಗಳ ಜೊತೆಯಾಟವನ್ನು ಕಮಿನ್ಸ್ ಮುರಿದರು.

ಒಲಿ ಪೋಪ್ ಮತ್ತು ಜೋಸ್ ಬಟ್ಲರ್ ಸ್ವಲ್ಪ ಪ್ರತಿರೋಧ ತೋರಿದರು. ಬಟ್ಲರ್ ಆಕ್ರಮಣಕಾರಿ ಆಟದ ಮೂಲಕ ರಂಜಿಸಿದರು. ಮೊತ್ತ ಮೂರಂಕಿ ದಾಟಿ ಸ್ವಲ್ಪದರಲ್ಲೇ ಬಟ್ಲರ್ ಪದಾರ್ಪಣೆ ಮಡಿದ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿಗೆ ಕ್ಯಾಚ್ ನೀಡಿದರು. ನಂತರ ವಿಕೆಟ್‌ಗಳು ಬೇಗನೇ ಉರುಳಿದವು. 24 ಎಸೆತಗಳಲ್ಲಿ 21 ರನ್ ಗಳಿಸಿದ ಕ್ರಿಸ್ ವೋಕ್ಸ್ ಕೊನೆಯದಾಗಿ ವಿಕೆಟ್ ಒಪ್ಪಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್, ಮೊದಲ ಇನಿಂಗ್ಸ್: 50.1 ಓವರ್‌ಗಳಲ್ಲಿ 147 (ಹಸೀಬ್ ಹಮೀದ್ 25, ಒಲಿ ಪೋಪ್ 35, ಜೋಸ್ ಬಟ್ಲರ್ 39, ಕ್ರಿಸ್ ವೋಕ್ಸ್ 21; ಮಿಚೆಲ್ ಸ್ಟಾರ್ಕ್ 35ಕ್ಕೆ2, ಜೋಶ್ ಹ್ಯಾಜಲ್‌ವುಡ್ 42ಕ್ಕೆ2, ಪ್ಯಾಟ್ ಕಮಿನ್ಸ್ 38ಕ್ಕೆ5, ಕ್ಯಾಮರಾನ್ ಗ್ರೀನ್ 6ಕ್ಕೆ1).


ಪ್ಯಾಟ್ ಕಮಿನ್ಸ್ –ಎಎಫ್‌ಪಿ ಚಿತ್ರ


ಜೋಸ್ ಬಟ್ಲರ್ –ಎಎಫ್‌ಪಿ ಚಿತ್ರ

ಎಲ್ಲರೂ ಉತ್ತಮ ಲಯದಲ್ಲಿದ್ದು ಸರಿಯಾದ ಅರಂಭ ಕಂಡಿದ್ದೇವೆ. ಇಂಗ್ಲೆಂಡ್ ತಂಡವನ್ನು 150 ರನ್‌ಗಳ ಒಳಗೆ ನಿಯಂತ್ರಿಸಲು ಸಾಧ್ಯವಾದದ್ದು ಅತ್ಯಂತ ಖುಷಿಯ ಸಂಗತಿ.


ಪ್ಯಾಟ್ ಕಮಿನ್ಸ್ ಆಸ್ಟ್ರೇಲಿಯಾ ನಾಯಕ

ಡಾನ್ ಬ್ರಾಡ್ಮನ್ ಬ್ಯಾಟ್ ಹರಾಜಿಗೆ

ಮೆಲ್ಬರ್ನ್ (ಪಿಟಿಐ): ಆ್ಯಷಸ್ ಸರಣಿಯಲ್ಲಿ ಸ್ಮರಣೀಯ ಸಾಧನೆ ಮಾಡಿರುವ ಡೊನಾಲ್ಡ್ ಬ್ರಾಡ್ಮನ್ ಅವರ ಐತಿಹಾಸಿಕ ಬ್ಯಾಟ್ ಹರಾಜಾಗಲಿದೆ. 1934ರ ಸರಣಿಯಲ್ಲಿ ಎರಡು ತ್ರಿಶತಕಗಳನ್ನು ಸಿಡಿಸಲು ಬ್ರಾಡ್ಮನ್ ಬಳಸಿದ್ದ ಬ್ಯಾಟ್ ಇದಾಗಿದೆ.

ಆರಂಭಿಕ ಬ್ಯಾಟರ್ ಬಿಲ್ ಪಾನ್ಸ್‌ಫಾರ್ಡ್ ಅವರ ಜೊತೆ ಮೊದಲ ವಿಕೆಟ್‌ಗೆ ದಾಖಲೆಯ 451 ರನ್ ಸೇರಿಸುವುದಕ್ಕೂ ಬ್ರಾಡ್ಮನ್ ಈ ಬ್ಯಾಟ್ ಬಳಸಿದ್ದರು. ನ್ಯೂ ಸೌತ್ ವೇಲ್ಸ್‌ನ ಸದರ್ನ್ ಹೈಲ್ಯಾಂಡ್ಸ್‌ನಲ್ಲಿರುವ ಖಾಸಗಿ ಮಾಲೀಕತ್ವದ ಬ್ರಾಡ್ಮನ್ ವಸ್ತುಸಂಗ್ರಹಾಲಯದಲ್ಲಿ 1999ರಿಂದ ಈ ಬ್ಯಾಟನ್ನು ಪ್ರದರ್ಶನಕ್ಕಿಡಲಾಗಿದೆ.

1934ರ ಆ್ಯಷಸ್ ಸರಣಿಯ ಎಲ್ಲ ಐದು ಪಂದ್ಯಗಳಲ್ಲಿ ಈ ಬ್ಯಾಟ್ ಬಳಸಿ ಬ್ರಾಡ್ಮನ್ ಆಡಿದ್ದರು. ಸರಣಿಯಲ್ಲಿ ಒಟ್ಟು 758 ರನ್ ಕಲೆ ಹಾಕಿದ್ದರು. 52 ಟೆಸ್ಟ್ ಪಂದ್ಯಗಳಲ್ಲಿ 6996 ರನ ಗಳಿಸಿರುವ ಬ್ರಾಡ್ಮನ್ ಆ್ಯಷಸ್ ಸರಣಿಯ ಹೆಡಿಂಗ್ಲಿ ಪಂದ್ಯದಲ್ಲಿ 304 ಮತ್ತು ಓವಲ್ ಪಂದ್ಯದಲ್ಲಿ 244 ರನ್ ಗಳಿಸಿದ್ದರು.


ಡೊನಾಲ್ಡ್ ಬ್ರಾಡ್ಮನ್ –ಟ್ವಿಟರ್ ಚಿತ್ರ

ಇಂಗ್ಲೆಂಡ್‌ಗೆ ಪೊಲೀಸ್ ತನಿಖೆಯ ಬಿಸಿ!

ಆಸ್ಟ್ರೇಲಿಯಾದ ವೇಗದ ಬೌಲಿಂಗ್ ದಾಳಿಗೆ ನಲುಗಿದ ಇಂಗ್ಲೆಂಡ್ ಬ್ಯಾಟರ್‌ಗಳು ಸ್ಥಳೀಯ ಪೊಲೀಸರ ದಾಳಿಯನ್ನೂ ಎದುರಿಸಬೇಕಾಗಿದೆ!

ಮೊದಲ ಇನಿಂಗ್ಸ್‌ನಲ್ಲಿ 150 ರನ್ ಗಳಿಸುವುದಕ್ಕೂ ವಿಫಲವಾದ ಇಂಗ್ಲೆಂಡ್ ತಂಡವನ್ನು ಛೇಡಿಸಿರುವ ಕ್ವೀನ್ಸ್‌ಲ್ಯಾಂಡ್ ಪೊಲೀಸರು 'ಟೆಸ್ಟ್ ಬ್ಯಾಟಿಂಗ್ ಕ್ರಮಾಂಕವನ್ನು ಸುಮ್ಮನೇ ಸಾಗಹಾಕುವುದಕ್ಕಾಗಿ ಗುಂಪೊಂದು ಪ್ರಯತ್ನಿಸಿದ್ದು ಅದರ ಬಗ್ಗೆ ತನಿಖೆ ನಡೆಸಲಾಗುವುದು' ಎಂದು ಟ್ವೀಟ್ ಮಾಡಿ ಗಮನ ಸೆಳೆದಿದ್ದಾರೆ.

ಆಸ್ಟ್ರೇಲಿಯಾ ತಂಡದ ಆಟಗಾರರ ಹೆಸರನ್ನು ಬಳಸಿ ಸಂದೇಶಗಳನ್ನು ರವಾನಿಸುವ ಮೂಲಕವೂ ಪೊಲೀಸರು ಕ್ರಿಕೆಟ್ ಬಗ್ಗೆ ತಮಗಿರುವ ಕುತೂಹಲವನ್ನು ಬಹಿರಂಗಗೊಳಿಸಿದ್ದರು. ಟ್ರಾಫಿಕ್ ಮಾಹಿತಿಯನ್ನು ಅಪ್‌ಡೇಟ್ ಮಾಡುವಾಗ ನಾಯಕ ಪ್ಯಾಟ್ ಕಮಿನ್ಸ್ ಹೆಸರನ್ನು ಉಲ್ಲೇಖಿಸಿದ್ದ ಪೊಲೀಸರು 'ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರು ಧಾವಿಸುವ ಸಾಧ್ಯತೆ ಇದೆ. ಆದ್ದರಿಂದ ನಿಮ್ಮ 'ಕಮಿನ್ಸ್' ಮತ್ತು ಗೋಯಿಂಗ್ಸ್ (ಬರುವಿಕೆ ಮತ್ತು ಹೋಗುವಿಕೆ) ಮೇಲೆ ಎಚ್ಚರವಿರಲಿ' ಎಂದು ಹೇಳಿದ್ದರು.

ಗಾಬಾ ಕ್ರೀಡಾಂಗಣದ ಬಳಿ ಗ್ರೀನ್ ಲೈಟ್ಸ್ (ಕ್ಯಾಮರಾನ್ ಗ್ರೀನ್) ಮಾತ್ರ ಇವೆ ಎಂದು ಹೇಳಿದರೆ ನಾವು ಲಯನ್ (ನೇಥನ್ ಲಯನ್) ಎನಿಸಿಕೊಳ್ಳುವೆವು. ಆದ್ದರಿಂದ ನಾವು ವಾರ್ನರ್ (ಡೇವಿಡ್ ವಾರ್ನರ್) ಅಲ್ಲವೆಂದು ತಿಳಿದುಕೊಳ್ಳಬೇಡಿ' ಎಂದು ಟ್ವೀಟ್ ಮಾಡಿಯೂ ಕ್ವೀನ್ಸ್‌ಲ್ಯಾಂಡ್ ರಾಜಧಾನಿ ಬ್ರಿಸ್ಬೇನ್‌ನ ಪೊಲೀಸರು ನಗೆಯುಕ್ಕಿಸಿದ್ದರು.

ಐಎಸ್‌ಎಲ್: ಇಂದು ಮುಂಬೈ – ಜೆಎಫ್‌ಸಿ ಹಣಾಹಣಿ

ಎಚ್‌ಎಫ್‌ಸಿಗೆ ಮಣಿದ ಬಿಎಫ್‌ಸಿ

ಬ್ಯಾಂಬೊಲಿಮ್ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಮತ್ತೊಂದು ಪಂದ್ಯದಲ್ಲಿ ನಿರಾಶೆ ಅನುಭವಿಸಿತು.


ಬಾರ್ತೊಲೊಮೆ ಒಗ್ಬೆಚೆ ಹೊಡೆದ ಏಕೈಕ ಗೋಲಿನ ಬಲದಿಂದ ಹೈದರಾಬಾದ್ ಫುಟ್‌ಬಾಲ್ ಕ್ಲಬ್ ತಂಡವು ಬಿಎಫ್‌ಸಿ ವಿರುದ್ಧ ಗೆದ್ದಿತು. ಪಂದ್ಯದ ಆರಂಭದಲ್ಲೇ ಆಕ್ರಮಣಕ್ಕೆ ಮುಂದಾದ ಹೈದರಾಬಾದ್ ಮೊದಲ ನಿಮಿಷದಲ್ಲೇ ಬಿಎಫ್‌ಸಿಯ ಆವರಣಕ್ಕೆ ನುಗ್ಗಿ ಆತಂಕ ಸೃಷ್ಟಿಸಿತು. ಏಳನೇ ನಿಮಿಷದಲ್ಲಿ ಬಾರ್ತೊಲೊಮೆ ಒಗ್ಬೆಚೆ ಗೋಲು ಗಳಿಸಿ ಮುನ್ನಡೆ ತಂದು ಕೊಟ್ಟರು.

ಎಡಭಾಗದಲ್ಲಿ ಅಮೋಘ ಆಟ ಪ್ರದರ್ಶಿಸಿದ ಆಕಾಶ್ ಮಿಶ್ರಾ ಬಿಎಫ್‌ಸಿಯ ಡಿಫೆಂಡರ್‌ನನ್ನು ಹಿಂದಿಕ್ಕಿ ಚೆಂಡಿನೊಂದಿಗೆ ಧಾವಿಸಿದರು. ನಂತರ ಬಾರ್ತೊಲೊಮೆ ಅವರಿಗೆ ಪಾಸ್ ನೀಡಿದರು. ಅವರು ಚೆಂಡನ್ನು ನಿಯಂತ್ರಿಸಿ ಬಲಗಾಲಲ್ಲಿ ಒದ್ದು ಗೋಲುಪೆಟ್ಟಿಗೆಯೊಳಗೆ ಸೇರಿಸಿದರು.

ಮುಂಬೈ ಸಿಟಿ–ಜೆಮ್ಷೆಡ್‌ಪುರ್ ಮುಖಾಮುಖಿ: ಮಡಗಾಂಗ್‌ನಲ್ಲಿ ಗುರುವಾರ ನಡೆಯಲಿರುವ ಹಣಾಹಣಿಯಲ್ಲಿ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ಮತ್ತು ಜೆಮ್ಷೆಡ್‌ಪುರ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಹೊಸ ಕೋಚ್ ಡೆಸ್ ಬಕಿಂಗ್‌ಹ್ಯಾಂ ಅವರ ಮಾರ್ಗದರ್ಶನದಲ್ಲಿ ಮುಂಬೈ ತಂಡ ಉತ್ತಮ ಆರಂಭ ಕಂಡಿದೆ. ಹೈದರಾಬಾದ್ ಎಫ್‌ಸಿಗೆ ಮಣಿದ ನಂತರ ಸತತ ಎರಡು ಪಂದ್ಯಗಳಲ್ಲಿ ಜಯ ಗಳಿಸಿತ್ತು. ಎಟಿಕೆ ಮೋಹನ್ ಬಾಗನ್ ವಿರುದ್ಧದ ಪಂದ್ಯದಲ್ಲಿ 5–1ರಿಂದ ಗೆದ್ದು ಭರವಸೆಯಲ್ಲಿದೆ. ಹಿಂದಿನ ಎರಡು ಪಂದ್ಯಗಳಲ್ಲಿ ಎರಡು ಗೋಲುಗಳನ್ನು ಮಾತ್ರ ಬಿಟ್ಟುಕೊಟ್ಟಿದೆ.

ಓವೆನ್ ಕೊಯ್ಲೆ ಮಾರ್ಗದರ್ಶನದಲ್ಲಿ ಜೆಮ್ಷೆಡ್‌ಪುರ ಕೂಡ ಉತ್ತಮ ಸಾಧನೆ ಮಾಡುತ್ತಿದ್ದು ನಾಲ್ಕು ಪಂದ್ಯಗಳಿಂದ ಎಂಟು ಪಾಯಿಂಟ್ ಕಲೆ ಹಾಕಿದೆ. 2 ಪಂದ್ಯಗಳಲ್ಲಿ ಗೆದ್ದಿರುವ ತಂಡ ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದೆ.


ಗೋಲು ಗಳಿಸಿದ ಬಾರ್ತೊಲೊಮೆ ಒಗ್ಬೆಚೆ ಸಂಭ್ರಮ –ಐಎಸ್‌ಎಲ್ ಚಿತ್ರ

ಸಂಕ್ಷಿಪ್ತ ಸುದ್ದಿ

ಟೆಸ್ಟ್ ರ‍್ಯಾಂಕಿಂಗ್: ಮಯಂಕ್‌ಗೆ ಬಡ್ತಿ

ದುಬೈ(ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಕರ್ನಾಟಕದ ಮಯಂಕ್ ಅಗರವಾಲ್ ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಭರ್ಜರಿ ಜಿಗಿತದ ಸಾಧನೆ ಮಾಡಿದ್ದಾರೆ. ಬುಧವಾರ ಪ್ರಕಟವಾದ ಐಸಿಸಿಯ ಬ್ಯಾಟರ್‌ಗಳ ಪಟ್ಟಿಯಲ್ಲಿ ಒಟ್ಟು 30 ಸ್ಥಾನಗಳ ಬಡ್ತಿ ಗಳಿಸಿರುವ ಮಯಂಕ್ 11ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಬೌಲರ್‌ಗಳಲ್ಲಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಎರಡನೇ ಸ್ಥಾನಕ್ಕೇರಿದ್ದಾರೆ.


ಮಯಂಕ್

ಆಹಾನ್ ಮಿಂಚು

ಬೆಂಗಳೂರು: ಆಹಾನ್ ಪೊದ್ದಾರ್ (82) ಹಾಗೂ ಪಾರ್ಥ್ ವತ್ಸ್ (ಔಟಾಗದೆ 81) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಹರಿಯಾಣ ತಂಡವು 19 ವರ್ಷದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಉತ್ತಮ ಮೊತ್ತ ಪೇರಿಸಿತು. ಆಂಧ್ರಪ್ರದೇಶದ ವಿಜಯನಗರಂನಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಬುಧವಾರ ಎರಡನೇ ಇನಿಂಗ್ಸ್‌ನಲ್ಲಿ ಹರಿಯಾಣ 65 ಓವರ್‌ಗಳಲ್ಲಿ 235 ರನ್ ಗಳಿಸಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಕರ್ನಾಟಕ 27 ಓವರ್‌ಗಳಲ್ಲಿ 65 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿದೆ.